ಸಂಪುಟ: 13 Volume | ಸಂಚಿಕೆ: 331 Issue | ಪುಟಗಳು 08 Pages | ಶನಿವಾರ 21 ಫೆಬ್ರವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

**ಬೆಳಗು**
ಶಾಲೆಯಲ್ಲಿ ಕಲಿತದ್ದು ಮರೆತ ಬಳಿಕವೂ ನೆನಪಲ್ಲಿ ಉಳಿಯುವುದೇ ಶಿಕ್ಷಣ.
–ಆಲ್ಬರ್ಟ್ ಐನ್‌ಸ್ಟೀನ್

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಮಾ.7 ಕ್ಕೆ ರಾಷ್ಟ್ರೀಯ ಹೆದ್ದಾರಿ ಬಂದ್ 6
ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ: ಸಚಿವ 7
ಇಂದಿನಿಂದ ಸಫಾರಿ ಪುನಾರಂಭ: ಖಂಡ್ರೆ 8



ಮುದಗಲ್: ರಾಜ್ಯದಲ್ಲಿ ಕುಂಬಾರ ಸಮುದಾಯ ಅತ್ಯಂತ ಹಿಂದುಳಿದಿದೆ ಅಧಿಕಾರ ದೊರತರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ಕುಂಬಾರ ಕ್ಷೇಮಾಭಿವೃದ್ಧಿ ಸಂಘ ಮುದಗಲ್ ಘಟಕದ ಅಧ್ಯಕ್ಷ ಕುಂಬಾರ ಚನ್ನಬಸವ ಚಕ್ರಸಾಲಿ ಶುಕ್ರವಾರ ಹೇಳಿದರು. ಪುರಸಭೆ, ನಾಡ ಕಾರ್ಯಲಯ, ಪಶು ಆಸ್ಪತ್ರೆ, ಪ್ರಥಮ ದರ್ಜೆ ಕಾಲೇಜ್, ವಸತಿ ನಿಲಯ, ಸಮುದಾಯ ಆರೋಗ್ಯ ಕೇಂದ್ರ, ಮಾಜಿ ಶಾಸಕರ ಕಾರ್ಯಲಯ, ಸೇರಿದಂತೆ ವಿವಿಧಡೆ ಸರ್ವಜ್ಞ ರವರ 506ನೇ ಜಯಂತಿ ನಿಮಿತ್ಯ ಅವರ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿದರು.

## 12 ವರ್ಷ ಸೇವೆ, ಶ್ವಾನಗಳ ನಿವೃತ್ತಿ



ವಿಜಯಪುರ: 12 ವರ್ಷಗಳ ಸೇವೆ ಸಲ್ಲಿಸಿದ ಎರಡು ಪೊಲೀಸ್ ಶ್ವಾನಗಳ ನಿವೃತ್ತಿ; ಎರಡು ಹೊಸ ಶ್ವಾನಗಳ ಸೇರ್ಪಡೆ. ವಿಜಯಪುರ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಲಕ್ಷ್ಮಣ ನಿಂಬರಗಿ ಅವರು 12 ವರ್ಷಗಳಿಗೂ ಹೆಚ್ಚು ಕಾಲ ಇಲಾಖೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ರಕ್ಷಾ ಮತ್ತು ಸ್ಟೆಲ್ಲಾ ಎಂಬ ಎರಡು ಪೊಲೀಸ್ ಶ್ವಾನಗಳ ನಿವೃತ್ತಿಯನ್ನು ಘೋಷಿಸಿದ್ದಾರೆ. ಈ ವೇಳೆ ಮಾತನಾಡಿ, ಸ್ಟೆಲ್ಲಾ 600 ಕ್ಕೂ ಹೆಚ್ಚು ಅಪರಾಧ ಪ್ರಕರಣಗಳಲ್ಲಿ ಮಹತ್ವದ ಪಾತ್ರವಹಿಸಿ, 30 ಕ್ಕೂ ಹೆಚ್ಚು ಆರೋಪಿಗಳನ್ನು ಪತ್ತೆಹಚ್ಚಲು ಇಲಾಖೆಗೆ ನೆರವಾದದ್ದು ಶ್ಲಾಘನೀಯ ಎಂದಿದ್ದಾರೆ. ಈ ಎರಡೂ ಶ್ವಾನಗಳ ನಿವೃತ್ತಿ ಇಲಾಖೆಗೆ ಭಾವನಾತ್ಮಕ ಕ್ಷಣವಾಗಿದ್ದು, ಅವುಗಳ ನಿಷ್ಠಾವಂತ ಸೇವೆಯನ್ನು ಸ್ಮರಿಸಲಾಯಿತು.

## ಕಂಬಳೇಶ್ವರ ಮಠಕ್ಕೆ ಗವಿಮಠದ ಶ್ರೀ ಭೇಟಿ





ಚಿತ್ತಾಪುರ: ಕೊಪ್ಪಳ ಗವಿಮಠದ ಅಭಿನವ ಶ್ರೀ ಗವಿಸಿದ್ದೇಶ್ವರ ಮಹಾಸ್ವಾಮಿಗಳು ಫೆ.23 ರಂದು ಮಧ್ಯಾಹ್ನ 12 ಗಂಟೆಗೆ ಕಂಬಳೇಶ್ವರ ಮಠಕ್ಕೆ ಭೇಟಿ ನೀಡಲಿದ್ದಾರೆ ಎಂದು ಪೀಠಾಧಿಪತಿ ಸೋಮಶೇಖರ ಶಿವಾಚಾರ್ಯರು ತಿಳಿಸಿದ್ದಾರೆ.

ಅಂದು ಕಂಬಳೇಶ್ವರ ಕರ್ತೃ ಗದ್ದುಗೆಗೆ ಪೂಜೆಸಲ್ಲಿಸಿ ದರ್ಶನ ಪಡೆಯಲಿದ್ದಾರೆ. ಬಳಿಕ ಸೋಮಶೇಖರ ಶಿವಾಚಾರ್ಯರು ಗವಿಮಠದ ಶ್ರೀಗಳಿಗೆ ನಾಗಾವಿ ನಾಡಿನ ಪುಸ್ತಕಗಳು ನೀಡಿ ಸತ್ಕರಿಸಿ ಗೌರವಿಸಲಿದ್ದಾರೆ. ಹೀಗಾಗಿ ತಾಲೂಕಿನ ಭಕ್ತಾದಿಗಳು ಹಾಗೂ ಗಣ್ಯರು ಆಗಮಿಸಿ ಗವಿಸಿದ್ದೇಶ್ವರ ಸ್ವಾಮೀಜಿ ಅವರ ದರ್ಶನಾಶೀರ್ವಾದ ಪಡೆದು ಪುನೀತರಾಗಬೇಕು ಎಂದು ಮನವಿ ಮಾಡಿದ್ದಾರೆ.

## ಕನ್ನಡ ಸಾಹಿತ್ಯ ಸಮ್ಮೇಳನ ಇಂದು

• ಮಲ್ಲಮ್ಮ ನುಡಿ ವಾರ್ತೆ ಯಡ್ರಾಮಿ



ಪಟ್ಟಣದಲ್ಲಿ ಕನ್ನಡ ನುಡಿ ನಮನ ಜಾತ್ರೆ ಅದ್ದೂರಿಯಾಗಿ ಫೆ. 21 ರಂದು ನಡೆಸಲಾಗುವುದು ಎಂದು ಯಡ್ರಾಮಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಗಪ್ಪ ಸಜ್ಜನ ಅವರು ಕನ್ನಡ ನಾಡಿನ ಕನ್ನಡ ಅಭಿಮಾನಿಗಳು ಬಂದು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ತಿಳಿಸಿದ್ದಾರೆ. ಇಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ಪ್ರಮುಖ ಬೀದಿಗಳ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಸಮ್ಮೇಳನದ ಅಧ್ಯಕ್ಷರು ಹಾಗೂ ಪರಮ ಪೂಜ್ಯರ ಸಮ್ಮುಖದಲ್ಲಿ ಮೆರವಣಿಗೆ ಕಾರ್ಯಕ್ರಮ ವಿದೆ. ಪಬ್ಲಿಕ್ ಶಾಲಾ ಆವರಣದಲ್ಲಿ 10 ಗಂಟೆಗೆ ಕೆ.ಕೆ.ಆರ್.ಡಿ.ಬಿ ಅಧ್ಯಕ್ಷ ಹಾಗೂ ಶಾಸಕ ಡಾ.ಅಜಯ್ ಧರ್ಮಸಿಂಗ್ ಉದ್ಘಾಟಿಸುವರು. ನಂತರ ಯಡ್ರಾಮಿ ತಾಲೂಕು ಕನ್ನಡ ಸಮ್ಮೇಳನದ ಸರ್ವಾಧ್ಯಕ್ಷ ಅಮೃತ್ ಡಿ ದೊಡ್ಮನಿ ಭಾಷಣವಿದೆ ಎಂದು ವಿವರಿಸಿದ್ದಾರೆ. ಜರುಗುವುದು. ಮಧ್ಯಾಹ್ನ 1 ಗಂಟೆಗೆ ಚಿಂತನ ಮಂಥನ ಕಾರ್ಯಕ್ರಮ ನಡೆಯಲಿದೆ. 2 ಗಂಟೆಗೆ ಕವಿಗೋಷ್ಠಿ, 4 ಗಂಟೆಗೆ ನಿರ್ಣಯ ಮಂಡನೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ ಎಂದಿದ್ದಾರೆ.

## ಉಗ್ರನ ಬಗ್ಗೆ ಸುಳಿವು ನೀಡಿದ್ರೆ 5 ಲಕ್ಷ!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಶಂಕಿತ ಉಗ್ರರ ಪ್ರಕರಣದಲ್ಲಿ ಎ–2 ಆರೋಪಿಯಾಗಿ ಸದ್ಯ ತಲೆಮರೆಸಿಕೊಂಡಿರುವ ಉಗ್ರ ಜುನೈದ್ ಎಂಬಾತನ ಸುಳಿವು ನೀಡಿದವರಿಗೆ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) 5 ಲಕ್ಷ ರೂ. ಬಂಪರ್ ಬಹುಮಾನವನ್ನು ಘೋಷಣೆ ಮಾಡಿದೆ. ಕಳೆದ ನಾಲ್ಕು ವರ್ಷಗಳಿಂದ ತಲೆಮರೆಸಿಕೊಂಡಿರುವ ಜುನೈದ್ ಎಂಬ ಈತ ಒಂಬತ್ತು ಬೇರೆ ಬೇರೆ ಹೆಸರುಗಳನ್ನು ಬಳಸಿ ತಪ್ಪಿಸಿಕೊಂಡಿದ್ದಾನೆ. ಜುನೇದ್ ಅಹದ್, ಜುನೈದ್, ಜೆಡಿ, ಜಮ್ಶೇದಾ, ಜಾನ್, ಸುಹಾನ್, ಡಿಜೆ ರಿಟ್ಸ, ಜಮೀಲಾ, ಜಾನು ಸೇರಿದಂತೆ ಹಲವು ಹೆಸರುಗಳನ್ನು ಬಳಸಿದ್ದಾನೆ. ಎನ್‌ಐಎ ಈಗ ನಗರದ ಪ್ರಮುಖ ಸ್ಥಳಗಳಲ್ಲಿ ಜುನೈದ್ನ ಫೋಟೋಗಳೊಂದಿಗೆ ಪೋಸ್ಟರ್‌ಗಳನ್ನು ಅಂಟಿಸಿದೆ. ಮಾಹಿತಿ ನೀಡುವವರಿಗೆ 5 ಲಕ್ಷ ರೂಪಾಯಿ ಬಹುಮಾನ ಘೋಷಿಸಿದೆ.

# ಗ್ರಾಹಕರಿಗೆ ವಿದ್ಯುತ್ ಶಾಕ್!

## ಏಪ್ರಿಲ್ 1ರಿಂದ ವಿದ್ಯುತ್ ದರ ಹೆಚ್ಚಳ | ಕೈಗಾರಿಕಾ, ವಾಣಿಜ್ಯ ಬಳಕೆಗೂ ಬರೆ ಸಾಧ್ಯತೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಏಪ್ರಿಲ್ 1ರಿಂದ ವಿದ್ಯುತ್ ದರ ಹೆಚ್ಚಾಗಲಿದ್ದು ಇಲಾಖೆಯು ಗ್ರಾಹಕರಿಗೇ ಶಾಕ್ ನೀಡಿದೆ.

ಪ್ರತಿ ಯೂನಿಟ್‌ಗೆ 12ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸಲು ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗ(ಕೆಇಆರ್ಸಿ) ತೀರ್ಮಾನಿಸಿದೆ. ಈಗಾಗಲೇ 2025–26, 2026–27 ಮತ್ತು 2027–28ನೇ ಆರ್ಥಿಕ ವರ್ಷಗಳಿಗೆ ದರ ನಿಗದಿ ಮಾಡಲಾಗಿತ್ತು. ಆದರೆ, ಈಗ ಎದುರಾಗಿರುವ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ಕೆಇಆರ್ಸಿ ಚಿಂತನೆ ನಡೆಸಿದೆ.

**ಜೇಬಿಗೆ ಕತ್ತರಿ ಖಚಿತ:** ನಾಡಿನ ಜನರ ಅಭಿಪ್ರಾಯ ಸಂಗ್ರಹಿಸಿದ ಬಳಿಕ 2026ರ ಏಪ್ರಿಲ್ 1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವಿದ್ಯುತ್ ದರ ಪ್ರಕಟವಾಗುವ ಸಾಧ್ಯತೆಯಿದೆ. ಇದು ಜಾರಿಯಾದರೆ ಗ್ರಾಹಕರ ಜೇಬಿಗೆ ಕತ್ತರಿ ಬೀಳುವುದು ಖಚಿತ ಎಂದು ವಿಶ್ಲೇಷಿಸಲಾಗಿದೆ.

**ಏರಿಕೆಯ ವಿವರ..?:** ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಮುಂದೆ ಎಸ್ಕಾಂಗಳು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, ಏಪ್ರಿಲ್ 1, 2026ರಿಂದ ವಿದ್ಯುತ್ ದರದಲ್ಲಿ ಏರಿಕೆ ಆಗುವ ಸಾಧ್ಯತೆ ಇದೆ. ಪ್ರತಿ ಯೂನಿಟ್‌ಗೆ ಸರಾಸರಿ 12 ರಿಂದ 15 ಪೈಸೆ ಏರಿಕೆಯಾಗಬಹುದು.

### 64 ಪೈಸೆ ವಿದ್ಯುತ್ ದರ ಹೆಚ್ಚಳ..?

ರಾಜ್ಯದ ಐದು ಎಸ್ಕಾಂಗಳು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, 2026–27ಗೆ ಸರಾಸರಿ 64 ಪೈಸೆಯಷ್ಟು ದರ ಏರಿ–ಕೆಗೆ ವಿನಂತಿಸಲಾಗಿದೆ. ಆದರೆ ಕೆಲವು ವರ್ಗಗಳಲ್ಲಿ ಇದು 67ರಿಂದ 99 ಪೈಸೆಗಳವರೆಗೆ ಏರಿಕೆಯಾಗಬಹುದು ಎಂಬ ಸೂಚನೆಗಳಿವೆ. ದಿನಬಳಕೆ (ಡೊಮೆಸ್ಟಿಕ್) ವಿದ್ಯುತ್ ಬಳಕೆಯಲ್ಲಿ ಸ್ವಲ್ಪ ಏರಿಕೆಯಾಗಬಹುದು. ಕೈಗಾರಿಕಾ, ವಾಣಿಜ್ಯ ವಲಯದಲ್ಲಿ ಬಳಸುವ ವಿದ್ಯುತ್ ದರದಲ್ಲೂ ಹೆಚ್ಚಳ ಸಾಧ್ಯತೆ ಇದೆ.

### ದರ ಏರಿಕೆಗೆ ಕಾರಣ ಇದು

ಹಲವು ವರ್ಗಗಳಲ್ಲಿ ಇದು ಹೆಚ್ಚಾಗಬಹುದು. ಫಿಕ್ಸೆಡ್ ಚಾರ್ಜ್‌ನಲ್ಲೂ 10 ರಿಂದ 20 ರೂ.ವರೆಗೆ ಏರಿಕೆ ಸಾಧ್ಯತೆ ಇದೆ. ವಿದ್ಯುತ್ ಸರಬರಾಜು ಕಂಪನಿಗಳು ಆದಾಯ ಕೊರತೆಯನ್ನು ಎದುರಿಸುತ್ತಿವೆ. ರಾಜ್ಯದ ಎಲ್ಲಾ ಎಸ್ಕಾಂಗಳು ಸೇರಿ 4,500 ಕೋಟಿ ರೂ. ನಷ್ಟದಲ್ಲಿವೆ. ಇದರಲ್ಲಿ ಬೆಸ್ಕಾಂ ಒಂದರಲ್ಲೇ 2024–25ನೇ ಸಾಲಿನಲ್ಲಿ 2,800 ಕೋಟಿಗೂ ಹೆಚ್ಚುನಷ್ಟವಾಗಿದೆ. ಇದಕ್ಕೆ ಕಂಪನಿಗಳು ದರ ಏರಿಕೆಗೆ ಪಟ್ಟು ಹಿಡಿದಿವೆ.



### ನಷ್ಟ ಸರಿದೂಗಿಸಲು ಹೆಚ್ಚಳ

ಕಳೆದ ವರ್ಷ ಮಾರ್ಚ್‌ನಲ್ಲಿ ದರ ಪರಿಷ್ಕರಣೆ ಮಾಡಿದಾಗ ಕೆಇಆರ್‌ಸಿ ಅಂದಾಜು ಮಾಡಿದ್ದ ಲೆಕ್ಕಾಚಾರದಲ್ಲಿ ವೆಚ್ಚ ಹೆಚ್ಚಾಗಿದ್ದರೆ, ಆದಾಯದಲ್ಲಿ ಖೋತಾ ಆಗಿದೆ. ಈ ನಡುವೆ ಸಮತೋಲನ ಕಾಪಾಡಲು ದರ ಪರಿಷ್ಕರಣೆ ಮಾಡುವ ಅಗತ್ಯವಿದೆ ಎಂದು ಎಸ್ಕಾಂಗಳು ಕೆಇಆರ್ಸಿಗೆ ಸಲ್ಲಿಸಿರುವ ವರದಿಯಲ್ಲಿ ಉಲ್ಲೇಖಿಸಿವೆ. ಈ ಹಿಂದಿನ ವರ್ಷದ ನಷ್ಟ ಸರಿದೂಗಿಸಲು ದರ ಏರಿಕೆಯೇ ಕೆಇಆರ್‌ಸಿಗೆ ಇರುವ ಮಾರ್ಗ ಎನ್ನಲಾಗುತ್ತಿದೆ.

### ಆಕ್ಷೇಪಗಳಿಗೂ ಆಹ್ವಾನ

ಬೆಸ್ಕಾಂ ಸೇರಿದಂತೆ ರಾಜ್ಯದ ವಿವಿಧ ಎಸ್ಕಾಂಗಳು 2024–25ನೇ ಸಾಲಿನ ಕಾರ್ಯನಿರ್ವಹಣಾ ವರದಿಯನ್ನು ಮತ್ತು ದರ ಏರಿಕೆಯ ಪ್ರಸ್ತಾವನೆಯನ್ನು ಕೆಇಆರ್‌ಸಿಗೆ ಸಲ್ಲಿಸಿವೆ. ಆಯೋಗವು ಸಾರ್ವಜನಿಕರ ಅಹವಾಲು ಮತ್ತು ಆಕ್ಷೇಪಣೆಗಳನ್ನು ಆಲಿಸಲು ಮುಂದಾಗಿದೆ.

### ಅಂತರ ಸರಿದೂಗಿಸಲು!

2025ರ ಮಾರ್ಚ್‌ನಲ್ಲಿ ವಿದ್ಯುತ್ ನಿಯಂತ್ರಣ ಆಯೋಗ ಪ್ರತಿ ಯೂನಿಟ್‌ಗೆ 36 ಪೈಸೆ ದರ ಹೆಚ್ಚಿಸಿತ್ತು. ವಾಣಿಜ್ಯ, ಕೈಗಾರಿಕಾ ಗ್ರಾಹಕರಿಗೆ ದರ ಹೆಚ್ಚಿಸಿ ತಮ್ಮ 4,620 ಕೋಟಿ ಆದಾಯದ ಅಂತರ ಸರಿದೂಗಿಸಲು ವಿದ್ಯುತ್ ಸರಬರಾಜು ನಿಗಮ, ರಾಜ್ಯ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಕೋರಿದೆ ಎನ್ನಲಾಗಿದೆ.

## ದಿಲ್ಲಿಯಲ್ಲಿ ಡಿಕೆ.ಶಿವಕುಮಾರ್ ಹೈ ವೋಲ್ಟೇಜ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಅಸ್ಸಾಂ ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ದೆಹಲಿ ಪ್ರವಾಸದಲ್ಲಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಐಸಿಸಿ ಮುಖಂಡರನ್ನು ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ. ಈ ನಡುವೆ ಸಿಎಂ ಸಿದ್ದರಾಮಯ್ಯ ಅವರ ಆಪ್ತರಾಗಿರುವ ಸಚಿವ ಸತೀಶ್ ಜಾರಕಿಹೊಳಿ ಕೂಡ ದೆಹಲಿ ಪ್ರವಾಸದಲ್ಲಿರುವುದು ಕುತೂಹಲ ಕೆರಳಿಸಿದೆ.

ರಾಜ್ಯ ರಾಜಕೀಯದಲ್ಲಿ ಅಧಿಕಾರ ಹಂಚಿಕೆಯ ಜಿದ್ದಾಜಿದ್ದಿ ನಡೆಯುತ್ತಲೇ ಇದೆ. ಸಿಎಂ ಸಿದ್ದರಾಮಯ್ಯ ಅವರು ಬಜೆಟ್ ಮಂಡನೆ ಬಳಿಕವೂ ಹುದ್ದೆ ತ್ಯಾಗ ಮಾಡಲು ನಿರಾಕರಿಸಿ ಪಟ್ಟಾಗಿ ಕುಳಿತಿದ್ದಾರೆ. ಒಂದಾದರ ಮೇಲೆ ಒಂದರಂತೆ ಗಡುವು ನೀಡುತ್ತಿರುವ ಡಿ.ಕೆ.ಶಿವಕುಮಾರ್ ಶತಾಯಗತಾಯ ತಮಗೆ ಮುಖ್ಯಮಂತ್ರಿ ಹುದ್ದೆ ಸಿಗಲೇಬೇಕು ಎಂದು ಪಟ್ಟು ಹಿಡಿದಿದ್ದಾರೆ. ಈ ನಿಟ್ಟಿನಲ್ಲಿ ಹೈಕಮಾಂಡ್ ನಾಯಕರ ಮೇಲೆ ಮೇಲಿಂದ ಮೇಲೆ ಒತ್ತಡ ಹೇರುತ್ತಿದ್ದಾರೆ.

## ಭ್ರಷ್ಟ ರಾಜ್ಯ ಸರ್ಕಾರ: ಬಿಎಸ್‌ವೈ ಕಿಡಿ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು 2028ರ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಪಕ್ಷವು ಸ್ವತಂತ್ರವಾಗಿ ಅಧಿಕಾರಕ್ಕೆ ಬರುತ್ತದೆ ಎಂದು ಭವಿಷ್ಯನುಡಿದಿದ್ದಾರೆ.

ಬೆಂಗಳೂರಿನಲ್ಲಿ ನಡೆದ ರಾಜ್ಯ ಬಿಜೆಪಿ ಕಾರ್ಯಕಾರಿ ಸಭೆಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿ, ಕರ್ನಾಟಕದ ಭ್ರಷ್ಟ ಸರ್ಕಾರವನ್ನು ಅಧಿಕಾರದಿಂದ ದೂರ ಮಾಡುವ ಅಗತ್ಯವಿದೆ. ನಾವು ಮನಸ್ಸು ಮಾಡಿಟ್ಟು ಬದ್ಧತೆಯಿಂದ ಕೆಲಸ ಮಾಡಿದರೆ ಇದನ್ನು ಸಾಧಿಸಬಹುದು ಎಂದು ಹೇಳಿದ್ದಾರೆ.

82 ವರ್ಷದ ಬಿಜೆಪಿ ನಾಯಕ ಯಡಿಯೂರಪ್ಪ, ಮುಂದಿನ ಆರು ವರ್ಷಗಳಿಗೂ ಹೆಚ್ಚಿನ ಅವಧಿಗೆ ಕೆಲಸ ಮಾಡುವ ಶಕ್ತಿಯು ತಮ್ಮಲ್ಲಿದೆ. ದೇವರ ಇಚ್ಛೆಯಿದ್ದರೆ ರಾಜ್ಯದ ಎಲ್ಲೆಡೆ ಪ್ರವಾಸ ಮಾಡಲು ನಾನು ಸಿದ್ಧನಿದ್ದೇನೆ. ನಿಮ್ಮ ಪ್ರದೇಶಕ್ಕೂ ನಾನು ಬರುತ್ತೇನೆ ಎಂದು ತಿಳಿಸಿದ್ದಾರೆ.

## ಯಶಸ್ಸಿಗೆ ಬೇಕು ನಿರಂತರ ಅಧ್ಯಯನ



> ನಗರೇಶ್ವರ ಶಾಲೆಯ ಅಭಿವೃದ್ಧಿಗೆ ಇಬ್ಬರು ಎಂಎಲ್ಸಿಗಳು ತಮ್ಮ ಅನುದಾನದಲ್ಲಿ ತಲಾ 3 ಲಕ್ಷ ಸೇರಿ ಒಟ್ಟು 6 ಲಕ್ಷ ಅನುದಾನ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ನಾನು ವಯಕ್ತಿಕವಾಗಿ ಒತ್ತಾಯಿಸಿ, ಇಬ್ಬರು ಕಡೆಯಿಂದ ಸೇರಿ ಒಟ್ಟು 8 ಲಕ್ಷ ಅನುದಾನ ಕೊಡಿಸುತ್ತೇನೆ.
>
> –ರಾಜಶೇಖರ ಪಾಟೀಲ್
> ಮಾಜಿ ಸಚಿವ, ಹುಮನಾಬಾದ್

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ನಾಗರಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮತ್ತು ಸತತ ಪ್ರಯತ್ನ ಕೈಗೊಂಡಾಗ ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ನಗರೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಆವರಣದಲ್ಲಿ ಆಯೋಜಿಸಿದ್ದ ಶಾಲೆಯ ನೂತನ ಕಟ್ಟಡದ ವಾಸ್ತು ಪೂಜೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ,

ನಿತ್ಯ ಜೀವನದಲ್ಲಿ ಪಾಲಕ ಪೋಷಕರು ಅನೇಕ ಸಮಸ್ಯೆಗಳನ್ನು ಎದುರಿಸಿ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜತೆಗೆ ಉತ್ತಮ ಸಂಸ್ಕಾರಗಳನ್ನು ಕಲಿಸಿಕೊಡಬೇಕು ಎಂದು ತಿಳಿಸಿದ್ದಾರೆ.

ಕನ್ನಿಕಾ ಪರಮೇಶ್ವರಿ ಶಿಕ್ಷಣ ಸಂಸ್ಥೆಯ ಸಮಗ್ರ ಬೆಳವಣಿಗೆಗೆ ಪೂರಕವಾಗಿ ಮಾಜಿ ಸಚಿವ ಬಸವರಾಜ ಪಾಟೀಲ್ ಅವರು ಸೇರಿ ನನ್ನ ಆಡಳಿತ ಅವಧಿಯಲ್ಲಿ ಎಲ್ಲ ತರಹದ ಸಹಕಾರ ನೀಡಲಾಗಿದೆ. ಜತೆಗೆ ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ ಪಾಟೀಲ್ ಹಾಗೂ ಭೀಮರಾವ ಪಾಟೀಲ್ ಅವರು ಕೂಡಾ ತಮ್ಮ ಶಿಕ್ಷಣ ಸಂಸ್ಥೆಗೆ ಅನೇಕ ಸೌಲಭ್ಯಗಳನ್ನು ನೀಡಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಮಾತನಾಡಿ, ಈ ಶಾಲೆಯ ಅಭಿವೃದ್ಧಿಗೆ ಇಬ್ಬರು ಎಂಎಲ್ಸಿಗಳು ಸೇರಿ ಒಟ್ಟು 6 ಲಕ್ಷ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದ್ದಾರೆ. ಎಂಎಲ್ಸಿ ಸದಸ್ಯ ಭೀಮರಾವ ಪಾಟೀಲ್, ನಾಗರಾಜ ರಘೋಜಿ, ದತ್ತಕುಮಾರ ಚಿದ್ರಿ, ಬಾಲಚಂದ್ರ ಜಾಜಿ, ಲಕ್ಷ್ಮಣ ಹಣಕುಣಿ, ಪ್ರೇಮಕುಮಾರ ಜಾಜಿ ಸೇರಿ ಅನೇಕರಿದ್ದರು.

## ತಾಯಿ ಮರಣಕ್ಕೆ ರಕ್ತ ಹೀನತೆ ಕಾರಣ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಅಣದೂರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಠಾತ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬಳಿಕ ಜಿಲ್ಲಾಧಿಕಾರಿಗಳು ಗ್ರಾಮದ ಕೆಲ ಮನೆಗಳಿಗೆ ಭೇಟಿ ನೀಡಿ ಮಹಿಳೆಯರ ಆರೋಗ್ಯ ವಿಚಾರಿಸಿ ಆರೋಗ್ಯ ಕೇಂದ್ರದಿಂದ ದೊರಕುತ್ತಿರುವ ಆರೋಗ್ಯ ಸೌಲಭ್ಯಗಳ ಬಗ್ಗೆ, ರಕ್ತ ಹೀನತೆ ಕುರಿತು ಮಹಿಳೆಯರ ಜತೆ ಚರ್ಚಿಸಿದ್ದಾರೆ.

ಜಿಲ್ಲೆಯಲ್ಲಿ ತಾಯಿ ಮರಣಕ್ಕೆ ರಕ್ತಹೀನತೆಯ ಪ್ರಮುಖ ಕಾರಣ ಆಗಿರುವುದರಿಂದ ಗರ್ಭಿಣಿ ಸ್ತ್ರೀಯರು ಕಡ್ಡಾಯವಾಗಿ ಹತ್ತಿರದ ಆರೋಗ್ಯ ಕೇಂದ್ರದಲ್ಲಿ ನೋಂದಣಿ ಮಾಡಿಕೊಂಡು ತಾಯಿ ಕಾರ್ಡ್ ಪಡೆಯಬೇಕೆಂದು ತಿಳಿಸಿದ್ದಾರೆ.

ಜಿಲ್ಲೆಯ ಎಲ್ಲಾ ವೈದ್ಯಾಧಿಕಾರಿಗಳು ಹಾಗೂ ಆರೋಗ್ಯ ಕಾರ್ಯಕರ್ತೆಯರು ರಕ್ತ ಹೀನತೆಯ ಕುರಿತಂತೆ ಎಲ್ಲಾ ಮಹಿಳೆಯರಲ್ಲಿ ಹೆಚ್ಚೆಚ್ಚು ಜಾಗೃತಿ ಪ್ರಚಾರ ಮೂಢಿಸಬೇಕೆಂದು ಜಿಲ್ಲಾಧಿಕಾರಿ ಸೂಚಿಸಿದ್ದಾರೆ. ಜಿಲ್ಲೆಯಲ್ಲಿ ಗರ್ಭಿಣಿಯರಲ್ಲಿ, ಶಾಲಾ–ಕಾಲೇಜು ಮಕ್ಕಳಲ್ಲಿ ರಕ್ತಹೀನತೆ ತಡೆಯಲು ವಿವಿಧ ಯೋಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹಮ್ಮಿಕೊಳ್ಳಲಾಗುತ್ತಿದೆ ಎಂದು ಆರ್.ಸಿ.ಎಚ್. ಅಧಿಕಾರಿ ಡಾ.ಸಿವಶಂಕರ ಬಿ. ತಿಳಿಸಿದ್ದಾರೆ.



ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಅಣದೂರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಠಾತ್ ಭೇಟಿ ನೀಡಿ ಪರಿಶೀಲನೆ

**ಡಿ.ಕೆ.ಶಿವಕುಮಾರ್ ಅವರ ಮೈ ಬ್ರದರ್ ಪಾಲಿಸಿಯಿಂದ ಹೀಗಾಗುತ್ತದೆ. ಮುಸಲ್ಮಾನ ಬಂಧುಗಳಿಗೆ ಮಾತ್ರ ರಕ್ಷಣೆ ಕೊಡುವುದಾಗಿ ಘೋಷಿಸಿ: ಎನ್.ರವಿಕುಮಾರ್**

# ಬೀದಿನಾಯಿಗಳ ಸೆರೆ ಕಾರ್ಯಾಚರಣೆ



ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:

ಪಟ್ಟಣದಲ್ಲಿ ಮಿತಿಮೀರಿದ್ದ ಬೀದಿನಾಯಿಗಳ ಹಾವಳಿ ತಡೆಗಟ್ಟಲು ಪುರಸಭೆ ವತಿಯಿಂದ ಶುಕ್ರವಾರ ಭರ್ಜರಿ ಕಾರ್ಯಾಚರಣೆ ನಡೆಸಲಾಯಿತು.

ಕಳೆದ ಕೆಲ ತಿಂಗಳಿಂದ ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದು ಶಾಲಾ ಮಕ್ಕಳಿಗೆ, ಪಾದಾಚಾರಿಗಳಿಗೆ, ವಾಹನ ಸವಾರರಿಗೆ ತಲೆನೋವಾಗಿ ಪರಿಣಮಿಸಿತ್ತು. ಈ ಕುರಿತು ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿಬಂದಿದ್ದವು. ಈ ಹಿನ್ನೆಲೆಯಲ್ಲಿ ಎಚ್ಚೆತ್ತ ಪುರಸಭೆ ಆಡಳಿತ, ಪರಿಣಿತರ ತಂಡದೊಂದಿಗೆ ಪಟ್ಟಣದ ಮಾರುಕಟ್ಟೆ, ಬಸ್ ನಿಲ್ದಾಣ ಹಾಗೂ ಜನನಿಬಿಡ ರಸ್ತೆಗಳಲ್ಲಿ ಬೀಡುಬಿಟ್ಟಿದ್ದ ನಾಯಿಗಳನ್ನು ಜಾಲ ಬೀಸಿ ಸೆರೆಹಿಡಿಯಿತು. ಸೆರೆಹಿಡಿದ ನಾಯಿಗಳನ್ನು ಸುರಕ್ಷಿತ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದ್ದು, ಅವುಗಳಿಗೆ ಸಂತಾನಶಕ್ತಿ ಹರಣ ಚಿಕಿತ್ಸೆ ಹಾಗೂ ರೇಬೀಸ್ ನಿರೋಧಕ ಲಸಿಕೆ ಹಾಕಿಸಲಾಗುವುದು ಎಂದು ಪುರಸಭೆ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ. ಹಂತ ಹಂತವಾಗಿ ಪಟ್ಟಣದ ಎಲ್ಲಾ ವಾರ್ಡ್‌ಗಳಲ್ಲೂ ಈ ಕಾರ್ಯಾಚರಣೆ ಮುಂದುವರಿಯಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

# ಛತ್ರಪತಿ ಶಿವಾಜಿಯ ಜೀವನ - ತತ್ವಾದರ್ಶ ಮಾದರಿ : ಪ್ರೀಯಾ



**ಮಲ್ಲಮ್ಮ ನುಡಿ ವಾರ್ತೆ ಔರಾದ(ಬಾ) :** ಪಟ್ಟಣದ ಹೃದಯಭಾಗದಲ್ಲಿರುವ ನಾಲಂದಾ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯ ಹಾಗೂ ನಾಲಂದಾ ಪ್ರೌಢ ಶಾಲೆಯಲ್ಲಿ ಗುರುವಾರ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ 396 ನೇ ಜಯಂತ್ಯೋತ್ಸವವು ಸರಳ ಹಾಗೂ ಅರ್ಥಪೂರ್ಣವಾಗಿ ಜರುಗಿತು. ಭಾವಚಿತ್ರಕ್ಕೆ ನಮಿಸಿ, ಪೂಜೆ ಸಲ್ಲಿಸಿದ ಸಹಶಿಕ್ಷಕಿ ಪ್ರೀಯಾ.ಎಮ್.ಬಿರಾದಾರ ಛತ್ರಪತಿ ಶಿವಾಜಿ ತನ್ನ ಜೀವನದಲ್ಲಿ ಅಳವಡಿಸಿಕೊಂಡಿದ್ದ ಆದರ್ಶ ತತ್ವಗಳು ಸರ್ವರಿಗೂ ಮಾದರಿಯಾಗಬೇಕು ಹಾಗೂ ಅವರ ಜೀವನ ಚರಿತ್ರೆ, ಆಚಾರ – ವಿಚಾರಗಳನ್ನು ಪ್ರತಿಯೊಬ್ಬರೂ ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದು ಸಹಶಿಕ್ಷಕಿ ಪ್ರೀಯಾ.ಎಮ್.ಬಿರಾದಾರ ಹೇಳಿದರು. ಅಂದಿನ ಕಾಲಘಟ್ಟದಲ್ಲಿ ದೇಶ ಕಟ್ಟುವಲ್ಲಿ ಶ್ರದ್ಧೆಯಿಂದ ಹೋರಾಡಿದ ಧೀಮಂತ ನಾಯಕ, ಹಾಗೂ ಶಿವಾಜಿಯ ಜಾಣ್ಮೆ ತನ್ನ ಆಡಳಿತಕ್ಕೆ ಪ್ರಮುಖವಾಗಿತ್ತು. ಜೀವನಕ್ಕೆ ಉತ್ತಮ ದಾರಿಗಳನ್ನು ಹುಡುಕುವ ಮುಂಚೆ ಸಂಕೋಚವನ್ನು ಬಿಡಬೇಕು ಹಾಗೂ ತಂದೆ – ತಾಯಿ ಮತ್ತು ಗುರುಗಳು ಹಾಕಿಕೊಟ್ಟ ಸನ್ಮಾರ್ಗದಲ್ಲಿ ನಡೆಯಬೇಕು. ಶಿವಾಜಿಯ ಶ್ರದ್ಧೆ ಹಾಗೂ ಧೈರ್ಯ ಎಲ್ಲರಿಗೂ ಪ್ರೇರಣೆಯಾಗಬೇಕು. ಅವರ ಆದರ್ಶ ಜೀವನದ ಮೌಲ್ಯಗಳನ್ನು ಇಂದಿನ ಪೀಳಿಗೆಯ ವಿದ್ಯಾರ್ಥಿಗಳು ಅನುಸರಿಸಿಕೊಂಡರೆ ಜೀವನ ಹಸನಾಗುತ್ತದೆ, ಇತಿಹಾಸಕ್ಕೆ ಶಿವಾಜಿ ನೀಡಿದ ಕೊಡುಗೆಗಳನ್ನು ಮನನ ಮಾಡಿಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಮಹಾವಿದ್ಯಾಲಯದ ಪ್ರಭಾರಿ ಪ್ರಾಂಶುಪಾಲ ನರಸಿಂಗರಾವ ಬೇಲ್ದಾರ್, ಪ್ರೌಢ ಶಾಲೆಯ ಮುಖ್ಯಗುರು ಜೆ.ಎಸ್.ಬಿರಾದಾರ, ಸಹ ಶಿಕ್ಷಕರಾದ ದಿಲೀಪಕುಮಾರ.ಕೆ.ಚಾಂದೋರಿ, ಪರಮೇಶ್ವರ.ಬಿ.ಬಿರಾದಾರ, ಅಸ್ಪಾಕ್ ಮಿಯ್ಯಾ.ಎಸ್.ಬೇಗ್, ದೈಹಿಕ ಶಿಕ್ಷಕ ಸುನೀಲ.ಬಿ.ವಾಗಮೋಡೆ ಸಹ ಶಿಕ್ಷಕೀಯರಾದ ಜ್ಯೋತಿ.ಡಿ.ಘೂಳೆ, ಮುಂಡೆ ಜ್ಞಾನೇಶ್ವರಿ.ಎಸ್ ಹಾಗೂ ಉಪನ್ಯಾಸಕರಾದ ಗುಣವಂತ ಮಾಶೇಟ್ಟೆ, ಪ್ರಕಾಶ ಬಸಲಿಂಗ, ದಿಲೀಪಕುಮಾರ ತಾರೆ, ರಾಜಕುಮಾರ ಗುರುಮೆ ಸೇರಿದಂತೆ ಬೋಧ– ಕೇತರ ಸಿಬ್ಬಂಧಿವರ್ಗದವರಾದ ಶಶಿಕಾಂತ ದಾಮಾ, ಎಮ್.ಡಿ ಉಮರ್ ಉಪಸ್ಥಿತರಿದ್ದರು. ಸಹಶಿಕ್ಷಕ ಮಲ್ಲಿಕಾರ್ಜುನ.ವ್ಹಿ.ಕೋಟೆ ಅಚ್ಚುಕಟ್ಟಾಗಿ ನಿರೂಪಿಸಿ, ವಂದಿಸಿದರು. ಮಕ್ಕಳೇಲ್ಲರೂ ಹಾಜರಿದ್ಧರು.

## ಪ್ರಶ್ನೆ ಮಾಡುವುದೇ ವಿಜ್ಞಾನದ ಮೊದಲ ಹೆಜ್ಜೆ

# ಕೆಂಭಾವಿಯಲ್ಲಿ ವಿಜ್ಞಾನ ವಸ್ತುಪ್ರದರ್ಶನ



ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:

ವಿಜ್ಞಾನ ಎನ್ನುವುದು ಕೇವಲ ಪಠ್ಯಪುಸ್ತಕಕ್ಕೆ ಸೀಮಿತವಾಗಬಾರದು. ಪ್ರತಿಯೊಂದು ಮಗುವಿನಲ್ಲೂ ಒಬ್ಬ ವಿಜ್ಞಾನಿ ಇರುತ್ತಾನೆ ಎಂದು ಪದವಿ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಭೋಗಪ್ಪ ಅಸ್ಕಿ ಹೇಳಿದರು.

ಪಟ್ಟಣದ ಜ್ಞಾನದೀಪ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆದ ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಚಿಣ್ಣರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು ಪ್ರಶ್ನೆ ಮಾಡುವುದನ್ನು ಕಲಿಯುವುದೇ ವಿಜ್ಞಾನದ ಮೊದಲ ಹೆಜ್ಜೆ. ಇಂದಿನ ಪ್ರದರ್ಶನದಲ್ಲಿ ವಿದ್ಯಾರ್ಥಿಗಳು ತಯಾರಿಸಿರುವ ಮಾದರಿಗಳು ಅವರಲ್ಲಿರುವ ಕುತೂಹಲ ಮತ್ತು ಸೃಜನಶೀಲತೆಗೆ ಸಾಕ್ಷಿಯಾಗಿವೆ ಎಂದರು.


ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಅಶೋಕ ತಳಕೇರಿ ಮಾತಾಡಿ ಇಂದಿನ ಜಗತ್ತು ತಂತ್ರಜ್ಞಾನದ ಮೇಲೆ ನಿಂತಿದೆ. ವಿದ್ಯಾರ್ಥಿಗಳು ಕೇವಲ ಬಳಕೆದಾರರಾಗದೆ ಹೊಸ ತಂತ್ರಜ್ಞಾನದ ಆವಿಷ್ಕಾರಕರಾಗಬೇಕು. ಇಂತಹ ವಸ್ತುಪ್ರದರ್ಶನಗಳು ಮಕ್ಕಳಲ್ಲಿ ಹೊಸ ಆಲೋಚನೆಗಳನ್ನು ಹುಟ್ಟುಹಾಕುತ್ತವೆ ಮಕ್ಕಳಿಂದ ಸೃಜನಾತ್ಮಕತೆ ತರುವಲ್ಲಿ ಜ್ಞಾನದೀಪ ಶಾಲೆಯ ಸಿಬ್ಬಂದಿ ಕಾರ್ಯ ಶ್ಲಾಘನೀಯವಾದದ್ದು ಎಂದ ಅವರು ನಾವು ಮಾಡುವ ಸಂಶೋಧನೆಗಳು ಕೇವಲ ಸೌಕರ್ಯಕ್ಕಾಗಿ ಇರದೆ, ಪರಿಸರವನ್ನು ಉಳಿಸುವಂತಿರಬೇಕು. ಮಕ್ಕಳು ಜಾಗತಿಕ ತಾಪಮಾನ ಮತ್ತು ಮಾಲಿನ್ಯದಂತಹ ಸಮಸ್ಯೆಗಳಿಗೆ ವಿಜ್ಞಾನದ ಮೂಲಕ ಪರಿಹಾರ ಕಂಡುಕೊಳ್ಳುವತ್ತ ಗಮನಹರಿಸಬೇಕು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಶಿಕ್ಷಣ ಪ್ರೇಮಿ ಭೀಮು ಡಿಗ್ಗಾವಿ ಉದ್ಘಾಟಿಸಿದರು. ಸಿಆರ್ ಸಿ ಬಂದೇನವಾಜ ನಾಲತವಾಡ್, ಡಾ.ಯಂಕನಗೌಡ ಪಾಟೀಲ್ ಮಾತನಾಡಿದರು. ಕೆಂಭಾವಿ ಹಿರೇಮಠದ ಚನ್ನಬಸವ ಶಿವಾಚಾರ್ಯರು ಸಾನಿಧ್ಯವಹಿಸಿದ್ದರು. ಶಿಕ್ಷಣ ಸಂಯೋಜಕ ಶಿವಪುತ್ರಪ್ಪ, ಸಾಹಿತಿ ನಿಂಗನಗೌಡ ದೇಸಾಯಿ, ಡಿಸಿ ಪಾಟೀಲ್ ವೇದಿಕೆ ಮೇಲಿದ್ದರು. ಮಧುಗೌಡ ಜಲ್ಲೂರ ಪ್ರಾಸ್ತಾವಿ ಮಾತನಾಡಿದರು

ಇದೇ ಸಂದರ್ಭದಲ್ಲಿ ಸೌರಮಂಡಲ, ನೀರಿನ ಚಕ್ರ, ಪರಿಸರ ಮಾಲಿನ್ಯ ಮತ್ತು, ತ್ಯಾಜ್ಯ ವಸ್ತುಗಳ ಸಂಸ್ಕರಣೆ, ಕಾಂತಿಯ ಶಕ್ತಿ, ಮಳೆನೀರು ಕೊಯ್ಲು, ಸಸ್ಯಗಳ ಭಾಗಗಳಂತಹ ಆಸಕ್ತಿದಾಯಕ ಪ್ರದರ್ಶನ ನೀಡಿದ ಮಕ್ಕಳು ಪೋಷಕ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಕಾರ್ಯಕ್ರಮವನ್ನು ಶಾಂತಾ ಮಧುಗೌಡ ನಡೆಸಿಕೊಟ್ಟರು, ಭಾಗ್ಯಶ್ರೀ ಗೀರಿಶ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಪಾಲಕರು ಶಾಲೆಯ ಮಕ್ಕಳು ಸೇರಿದಂತೆ ಭಾಗವಿಸಿದ್ದರು.

# ತಾಲೂಕು ಆಡಳಿತದಿಂದ ಸಂತ ಕವಿ ಸರ್ವಜ್ಞ ಜಯಂತಿ

ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು



ಸಾಂವಿಧಾನಿಕವಾಗಿ ಶಿಕ್ಷಣದ ಅರಿವು ಮೂಡಿಸಿ ಅದನ್ನು ಅರ್ಥೈಸಿ ಅನುಷ್ಠಾನಕ್ಕೆ ತರಬೇಕಾಗಿದೆ ಆಗ ಮಾತ್ರ ನಮ್ಮ ಜೀವನದಲ್ಲಿ ಬೆಳಕಿನ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯ ವಾಗುತ್ತದೆ. ಎಂದು ನಿರುಪಾದೆಯಪ್ಪ ವಕೀಲರು ಹೇಳಿದರು.

ತಾಲೂಕು ತಹಶೀಲ್ದಾರ್ ಕಛೇರಿ ಆವರಣದಲ್ಲಿ ಸಂತ ಕವಿ ಸರ್ವಜ್ಞ ಮಹಾ ಜಯಂತಿಯನ್ನು ಅತ್ಯಂತ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿದರು ನಂತರ ಸರ್ವಜ್ಞ ಜಯಂತಿ ಆಚರಣೆ ಕುರಿತು ಮಾತನಾಡಿದ ಅವರು ಯಾವುದೇ ಬಸವರಾಜ ಇಲ್ಲ ಬಸವರಸ ಇಲ್ಲದೇ ಒಂದು ಜನಾಂಗದ ಮೇಲು ಪರ್ವತ ವಾಗಿರುವ ವ್ಯಕ್ತಿಯ ವ್ಯಕ್ತಿತ್ವವನ್ನು ಅನಾವರಣ ಮಾಡುವುದು ಬಿಟ್ಟು ಆತನ ವ್ಯಕ್ತಿತ್ವಕ್ಕೆ ಕೊಡಲಿ ಪೆಟ್ಟು ಒಳಗೊಂಡಿರುವುದಕ್ಕೆ ನಾವು ದಿಕ್ಕಾರ ಎಂದು ಹೇಳಬೇಕಾಗುತ್ತದೆ ಎಂದರು

ಭ್ರಷ್ಟಾಚಾರ. ಅತ್ಯಾಚಾರ. ಅನಾಚಾರ ಇವುಗಳೆಲ್ಲವನ್ನೂ ಹೊಡೆದು ಹೊಡೆಸುವ ಶಕ್ತಿ ನಮ್ಮಲ್ಲಿ ಅಡಗಿದೆ ಎಂದು ಅತ್ಯಂತ ಮಾರ್ಮಿಕವಾಗಿ ತೋರಿಸಿಕೊಟ್ಟಿದ್ದಾರೆ. ಮತ್ತು ನಾವು ಸಂತರು. ನಾವು ಶರಣು. ನಾವು ಮಹಾ ಜ್ಞಾನಿಗಳು ಎಲ್ಲವೂ ನಮ್ಮಂದಲೇ ಹೇಳುವ ವ್ಯಕ್ತಿಗಳಿಗೆ ಮತ್ತು ನಾನು ಜಡೆ ಬಿಡುತ್ತೇನಿ. (ತಲೆ ಬೋಳುಸ್ತೀನಿ.). ಇವುಗಳೆಲ್ಲಾ ವಿಚಾರಗಳನ್ನು ಸಂತ ಕವಿ ಸರ್ವಜ್ಞ ಸಂಪೂರ್ಣವಾಗಿ ಖಂಡಿಸಿದ್ದಾರೆ. (ಏಕೆಂದರೆ ಇಲ್ಲಿ ಸತ್ಯವನ್ನು ಹೇಳಿದೇ ಮಾರೆಮಾಚಿದ್ದು)

ಹಾಗಾಗಿ ಸತ್ಯದ ಅರಿವನ್ನು ತಿಳಿಯದೆಯೇ...? ಅನಾವರಣ ಮಾಡುವುದು ಯಾಕೆ...? ಸಂತ ಕವಿ ಸರ್ವಜ್ಞನವರು ತನ್ನ ವಚನಗಳು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಹಾಗಾಗಿ ನಮಗೆ ಸಾಂವಿಧಾನಿಕವಾಗಿ ಶಿಕ್ಷಣ ಅರಿವು ಮೂಡಿಸಿ ಅದನ್ನು ಅರ್ಥೈಸಿ ಅನುಷ್ಠಾನಕ್ಕೆ ತಂದಾಗ ಮಾತ್ರ ನಮ್ಮ ಜೀವನದಲ್ಲಿ ಬೆಳಕನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ. ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರು ಪಂಪನಗೌಡ ಬಾದರ್ಲಿ. ಇನ್ಫೋರ್ವ ಬ್ಯಾಂಕ್ ನಿರ್ದೇಶಕರು ಸೋಮನಗೌಡ ಬಾದರ್ಲಿ. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ದೊಡ್ಡ ಬಸವರಾಜ. ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ. ದೇಸಾಯಿ. ಖಾಜಿ ಮಲ್ಲಿಕಾ ವಕೀಲರು ಎಚ ಎನ್ ಬಡಿಗೇರ್. ಕಲ್ಲೂರು ಗೌಡ . ಜೆಡಿಎಸ್ ಪಕ್ಷದ ನಗರ ಘಟಕದ ಅಧ್ಯಕ್ಷ ರವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಉಚಿತ ಸೈಕಲ್ ವಿತರಣೆ

ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ:

ತಾಲ್ಲೂಕಿನ ಸರಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರೈಟ್ ಟು ಲಿ ವ್ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ 19 ಸೈಕಲ್‌ಗಳನ್ನು ಉಚಿತವಾಗಿ ವಿತರಿಸಲಾಯಿತು.

ಪ್ರತಿನಿತ್ಯ ವಿವಿಧ ಗ್ರಾಮಗಳ ವಿದ್ಯಾರ್ಥಿಗಳು ನಡೆದುಕೊಂಡೇ ಶಾಲೆಗೆ ಬರುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ವಿದ್ಯಾರ್ಥಿಗಳಿಗೆ ಉಚಿತವಾಗಿ ಸೈಕಲ್ ವಿತರಣೆ ಮಾಡಿದೆ ಎಂದು ಟ್ರಸ್ಟ್‌ನ ಮಲ್ಲಿಕಾರ್ಜುನ ಇಟಗೇನೂರ ತಿಳಿಸಿದರು. ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕ ಮೌಲ್ಯಗಳು ಮತ್ತು ಸಂಸ್ಕಾರವನ್ನು ಬೆಳೆಸಿಕೊಳ್ಳಬೇಕು. ಸಂಸ್ಕಾರದಿಂದ ಉನ್ನತ ಸಾಧನೆ ಸಾಧ್ಯವಾಗಲಿದೆ ಎಂದರು.




ಹಾಗೂ ಈ ಸಂಸ್ಥೆಯು ನಮ್ಮ ಹುಮ್ನಾಬಾದ್ ತಾಲೂಕಿನಲ್ಲಿ ಸುಮಾರು ನಾಲ್ಕೈದು ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ತುಂಬಾ ಉತ್ತಮ ಕೆಲಸ ಮಾಡುತ್ತಿದ್ದು, ಸರ್ಕಾರಿ ಶಾಲೆಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವುದು ಎಕ್ಸಾಂಪಲ್ ಗ್ರೀನ್ ಬೋರ್ಡ್ ಸ್ಮಾರ್ಟ್ ಟಿವಿ ಮತ್ತು ಶೌಚಾಲಯಗಳು ಮತ್ತು ಮಕ್ಕಳಿಗೆ ಸ್ಕೂಲ್ ಬ್ಯಾಗ್ ಗಳು ಮತ್ತು ವಾಟರ್ ಫಿಲ್ಟರ್ ವಿದ್ಯಾರ್ಥಿ ವೇತನ ಅದೇ ರೀತಿಯಾಗಿ ತನ್ನದೇ ಆದ ಒಂದು ಟ್ರೈನಿಂಗ್ ಸೆಂಟರ್ ಅನ್ನು ನಡೆಸುತ್ತಾ ಬರುತ್ತಿದೆ. ಹಾಗೂ ಉಚಿತ ಕಂಪ್ಯೂಟರ್ ಟ್ರೈನಿಂಗ್ ಮತ್ತು ಉಚಿತ ಟೈಲರಿಂಗ್ ಟ್ರೈನಿಂಗ್ ನೀಡುತ್ತಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ಕರಿಬಸಪ್ಪ ಮೇತ್ರೆ, ಮಹಾದೇವ್ ಜಮಾದಾರ್, ಕಾಶಿನಾಥ್ ಬಿರಾದರ್ ಎಲ್ಲ ಸಹ ಶಿಕ್ಷಕರು ಮತ್ತು ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕ ಅಧ್ಯಕ್ಷರು ಅರವಿಂದ್ ಜೋಗಿರೆ ರೈಟ್ ಟು ಲೀವ್ ಜೀವನ ಬಗ್ಗೆ ಹೆಮ್ಮೆಯಿಂದ ಇಷ್ಟು ದೊಡ್ಡ ಮಟ್ಟದ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಸಂಸ್ಥೆಗೆ ತುಂಬಾ ಧನ್ಯವಾದ ತಿಳಿಸಿದರು.


**ಬೀದರ ಮತ್ಸಮೇಳ 2025-26**

## ಪತ್ರಿಕಾ ಪ್ರಕಟಣೆ

2025-26ನೇ ಸಾಲಿನ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಬೀದರ ಮೀನುಗಾರಿಕೆ ಇಲಾಖೆ ಬೀದರ ವತಿಯಿಂದ ದಿನಾಂಕ: 22/02/2026 ಮತ್ತು 23/02/2026 ರಂದು ಮತ್ಸ್ಯಮೇಳ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು ಕಾರ್ಯಕ್ರಮದಲ್ಲಿ ವಿವಿಧ ತಳಿಗಳ ಅಲಂಕಾರಿಕ ಮೀನುಗಳನ್ನೊಳಗೊಂಡ ಹಾಗೂ ಇಲಾಖೆಗೆ ಸಂಬಂಧಿಸಿದ ಅನೇಕ ಮಾದರಿಗಳನ್ನು ಪ್ರದರ್ಶಿಸಬೇಕಾಗಿರುವುದರಿಂದ ಮತ್ಸ್ಯ ಮೇಳವನ್ನು ಆಯೋಜಿಸಲು ಏಜೇನ್ಸಿಗಳಿಗೆ ಆಹ್ವಾನಿಸಲಾಗಿರುತ್ತದೆ. ಆದ್ದರಿಂದ ಆಸಕ್ತ ಏಜೇನ್ಸಿಗಳು ದಿನಾಂಕ: 11/02/2026 ರಿಂದ 21/02/2026 ರವರಿಗೆ ಮೀನುಗಾರಿಕೆ ಉಪನಿರ್ದೇಶಕರು ಬೀದರ ಕಛೇರಿಗೆ ಸಂಪರ್ಕಿಸಬಹುದು.

**ಸಹಿ**

**ಮೀನುಗಾರಿಕೆ ಉಪನಿರ್ದೇಶಕರು**
**ಬೀದರ.**



**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಬೀದರ ವಿಭಾಗ ಬೀದರ**

ಸಂ/ಕಕರಸಾ/ಬೀವಿ/ಸಂಚಾರ/ವಾಣಿಜ್ಯ/3656/25–26/ ದಿನಾಂಕ:– 19.02.2026

**ಇ–ಟೆಂಡರ ಪ್ರಕಟಣೆ ಸಂ: 03/2026**
**(ಇ–ಪ್ರೊಕ್ಯೂರಮೆಂಟ ಮುಖಾಂತರ)**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ಬೀದರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೀದರ ಕೇಂದ್ರ ಬಸ್ ನಿಲ್ದಾಣದಲ್ಲಿ, ಬೀದರ ನಗರ ಬಸ್ ನಿಲ್ದಾಣ ಬೀದರ ಘಟಕ–2ರ ಪಕ್ಕದ ವಾಣಿಜ್ಯ ಸಂಕೀರ್ಣದಲ್ಲಿನ/ ಮಳಿಗೆ, ಹುಮನಾಬಾದ, ಚಿಟ್ಟಗುಪ್ಪಾ, ಬಸವಕಲ್ಯಾಣ, ರಾಜೇಶ್ವರ, ಭಾಲ್ಕಿ, ಔರಾದ, ಸಂತಪೂರ ಮತ್ತು ಮುದ್ದೋಳ, ನಿಟ್ಟೂರ ಬಸ್ ನಿಲ್ದಾಣಗಳಲ್ಲಿನ ಬಸ್ ನಿಲ್ದಾಣದ ಕಟ್ಟಡದಲ್ಲಿನ/ವಾಣಿಜ್ಯ ಸಂಕೀರ್ಣದಲ್ಲಿನ/ತೆರೆದ ಸ್ಥಳದಲ್ಲಿನ ವಾಣಿಜ್ಯ ಮಳಿಗೆಗಳು, ಕಾರು ಮತ್ತು ದ್ವಿಚಕ್ರ ವಾಹನಗಳ ಸ್ಟ್ಯಾಂಡ ಹಾಗೂ ಉಪಹಾರ ಗೃಹಕ್ಕೆ ಪರವಾನಗೆದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರಮೆಂಟ ಮುಖಾಂತರ ಇ–ಟೆಂಡರ ಅಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ವೆಬ್‌ಸೈಟ kppp.Karnataka.gov.in ನಿಂದ ಡೌನಲೋಡ್ ಮಾಡಿಕೊಳ್ಳಬಹುದು. ಆನಲೈನ ಟೆಂಡರ ಅರ್ಜಿ ಸಲ್ಲಿಸಲು ದಿನಾಂಕ: 09–03–2026 ರಂದು 16:00 ಗಂಟೆಗೆ ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ಕ.ರ.ಸಾ.ನಿಗಮ, ಬೀದರ ವಿಭಾಗ, ಬೀದರನಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ 7760992202 ಅಥವಾ ವಿಷಯ ನಿರ್ವಾಹಕರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

**ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ**
**ಕ.ಕ.ರ.ಸಾ.ನಿಗಮ ಬೀದರ ವಿಭಾಗ ಬೀದರ**

ವಾ.ಸಾ.ಸಂ.ಇ/ಬೀದರ/341/ಕೆ.ಎಸ್.ಎಂ.ಸಿ.&ಎ/2025–26



## ಸಾರ್ವಜನಿಕ ಸೂಚನೆ

ದಿನಾಂಕ 13/02/2026 ರಂದು ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯ ಪುಟ ಸಂಖ್ಯೆ ನಾಲ್ಕರಲ್ಲಿ ಶ್ರೀ ಪ್ರಭುಲಿಂಗ ತಂದೆ ಕಾಶಿನಾಥ್ ರಾಸೂರೇ ಯವರು ಹೊರಡಿಸಿದ ಸಾರ್ವಜನಿಕ ಸೂಚನೆಗೇ ಪ್ರತ್ಯುತ್ತರವಾಗಿ, ನನ್ನ ಕಕ್ಷಿದಾರರಾದ ಶ್ರೀ ರವೀಂದ್ರ ತಂದೆ ಕಾಶಿನಾಥ ರಾಸೂರೇ, ಸಾ. ಶಹಾಪುರ ಗಲ್ಲಿ, ಬಸವಕಲ್ಯಾಣರವರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಸದರಿ ಸಾರ್ವಜನಿಕ ಸೂಚನೆಯಲ್ಲಿ ನಮೂದು ಮಾಡಿದ ಆಸ್ತಿಯು ನನ್ನ ಕಕ್ಷಿದಾರರಾದ ರವೀಂದ್ರ ತಂದೆ ಕಾಶಿನಾಥ ರಾಸೂರೇ ಅವರಿಗೆ ಸೇರಿದ ಸ್ವ–ಅರ್ಜಿತ್ ಆಸ್ತಿಯಾಗಿರುತ್ತದೆ. ಮತ್ತು ಸದರಿ ಆಸ್ತಿಯ ಕುರಿತು ಯಾವದೇ ನ್ಯಾಯಾಲಯದಲ್ಲಿ ಸದರಿ ಆಸ್ತಿಯ ಹಂಚಿಕೆ ಅಥವಾ ಇತರ ಯಾವುದೇ ದಾವೆ ನಡೆಯುತ್ತಿಲ್ಲ. ಸದರಿ ಸಾರ್ವಜನಿಕ ಸೂಚನೆಯಲ್ಲಿ ಶ್ರೀ ಪ್ರಭುಲಿಂಗ ರವರು ನೀಡಿದ ಮಾಹಿತಿ ಸಂಪೂರ್ಣ ಸುಳ್ಳಾಗಿದೆ ಎಂದು ಈ ಪ್ರಕಟಣೆ ಮೂಲಕ ತಿಳಿಸಲಾಗುತ್ತದೆ.

ದಿನಪತ್ರಿಕೆಯಲ್ಲಿ ಸುಳ್ಳು ಮಾಹಿತಿ ನೀಡಿ,ಸುಳ್ಳು ಸೂಚನೆಯನ್ನು ಪ್ರಕಟಿಸಿ, ನನ್ನ ಕಕ್ಷಿಗಾರರಿಗೆ ಮಾನಸಿಕ ಕಿರುಕುಳು, ವ್ಯಾವಹಾರಿಕ ನಷ್ಟ ಹಾಗೂ ಮಾನಹಾನಿ ಆಗಿದ್ದು ಈ ಸಂಬಂಧ, ನನ್ನ ಕಕ್ಷಿಗಾರರಿಗೆ, ಶ್ರೀ ಪ್ರಭುಲಿಂಗ ರವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸಲಹೆ ನೀಡಲಾಗಿದೆ.

**ರಾಜೇಶ್ ಗುಜರ, ವಕೀಲರು,**
**ಬಸವಕಲ್ಯಾಣ, ಜಿ. ಬೀದರ್**
**ಮೊಬೈಲ್ ಸಂಖ್ಯೆ: 9342651850**


# ಸಂಪಾದಕೀಯ




ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349


## ಅಧಿಕಾರಿಗಳು ಗ್ರಾಮೀಣ ಜನರ ನೆರವಿಗೆ ಬರಬೇಕು - ಜನಪರ ಆಡಳಿತದ ಅಗತ್ಯ

ರಾಜ್ಯದ ಅಭಿವೃದ್ಧಿಯ ನಿಜವಾದ ಅರ್ಥವು ಗ್ರಾಮೀಣ ಭಾಗದ ಜನರ ಬದುಕಿನಲ್ಲಿ ಉಂಟಾಗುವ ಬದಲಾವಣೆಯಿಂದ ಅಳೆಯಲ್ಪಡುತ್ತದೆ. ಗ್ರಾಮಗಳಲ್ಲಿ ವಾಸಿಸುವ ಕೃಷಿಕರು, ರೈತರು, ಕೂಲಿ ಕಾರ್ಮಿಕರು ಮತ್ತು ಬಡವರು ಸರ್ಕಾರದ ಯೋಜನೆಗಳ ಪ್ರಮುಖ ಲಾಭಾರ್ಥಿಗಳು. ಆದರೆ ಅನೇಕ ಬಾರಿ ಈ ಯೋಜನೆಗಳು ಕಾಗದದ ಮೇಲೆ ಮಾತ್ರ ಉಳಿದುಕೊಳ್ಳುತ್ತವೆ. ಇದಕ್ಕೆ ಪ್ರಮುಖ ಕಾರಣ ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಗ್ರಾಮ ಮಟ್ಟಕ್ಕೆ ತಲುಪದ ಆಡಳಿತ ವ್ಯವಸ್ಥೆಯಾಗಿದೆ.

ಸರ್ಕಾರ ಹಲವು ಜನಪರ ಯೋಜನೆಗಳನ್ನು ರೂಪಿಸಿ ಜಾರಿಗೆ ತರುತ್ತದೆ. ರೈತರಿಗಾಗಿ ಬೆಳೆ ವಿಮೆ, ಪಿಂಚಣಿ ಯೋಜನೆಗಳು, ಮನೆ ನಿರ್ಮಾಣ ಯೋಜನೆಗಳು, ಉಚಿತ ಆರೋಗ್ಯ ಸೇವೆಗಳು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೇರಿದಂತೆ ಅನೇಕ ಯೋಜನೆಗಳಿವೆ. ಆದರೆ ಈ ಯೋಜನೆಗಳ ಬಗ್ಗೆ ಗ್ರಾಮೀಣ ಜನರಿಗೆ ಸಮರ್ಪಕ ಮಾಹಿತಿ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ. ಅಧಿಕಾರಿಗಳು ಗ್ರಾಮಗಳಿಗೆ ತೆರಳಿ ಜನರಿಗೆ ಯೋಜನೆಗಳ ಕುರಿತು ಅರಿವು ಮೂಡಿಸಿದರೆ ಮಾತ್ರ ನಿಜವಾದ ಫಲಾನುಭವಿಗಳಿಗೆ ಲಾಭ ತಲುಪುತ್ತದೆ.

ಕೆಲವೆಡೆ ಅಧಿಕಾರಿಗಳು ಕಚೇರಿಯಲ್ಲೇ ಕುಳಿತು ಕೆಲಸ ನಿರ್ವಹಿಸುವ ಪ್ರವೃತ್ತಿ ಕಾಣಿಸುತ್ತದೆ. ಗ್ರಾಮಗಳಿಗೆ ಭೇಟಿ ನೀಡದೆ, ಜನರ ಸಮಸ್ಯೆಗಳನ್ನು ನೇರವಾಗಿ ತಿಳಿದುಕೊಳ್ಳದೆ ಆಡಳಿತ ನಡೆಸುವುದರಿಂದ ಜನರಿಗೆ ತೊಂದರೆ ಉಂಟಾಗುತ್ತದೆ. ಬಡವರು ಕಚೇರಿಗಳಿಗೆ ಸುತ್ತಾಡಿ ತಮ್ಮ ಹಕ್ಕಿನ ಸೌಲಭ್ಯಗಳನ್ನು ಪಡೆಯಲು ಸಂಕಷ್ಟ ಅನುಭವಿಸುತ್ತಾರೆ. ಇದು ಜನಪರ ಆಡಳಿತದ ತತ್ವಕ್ಕೆ ವಿರುದ್ಧವಾಗಿದೆ.

ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಸೇವೆಯ ಮನೋಭಾವದಿಂದ ನಿರ್ವಹಿಸಬೇಕು. ಗ್ರಾಮಗಳಿಗೆ ನಿಯಮಿತವಾಗಿ ಭೇಟಿ ನೀಡಿ, ರೈತರ ಸಮಸ್ಯೆಗಳನ್ನು ಆಲಿಸಿ, ತಕ್ಷಣ ಪರಿಹಾರ ನೀಡುವ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ಕೃಷಿ, ನೀರಾವರಿ, ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ಭದ್ರತಾ ಯೋಜನೆಗಳನ್ನು ಗ್ರಾಮ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಇದರಿಂದ ಗ್ರಾಮೀಣ ಜನರ ಜೀವನಮಟ್ಟ ಸುಧಾರಿಸುತ್ತದೆ.

ಜನರೊಂದಿಗೆ ಸ್ನೇಹಪೂರ್ವಕವಾಗಿ ವರ್ತಿಸುವುದು ಅಧಿಕಾರಿಗಳ ಪ್ರಮುಖ ಗುಣವಾಗಬೇಕು. ಜನರಿಗೆ ಗೌರವ ನೀಡಿ, ಅವರ ಸಮಸ್ಯೆಗಳನ್ನು ತಕ್ಷಣ ಸ್ಪಂದಿಸುವ ಮೂಲಕ ಆಡಳಿತದ ಮೇಲೆ ವಿಶ್ವಾಸ ಮೂಡಿಸಬೇಕು. ಸರ್ಕಾರ ಮತ್ತು ಜನರ ನಡುವೆ ಸೇತುವೆಯಾಗಿ ಅಧಿಕಾರಿಗಳು ಕೆಲಸ ಮಾಡಿದರೆ ಮಾತ್ರ ಆಡಳಿತ ಯಶಸ್ವಿಯಾಗುತ್ತದೆ.

ಒಟ್ಟಿನಲ್ಲಿ, ಅಧಿಕಾರಿಗಳು ಕಚೇರಿಗಳ ಗೋಡೆಗಳೊಳಗೆ ಸೀಮಿತವಾಗದೆ ಗ್ರಾಮಗಳತ್ತ ಮುಖ ಮಾಡಬೇಕು. ಕಟ್ಟಕಡೆಯ ಗ್ರಾಮದಲ್ಲಿರುವ ಬಡವರಿಗೂ ಸರ್ಕಾರದ ಯೋಜನೆಗಳ ಲಾಭ ತಲುಪುವಂತೆ ಕಾರ್ಯನಿರ್ವಹಿಸಬೇಕು. ಜನಪರ ಆಡಳಿತವೇ ನಿಜವಾದ ಸುಶಾಸನದ ಲಕ್ಷಣವಾಗಿದ್ದು, ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿದಾಗ ಮಾತ್ರ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.



ಬಸವಕಲ್ಯಾಣ:– ತಾಲೂಕಿನ ಹಾರಕೂಡ ಸಂಸ್ಥಾನ ಹಿರೇಮಠದ ದಾಸೋಹ ಮನೆಯಲ್ಲಿ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತಿ ಮಹೋತ್ಸವ ಅಂಗವಾಗಿ ಹಾರಕೂಡ ಶ್ರಿ ಮಠದ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶ್ರೀ ಶಿವಾಜಿ ಮಹಾರಾಜರ ಭಾವಚಿತ್ರಕ್ಕೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ, ಐ. ಜಿ. ಮಠಪತಿ, ಪರಮೇಶ್ವರ ಹೊಳಕುಂದೆ, ಹೇಮಲತಾ ಹಿರೇಮಠ ಉಪಸ್ಥಿತರಿದ್ದರು. (ಮಲ್ಲಮ್ಮ ನುಡಿ ಚಿತ್ರ).



ಬಸವಕಲ್ಯಾಣ :– ತಾಲೂಕಿನ ಮುಡಬಿ ಕ್ರಾಸ್ ಹತ್ತಿರದ ಬಿ. ನಾರಾಯಣರಾವ ಲೇಔಟ್ ನಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಜಾಗೃತಿ ಆಶ್ರಮ ನಿಜಶರಣ ಅಂಬಿಗರ ಚೌಡಯ್ಯ ಟ್ರಸ್ಟ್ ತಾಲೂಕು ಟೋಕರೆ ಕೋಳಿ ಸಮಾಜ ಸಂಘ ಹಾಗೂ ಭಾರತ ಮಾತಾ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಮಹಾಶಿವರಾತ್ರಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ 3 ನೇ ಜಾತ್ರಾ ಮಹೋತ್ಸವ ಮತ್ತು ಲಕ್ಷ ದೀಪೋತ್ಸವ ಸಮಾರಂಭದ ಕಾರ್ಯಕ್ರಮವನ್ನು ಸಂಸದ ಸಾಗರ್ ಖಂಡ್ರೆ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಶ್ರೀ ಜಗದ್ಗುರು ಶಾಂತಭೀಷಮ್ ಚೌಡಯ್ಯ ಸ್ವಾಮಿಜಿ. ಅನುಭವ ಮಂಟಪ ಟ್ರಸ್ಟಿನ ಅಧ್ಯಕ್ಷರಾದ ಪೂಜ್ಯಶ್ರೀ ಡಾ. ಬಸವಲಿಂಗ ಪಟ್ಟದೇವರು. ಶ್ರೀ ಮಲ್ಲಣಪ್ಪ ಸ್ವಾಮಿಜಿ. ಶ್ರೀ ಗುರು ರತ್ನಕಾಂತ ಶಿವಯೋಗಿ. ಶಾಸಕರಾದ ಶರಣು ಸಲಗರ್. ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ಬಿ ನಾರಾಯಣರಾವ. ಸೋನಾಲ್ ವಿಜಯಸಿಂಗ. ಶಿವಾನಂದ ಮೇತ್ರೆ. ಸಗೀರೋದ್ದಿನ. ಭೀಮಾಶಾ ಪುಲೆ. ಕಾಳಿದಾಸ ವಾಡೇಕರ್. ಗೋವಿಂದ ಚಾಮಲೆ. ಮಲ್ಲಿಕಾರ್ಜುನ ಬೋಕೆ. ನಾಗನಾಥ ಚಾಮಲೆ. ಚನ್ನವೀರ ಜಮಾದಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಲೆಕ್ಕ ಪರಿಶೋಧನೆ ಇಲಾಖಾ ಲೆಕ್ಕ ಪರಿಶೋಧಕರ ನೇಮಕ:
# ಐದು ದಿನದೊಳಗೆ ಲಿಖಿತ ಮಾಹಿತಿ ಸಲ್ಲಿಸಲು ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959 ಕಲಂ 63(1)ಕ್ಕೆ ತಿದ್ದುಪಡಿಗೊಂಡಿರುವ ಅನುಸಾರ ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ, 1949 (1949 ರ ಕೇಂದ್ರ ಅಧಿನಿಯಮ 10) ರ ಮೂಲಕಆಡಳಿತನಡೆಸಲಾಗುತ್ತಿರುವ ಸಹಕಾರ ಬ್ಯಾಂಕುಗಳನ್ನು ಹೊರತುಪಡಿಸಿ,"ಪ್ರತಿಯೊಂದು ಸಹಕಾರ ಸಂಘವು ಪ್ರತಿ ಮೂರು ವರ್ಷಗಳಿಗೆ ಒಮ್ಮೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮೂಲಕ ತನ್ನ ಲೆಕ್ಕಪತ್ರಗಳಲೆಕ್ಕಪರಿಶೋಧನೆಯನ್ನು ಮಾಡಿಸಿಕೊಳ್ಳುವುದಾಗಿ"ಶಾಸನವಾಗಿರುತ್ತದೆ. ಆದ್ದುದ–ರಿಂದ ಕಳೆದ ಎರಡು ವರ್ಷ ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಿರ್ವಹಿಸಿರುವ ಬೀದರಜಿಲ್ಲೆಯಎಲ್ಲಾ ಸಹಕಾರ ಸಂಘಗಳನ್ನು ಸನ್ 2025–26ನೇ ಸಾಲಿನ ಲೆಕ್ಕಪರಿಶೋಧನೆಯನ್ನುಕಡ್ಡಾಯವಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ನಿರ್ದೇಶಕರಿಂದಲೇ ನಿರ್ವಹಿಸಿಕೊಳ್ಳಬೇಕಾಗಿರುತ್ತದೆ.

ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ–1997ರ ಕಲಂ 33(1)ಕ್ಕೆ ತಿದ್ದುಪಡಿಗೊಂಡಿರುವ ಅನುಸಾರ ಅರ್ಬನ್ ಕೋಆಪರೇಟಿವ್ ಬ್ಯಾಂಕುಗಳನ್ನು ಹೊರತುಪಡಿಸಿ, "ಪ್ರತಿಯೊಂದು ಸಹಕಾರಿವು ಪ್ರತಿ ಮೂರುವರ್ಷಗಳಿಗೆಒಮ್ಮೆ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರ ಮೂಲಕ ತನ್ನ ಲೆಕ್ಕಪತ್ರಗಳಲೆಕ್ಕಪರಿಶೋಧನೆಯನ್ನು ಮಾಡಿಸಿಕೊಳ್ಳುವುದಾಗಿ ಶಾಸನವಾಗಿರುತ್ತದೆ. ಆದ್ದುದ–ರಿಂದ ಕಳೆದ ಎರಡು ವರ್ಷ ಸನ್ನದು ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಿರ್ವಹಿಸಿರುವ ಬೀದರ ಜಿಲ್ಲೆಯ ಎಲ್ಲಾ ಸೌಹಾರ್ದ ಸಹಕಾರಿಗಳನ್ನುಸನ್ 2025–26ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕಡ್ಡಾಯವಾಗಿ ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖಾ ನಿರ್ದೇಶಕರಿಂದನಿರ್ದೇಶಕರಿಂದಲೇ ನಿರ್ವಹಿಸಿಕೊಳ್ಳಬೇಕಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ–1959 ಕಲಂ 63(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರ ಕಾಯ್ದೆ–1997ರ ಕಲಂ 33(2)ರನ್ವಯ ತಮ್ಮ ಸಹಕಾರ/ಸೌಹಾರ್ದ ಸಹಕಾರಿಗಳಿಗೆ ಸನ್ 2025–26ನೇ ಸಾಲಿನ ಲೆಕ್ಕಪರಿಶೋಧನೆಗಾಗಿ ಇಲಾಖಾ ಲೆಕ್ಕ ಪರಿಶೋಧಕರನ್ನು ನೇಮಿಸಲಾಗುವುದು. ಈ ಕುರಿತು ನಿಮ್ಮ ಹೇಳಿಕೆ /ಮಾಹಿತಿ ಏನಾದರೂ ಇದ್ದಲ್ಲಿ ಈ ಪತ್ರ ತಲುಪಿದ 05 ದಿನದೊಳಗೆ ಲಿಖಿತವಾಗಿ ಉಪ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ, ಉಪ ನಿರ್ದೇಶಕರ ಕಛೇರಿ, ಬೀದರ ಎಲ್.ಐ.ಜಿ–124 ಕೆ.ಎಚ್.ಬಿ.ಕಾಲೋನಿ,ಬೀದರ–585401 ರವರಿಗೆ ಮಾಹಿತಿ ಸಲ್ಲಿಸಲು ತಿಳಿಸಿದೆ. ಇಲ್ಲವಾದಲ್ಲಿ ತಮ್ಮ ಸಹಮತಿ ಇರುವುದು ಎಂದು ಪರಿಗಣಿಸಿ, ನಿಮ್ಮ ಸಹಕಾರ/ಸೌಹಾರ್ದ ಸಂಘಕ್ಕೆ ಲೆಕ್ಕಪರಿಶೋಧನೆ ನಿರ್ವಹಿಸಲು ಇಲಾಖಾ ವತಿಯಿಂದ ಲೆಕ್ಕಪರಿಶೋಧಕರನ್ನು ನೇಮಿಸಲಾಗುವುದೆಂದು ಬೀದರ ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೇಶದ ಬೆಳವಣಿಗೆಗೆ ಗುಣಮಟ್ಟದ ಶಿಕ್ಷಣ

• ಮಲ್ಲಮ್ಮ ನುಡಿ ವಾರ್ತೆ ಬಸವಕಲ್ಯಾಣ



ಬಸವಕಲ್ಯಾಣ ತಾಲೂಕಿನ ತಡೋಳಾ ಗ್ರಾಮದ ತಾರಾದೇವಿ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಸಮಾರಂಭ ಮಾಜಿ ಸಚಿವ ರಾಜಶೇಖರ ಪಾಟೀಲ್ ಉದ್ಘಾಟಿಸಿದರು.

ದೇಶದಸರ್ವಾಂಗೀಣಬೆಳವಣಿಗೆಹೊಂದಬೇಕಾದರೆ ಗುಣಮಟ್ಟದ ಶಿಕ್ಷಣ ಅವಶ್ಯಕವಾಗಿದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು.

ತಾಲೂಕಿನ ತಡೋಳಾ ಗ್ರಾಮದ ತಾರಾದೇವಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯಲ್ಲಿ ಗುರುವಾರ ನಡೆದ ದಿ. ತಾರಾದೇವಿ ಅವರ 38ನೇ ಪುಣ್ಯಸ್ಮರಣೆ ಹಾಗೂ 23ನೇ ಶಾಲಾ ವಾರ್ಷಿಕೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಶಿಕ್ಷಣ ಸಂಸ್ಥೆ ತೆರೆದು ಬಡ ಮಕ್ಕಳ ಬಾಳಿಗೆ ಬೆಳಕು ನೀಡುತ್ತಿದ್ದಾರೆ. ವಿದ್ಯಾರ್ಥಿಗಳು ಕೂಡಾ ವರ್ಗ ಕೋಣೆಯಲ್ಲಿ ಬೋಧಕರು ನೀಡಿದ ಸಲಹೆಗಳನ್ನು ಚಾಚು ತಪ್ಪದೇ ಸತತ ಪ್ರಯತ್ನ ಮಾಡುವ ಉತ್ತಮ ಸಾಧನೆ ಮಾಡಬೇಕು ಎಂದು ಸಲಹೆ ನೀಡಿದರು.

ಪ್ರಸ್ತುತ ನಾಗರಿಕ ಜಗತ್ತಿನಲ್ಲಿ ಬಹುತೇಕ ಮಕ್ಕಳು ಮೊಬೈಲ್ ಮೂಲಕ ಸಾಮಾಜಿಕ ಜಾಲತಾಣದಲ್ಲಿ ಹೆಚ್ಚಿನ ಸಮಯ ವ್ಯರ್ಥ ಮಾಡುತ್ತಿದ್ದಾರೆ. ಹೀಗಾಗಿ ಪಾಲಕ ಪೋಷಕರು ಮಕ್ಕಳ ಮೇಲೆ ಹೆಚ್ಚಿನ ಗಮನ ಹರಿಸಿ, ಗುಣಮಟ್ಟದ ಶಿಕ್ಷಣ ಹಾಗೂ ಉತ್ತಮ ಸಂಸ್ಕಾರಗಳನ್ನು ನೀಡಬೇಕು ಎಂದು ತಿಳಿಸಿದರು.

ಶಾಲಾ ವಾರ್ಷಿಕೋತ್ಸವ ನಿಮಿತ್ತ ವಿದ್ಯಾರ್ಥಿಗಳಿಂದ ಸಂಗೀತ, ನೃತ್ಯ, ಕೋಲಾಟ, ನಾಟಕ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಈ ಸಂದರ್ಭದಲ್ಲಿ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಅಭಿನವ ಘನಲಿಂಗ ರುದ್ರಮುನಿ ಶಿವಾಚಾರ್ಯರು, ಜೈ ಶಾಂತಲಿಂಗ ಸ್ವಾಮೀಜಿ, ಬಾಬು ಹೊನ್ನನಾಯಕ, ಕೇಶಪ್ಪ ಬಿರಾದಾರ, ಶೀತಲ ಖೂಬಾ, ರೇಣುಕಾ ಕನಕೇರಿ, ಆನಂದ ದಂಡೋತಿ, ಸಿದ್ರಾಮ ಬಿರಾದಾರ, ಅರವಿಂದ ಪಾಟೀಲ್, ಬಸವರಾಜ ಬುಕ್ಕಾ, ಧನರಾಜ ದೊಡ್ಡಮನಿ, ಕಾರ್ತಿಕಯ್ಯ ಹಿರೇಮಠ, ಲಿಂಗರಾಜ ಬಿರಾದಾರ, ರೇವಣಸಿದ್ದಪ್ಪ ಪಾಟೀಲ್ ಸೇರಿ ಅನೇಕರಿದ್ದರು.

# ನೆಹರು ಕ್ರೀಡಾಂಗಣದಲ್ಲಿ ಉದ್ಯೋಗ ಮೇಳ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಸಂಜೀವಿನಿ ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಫೆಬ್ರವರಿ.22 ರಂದು ಬೀದರ ಜಿಲ್ಲೆಯ ನೆಹರು ಕ್ರೀಡಾಂಗಣದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಬೀದರ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಉದ್ಯೋಗ ಮೇಳದಲ್ಲಿ ರಾಜ್ಯ ಮತ್ತು ಅಂತರರಾಜ್ಯ ವಿವಿಧ ಭಾಗದಿಂದ ಉದ್ಯೋಗದಾತ ಕಂಪನಿಗಳು ಆಗಮಿಸುತ್ತಿರುವುದರಿಂದ ಜಿಲ್ಲೆಯ ನಿರುದ್ಯೋಗ ಯುವಕ ಮತ್ತು ಯುವತಿಯರು ತಮ್ಮ ಬಯೋಡೆಟಾ/ರಿಸುಮ್ ಜೊತೆಗೆ ವಿದ್ಯಾರ್ಹತೆ ದಾಖಲೆಗಳು, ಆಧಾರ್ ಕಾರ್ಡ ಮತ್ತು ಬಿಪಿಎಲ್ ಪಡಿತರ ಚೀಟಿಯೊಂದಿಗೆ ಸದರಿ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ಅವರು ತಿಳಿಸಿದ್ದಾರೆ.

# ಜಿಲ್ಲಾ ಮಹಿಳಾ ಉಪಾಧ್ಯಕ್ಷರಾಗಿ ನೇಮಕ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಕನ್ನಡ ಸೇನೆ ಕರ್ನಾಟಕ ಜಿಲ್ಲಾ ಘಟಕವನ್ನು ಇನ್ನಷ್ಟು ಬಲಿಷ್ಠಗೊಳಿಸುವ ಉದ್ದೇಶದಿಂದ ಶಿವಲೀಲಾ ಬಂಡೇಶ ಪೂಜಾರಿ ಅವರನ್ನು ಜಿಲ್ಲಾ ಮಹಿಳಾ ಉಪಾಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಈ ಕುರಿತು ಜಿಲ್ಲಾ ಅಧ್ಯಕ್ಷರಾದ ಸುಭಾಷ್ ಕೆನಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ರಾಜ್ಯ ಉಪಾಧ್ಯಕ್ಷರಾದ ಡಾ.ರವಿಸ್ವಾಮಿ ನಿರ್ಣ ಅವರ ಆದೇಶದ ಮೇರೆಗೆ ಈ ನೇಮಕಾತಿ ಜರುಗಿದ್ದು, ಸಂಘಟನೆಯ ಚಟುವಟಿಕೆಗಳನ್ನು ವಿಸ್ತರಿಸುವಲ್ಲಿ ಶಿವಲೀಲಾ ಅವರು ಸಕ್ರಿಯವಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂಬ ವಿಶ್ವಾಸ ವ್ಯಕ್ತಪಡಿಸಲಾಗಿದೆ ನಾಡು ನುಡಿ, ನೆಲ ಜಲಕ್ಕಾಗಿ ಹೋರಾಟವನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಮುಂದುವರಿಸುವ ನಿಟ್ಟಿನಲ್ಲಿ ಈ ನೇಮಕಾತಿ ಮಾಡಲಾಗಿದೆ ಎಂದು ಅವರು ಹೇಳಿದ್ದಾರೆ. ಅವರು ಸಂಘಟನೆಯ ಉದ್ದೇಶಗಳನ್ನು ಜನರಿಗೆ ತಲುಪಿಸುವಲ್ಲಿ ಹಾಗೂ ಮಹಿಳಾ ವಿಭಾಗವನ್ನು ಬಲಪಡಿಸುವಲ್ಲಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಜಿಲ್ಲಾ ಅಧ್ಯಕ್ಷರು ತಿಳಿಸಿದ್ದಾರೆ.

# ವೈಭವದ ಶಿವಾಜಿ ಮಹಾರಾಜರ ಜಯಂತಿ ಉತ್ಸವ



ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್ :

ನಗರದ ಮಾಣಿಕ ನಗರ ಮಹಾದ್ವಾರದ ಬಳಿ ಶಿವಾಜಿ ವೃತ್ತದಲ್ಲಿ ಮರಾಠ ಸಮಾಜದ ವತಿಯಿಂದ ಗುರುವಾರ ನಡೆದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉತ್ಸವ ಹಾಗೂ ತೊಟ್ಟಿಲು ಕಾರ್ಯಕ್ರಮ ಮಾಜಿ ಸಚಿವ ರಾಜಶೇಖರ ಪಾಟೀಲ್ ಚಾಲನೆ ನೀಡಿದರು.

ಬೆಳಗ್ಗೆಯಿಂದಲೇ ಶಿವಾಜಿ ವೃತ್ತದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬಳಿಕ ನೆರೆದ ನೂರಾರು ಮಹಿಳೆಯಿಂದ ಶಿವಾಜಿ ಮಹಾರಾಜರ ತೊಟ್ಟಿಲು ಕಾರ್ಯಕ್ರಮ ವೈಭವದಿಂದ ಜರುಗಿದವು. ನಂತರ ನಗರದ ನಾನಾ ಶಾಲೆಯ ವಿಧ್ಯರ್ಥಿಗಳಿ ನೃತ್ಯ ಹಾಗೂ ವೇಷಭೂಷಣ ತೊಟ್ಟ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರರ ಕಣ್ಮನ ಸೆಳೆದವು.

> “ ಬಲಿಷ್ಠ ರಾಷ್ಟ್ರದ ನಿರ್ಮಾಣಕ್ಕೆ ಶಿವಾಜಿ ಮಹಾರಾಜರು ನೀಡಿದ ಕೊಡುಗೆ ಅನನ್ಯ. ಹೀಗಾಗಿ ಎಲ್ಲರೂ ಅವರ ಸಂದೇಶಗಳನ್ನು ಪಾಲಿಸುವ ಮೂಲಕ ನಮ್ಮ ಭವ್ಯ ಪರಂಪರೆಯನ್ನು ಉಳಿಸಿ, ಬೆಳಸಬೇಕು.
>
> **ರಾಜಶೇಖರ ಪಾಟೀಲ್**
>
> ಮಾಜಿ ಸಚಿವ, ಹುಮನಾಬಾದ್

ಈ ಸಂದರ್ಭದಲ್ಲಿ ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್ಸಿ ಭೀಮರಾವ ಪಾಟೀಲ್, ತಹಸೀಲ್ದಾರ್ ಅಂಜುಮ್ ತಬಸುಮ್, ಪ್ರಮುಖರಾದ ಪದ್ಮಾಕರ ಪಾಟೀಲ್, ಸಂತೋಷ ಪಾಟೀಲ, ರವಿ ಘವಾಳ್ಕರ್, ದೇವಾನಂದ ಘವಾಳ್ಕರ್, ವೆಂಕಟೇಶ ಜಾಧವ, ಶ್ರೀನಾಥ ದೇವಣಿ, ಗಜೇಂದ್ರ ಕನಕಟ್ಟರ್, ಸುಭಾಷ ಆರ್ಯ, ಜಗನಾಥ ಧುಮಾಳೆ, ಜ್ಞಾನದೇವ ಧುಮಾಳೆ, ವಿಜಯಕುಮಾರ ನಾಥೆ, ಶಿವಕುಮಾರ ಬೆಳಕೇರಾ, ಸುರೇಶ ಘಾಂಗ್ರೆ, ಸಚೀನ ಕಲ್ಲೂರ್ ಸೇರಿ ಅನೇಕರಿದ್ದರು.

# ಛತ್ರಪತಿ ಶಿವಾಜಿ ಅಪ್ಪಟ ದೇಶಭಕ್ತ: ಹಿರೇಮಠ



• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಛತ್ರಪತಿ ಶಿವಾಜಿ ಮಹಾರಾಜರು ಜನರಲ್ಲಿ ಸಂಸ್ಕೃತಿ ಬೆಳೆಸುವುದರ ಜೊತೆಗೆ ಭರತ ಖಂಡದಲ್ಲಿ ಅನೇಕ ಯುದ್ಧ ಮಾಡಿ ಬಲಿಷ್ಟ, ಸ್ವತಂತ್ರ ಹಿಂದೂ ಸಾಮ್ರಾಜ್ಯ ಕಟ್ಟಲು ನಿರಂರ ಹೋರಟ ಮಾಡಿದವರು ಎಂದು ಮುಖ್ಯಶಿಕ್ಷಕ ಮನೋಜಕುಮಾರ ಹಿರೇಮಠ ಹೇಳಿದರು.

ಪಟ್ಟಣದ ಭಾಗಿರಥಿ ಪಬ್ಲಿಕ್ ಶಾಲೆ ವತಿಯಿಂದ ಗುರುವಾರ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಪ್ರಯುಕ್ತ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಅವರು ಶಿವಾಜಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.

17ನೇ ಶತಮಾನದಲ್ಲಿ ಉತ್ತರ ಭಾರತದ ಬಲಾಢ್ಯ ಸಾಮ್ರಾಜ್ಯವಾದ ಮೊಘಲರು, ದಕ್ಷಿಣದಲ್ಲಿ ಬಹಮನಿ ಸಾಮ್ರಾಜ್ಯ, ಪೂರ್ವದಲ್ಲಿ ನಿಜಾಮಶಾಹಿಗಳು ಹಾಗೂ ಪಶ್ಚಿಮದಲ್ಲಿ ತಮ್ಮ ಅಧಿಪತ್ಯ ಸ್ಥಾಪಿಸಲು ಫ್ರೆಂಚರು, ಡಚ್ಚರು ಪ್ರಯತ್ನಿಸುತ್ತಿದ್ದರು.

ಇಂತಹ ಸಮಯದಲ್ಲಿ ಸ್ವರಾಜ್ಯ ಸ್ಥಾಪನೆಯ ಜೊತೆಗೆ ಹಿಂದೂ ಸಾಮ್ರಜ್ಯ ಪ್ರತಿಷ್ಠಾಪಿಸಿ ಅಖಂಡ ಭಾರತ ನಿರ್ಮಿಸುವ ಪರಿಕಲ್ಪನೆ ಶಿವಾಜಿ ಮಹಾರಾಜರದಾಗಿತ್ತು. ಅಷ್ಟೇ ಅಲ್ಲದೆ ಮಹಿಳೆಯರ ಬಗ್ಗೆ ಅತೀವ ಗೌರವ ಮತ್ತು ಆದರ್ಶ ವ್ಯಕ್ತಿತ್ವ ಹೊಂದಿದ್ದ ಶಿವಾಜಿ ಮಹಾರಾಜರು, ಅಪ್ಪಟ್ಟ ದೇಶ ಭಕ್ತರು.

ಎಲ್ಲರೂ ಸಹಬಾಳ್ವೆಯಿಂದ ಬಾಳಬೇಕೆಂಬ ಉನ್ನತ ಧ್ಯೇಯ ಹೊಂದಿದ್ದರು. ಶಿವಾಜಿ ಮಹಾರಾಜರ ಜಯಂತೋತ್ಸವ ಪ್ರತಿ ಶಾಲಾ ಕಾಲೇಜುಗಳಲ್ಲಿ ಆಚರಿಸುವ ಮೂಲಕ ಶಿವಾಜಿ ಅವರ ವ್ಯಕ್ತಿತ್ವ ಮತ್ತು ಜೀವನಾದರ್ಶಗಳು ವಿದ್ಯಾರ್ಥಿಗಳಿಗೆ ತಿಳಿಸುವ ಕಾರ್ಯವಾಗಬೇಕಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀದೇವಿ ಸೋನಕಾಂಬಳೆ, ದೀಪಮಾಲಾ ಸೂರ್ಯವಂಶಿ, ರಾಜಶ್ರೀ ಸಿರಗಿರೆ, ಅರವಿಂದ ಚ್ಯಾಂಡೇಶ್ವರೆ, ಅಂಬಿಕಾ ಗಾಯಕವಾಡ, ರಾಣಿ ಡೋಣಗಾಪುರೆ, ವಾಣಿಶ್ರೀ ರತ್ನಪಾಲ ಸಿಂಧೆ, ಅರ್ಪಿತಾ ಜನಾಬಾಯಿ, ಪಂಚಫುಲಾ ಚವಾಣ್, ನಾಗೇಶ ಮಾಳಿವಾಡೆ ಹಾಗೂ ಮಕ್ಕಳು ಇದ್ದರು.

## ಇಂದು ಬಾಬಾರಾವ ಹೊನ್ನಾಳಿಕರ್ ಮೂರ್ತಿ ಅನಾವರಣ
# ಸಚಿವ ಈಶ್ವರ ಖಂಡ್ರೆ ಅನೀಲ ಲಾಡ್ ಭಾಗಿ

• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ



‘ಇಂದು ಫೆ.೨೧ ರಂದು ಮದ್ಯಾನ್ಹ ೧೨.೩೦ ಗಂಟೆಗೆ ಸಂಸ್ಥೆಯ ಸುವರ್ಣ ಮಹೋತ್ಸವ ಉದ್ಘಾಟನೆ ಮತ್ತು ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಾಬಾರಾವ ಹೊನ್ನಾಳ್ಳಿಕರ್ ರವರ ಮೂರ್ತಿ ಅನಾವರಣದ ದಿವ್ಯ ಸಾನಿಧ್ಯ ಬೆಂಗಳೂರಿನ ಶ್ರೀ ಜಗದ್ಗುರು ಮಂಜುನಾಥ ಭಾರತಿ ಸ್ವಾಮಿಜಿ ಮತ್ತು ದಿವ್ಯ ನೇತೃತ್ವ ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ನಾಡೋಜ ಡಾ। ಬಸವಲಿಂಗ ಪಟ್ಟದ್ದೇವರು ವಹಿಸಿಕೊಳ್ಳಲಿದ್ದು,ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸಲಿದ್ದಾರೆ.ಕಾರ್ಯಕ್ರಮಕ್ಕೆ ಕಾರ್ಮಿಕ ಸಚಿವ ಸಂತೋಷ ಲಾಡ್ ಚಾಲನೆ ನೀಡಲಿದ್ದಾರೆ. ಪೌರಾಡಳಿತ ಸಚಿವ ರಹೀಮ ಖಾನ ಸ್ಮರಣ ಸಂಚಿಕೆ ಬಿಡುಗಡೆ ಮಾಡುವರು. ಕಾರ್ಯಕ್ರಮದಲ್ಲಿ ಎಮ್‌ಪಿ ಸಾಗರ ಖಂಡ್ರೆ, ಮಾಜಿ ಗೃಹ ಸಚಿವ ಪಿ.ಜಿ.ಆರ್.ಶಿಂಧ್ಯಾ, ಲಾತೂರಿನ ಶಾಸಕ ಅಮಿತ ವಿಲಾಸರಾವ ದೇಶಮುಖ, ನೀಲಂಗಾ ಶಾಸಕ ಸಂಬಾಜಿರಾವ ಪಾಟೀಲ ನೀಲಂಗೆಕರ, ಮರಾಠಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಿ.ಎಚ್.ಮರಿಯೋಜಿರಾವ, ಎಮ್‌ಎಲ್ಸಿಗಳಾದ ಮಾರುತಿರಾವ ಮುಳೆ, ಶಶೀಲ ಜಿ ನಮೋಶಿ, ಶಾಸಕ ಶೈಲೇಂದ್ರ ಬೆಲ್ದಾಳೆ, ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ, ಮಾಜಿ ಲೋಕಸಭಾ ಸದಸ್ಯೆ ರೂಪಾತಾಯಿ ಪಾಟೀಲ ನೀಲಂಗೆಕರ, ರವೀಂದ್ರ ಗಾಯಕವಾಡ, ಮಾಜಿ ಶಾಸಕ ಪ್ರಕಾಶ ಖಂಡ್ರೆ, ಮಾಜಿ ಎಮ್‌ಎಲ್ಸಿ ವಿಜಯಸಿಂಗ್, ಮಾಜಿ ಎನ್‌ಎಸ್‌ಎಸ್‌ಕೆ ಅಧ್ಯಕ್ಷ ಡಿ.ಕೆ.ಸಿದ್ರಾಮ ಭಾಗವಹಿಸಲಿದ್ದಾರೆ.’–

ಡಾ.ಪ್ರಕಾಶ ಪಾಟೀಲ ಕಾರ್ಯದರ್ಶಿಗಳು ,ಕಿಶಿಪ್ರ ಮಂಡಳ ಭಾಲ್ಕಿ.

ಪಟ್ಟಣದ ಶಿವಾಜಿ ಮಹಾವಿದ್ಯಾಲದ ಆವರಣದಲ್ಲಿ ನಡೆಯುವ ದಿ.ಬಾಬಾರಾವ ಹೊನ್ನಾಳ್ಳಿಕರ ಪಂಚಲೋಹದ ಮೂರ್ತಿ ಅನಾವರಣ ಹಾಗೂ ಕಿಸಾನ ಶಿಕ್ಷಣ ಪ್ರಸಾರಕ ಮಂಡಳದ ಸುವರ್ಣ ಮಹೋತ್ಸವ ಸಮಾರಂಭದ ವೇದಿಕೆ ಪೂರ್ವ ಸಿದ್ಧತೆಯನ್ನು ಸಂಸ್ಥೆಯ ಅಧ್ಯಕ್ಷ ಅನೀಲ ಬಾಬಾರಾವ ಶಿಂಧೆ ಹಾಗೂ ಸಂಸ್ಥೆಯ ಕಾರ್ಯದರ್ಶಿ ಡಾ.ಪ್ರಕಾಶ ಪಾಟೀಲ ಪರಿಶೀಲಿಸಿದರು.ಬಳಿಕ ಮಾತನಾಡಿದ ಕಿಸಾನ ಶಿಕ್ಷಣ ಪ್ರಸಾರಕ ಮಂಡಳದ ಅಧ್ಯಕ್ಷ ಅನೀಲ ಬಾಬಾರಾವ ಪಾಟೀಲ ಶಿಂಧೆ ಅವರು,ಇಂದು ಫೆ.21 ಕ್ಕೆ ಕಿಸಾನ ಶಿಕ್ಷಣ ಪ್ರಸಾರಕ ಮಂಡಳದ ಸುವರ್ಣ ಮಹೋತ್ಸವ ಹಾಗೂ ಸಂಸ್ಥಾಪಕ ಅಧ್ಯಕ್ಷ ಬಾಬಾರಾವ ಹೊನ್ನಾಳಿಕರ ಅವರ ರೂ.35 ಲಕ್ಷ ವೆಚ್ಚದಲ್ಲಿ ನಿರ್ಮಿಸಲಾದ ಪಂಚಲೋಹದ ಮೂರ್ತಿ ಅನಾವರಣ ನಡೆಯಲಿದೆ. ವೇದಿಕೆಯ ಪೆಂಡಾಲ್‌ನಲ್ಲಿ ಅಂದಾಜು 5000 ಜನರಿಗಾಗಿ ಆಸನದ ವ್ಯವಸ್ಥೆ ಮಾಡಲಾಗಿದೆ.ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ವಿವಿಧ ಸಮಿತಿಗಳನ್ನು ರಚಿಸಲಾಗಿದ್ದು,ಭಾಗವಹಿಸುವ ಅತಿಥಿಗಳಿಗಾಗಿ ಯಾವುದೆ ತೊಂದರೆ–ಯಾಗದಂತೆ ಕುಡಿಯುವ ನೀರು,ಪ್ರಸಾದ ವ್ಯವಸ್ಥೆ ಮಾಡಲಾಗಿದದು, ಪಾಕಿಂ–ಗಗಾಗಿ ಕಾಲೇಜಿನ ಹೊರಗಡೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿ,ಯಾವುದೇ ಸೌಲಭ್ಯವಿಲ್ಲದ ಅಂದಿನ ಕಾಲದಲ್ಲಿ ಗ್ರಾಮೀಣ ಬಡ, ಕೂಲಿ ಕಾರ್ಮಿಕರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಸದುದ್ದೇಶದಿಂದಲೇ ಕಿಸಾನ ಶಿಕ್ಷಣ ಪ್ರಸಾರಕ ಮಂಡಳ 1973–74ರಲ್ಲಿ ಹುಟ್ಟುಹಾಕಲಾಗಿದ್ದು,ಇಂದು ಸಂಸ್ಥೆ ಎತ್ತರೆತ್ತರಕ್ಕೆ ಬೆಳೆದಿದ್ದು ಅಭಿಮಾನದ ಸಂಗತಿಯಾಗಿದೆ ಎಂದರು.

ಈ ಸಂದರ್ಭದಲ್ಲಿ ಪ್ರಮುಖರಾದ ರಾಮರಾವ ವರವಟ್ಟಿಕರ, ಅಶೋಕರಾವ ಸೂರ್ಯವಂಶಿ, ದಿಗಂಬರರಾವ ಮಾನಕಾರಿ ,ಪ್ರತಾಪರಾವ ಪಾಟೀಲ್, ಕೃಷ್ಣಾಕಾಂತ ಶಿಂದೆ, ರಘುನಾಥರಾವ ಜಾಧವ, ಅನಂತ ಪಾಟಿಲ್, ಅಶೋಕರಾವ ಪಾಟೀಲ್, ವಾಮನರಾವ ಕಾಳೆ, ವೆಂಕಟರಾವ ನೆಲವಾಡೆ, ಚಂದ್ರಕಾಂತ ಬಿರಾದಾರ, ರಾಜಕುಮಾರ ಪಾಟೀಲ್ ಉಪಸ್ಥಿತರಿದ್ದರು.

# ಬಿಐಟಿಎಂ ಮಹಾವಿದ್ಯಾಲಯದಲ್ಲಿ ಸ್ವಯಂಪ್ರೇರಿತ ರಕ್ತದಾನ ಉಚಿತ ಶಿಬಿರ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಲಿಂಗೈಕ್ಯ ಮಾಜಿ ಕೇಂದ್ರ ಸಚಿವೆ ಬಸವರಾಜೇಶ್ವರಿಯವರ 18ನೇ ಸಂಸ್ಮರಣೆಯ ಅಂಗವಾಗಿ ನಗರದ ಬಳ್ಳಾರಿ ಇನ್ಸ್ಟಿಯಟ್ಯೂಟ್ ಆಫ್ ಟೆಕ್ನಾಲಜಿ & ಮ್ಯಾನೇಂಟ್ಮದ (ಬಿಐಟಿಎಂ) ಮಹಾವಿದ್ಯಾಲಯದಲ್ಲಿ ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯ ಸೇವೆಯ ಸಂಕೇತವಾಗಿ ಉಚಿತ ಸ್ವಯಂಪ್ರೇರಿತ ರಕ್ತದಾನ ಶಿಬಿರವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಶಿಬಿರದಲ್ಲಿ 175ಕ್ಕೂ ಅಧಿಕ ಕಾಲೇಜಿನ ಪ್ರಾಧ್ಯಾಪಕರು, ಸಿಬ್ಬಂದಿಯವರು ಮತ್ತು ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಬಿಪಿಎಸ್ಸಿ ಅಧ್ಯಕ್ಷರಾದ ಡಾ. ಎಸ್.ಜೆ.ವಿ. ಮಹಿಪಾಲ್, ಸಂಸ್ಥೆಯ ಸಂಸ್ಥಾಪಕ ಅಧ್ಯ–ಕ್ಷೆಯಾಗಿದ್ದ ದಿವಂಗತ ಶ್ರೀಮತಿ ಬಸವರಾಜೇಶ್ವರಿ ಅವರ ಸಾಧನೆಗಳನ್ನು ಸ್ಮರಿಸಿ ರಕ್ತದಾನದ ಮಹತ್ವವನ್ನು ವಿವರಿಸಿದರು. ವಿವಿಧ ರಕ್ತದಾನ ಶಿಬಿರಗಳ ಮೂಲಕ ಹೆಚ್ಚಿನ ಪ್ರಮಾಣದ ರಕ್ತ ಘಟಕಗಳನ್ನು ಸಂಗ್ರಹಿಸಿದ ಹಿನ್ನೆಲೆಯಲ್ಲಿ ಬಿಐಟಿಎಂ ಸಂಸ್ಥೆಗೆ ಮಾನ್ಯ ರಾಜ್ಯಪಾಲರಿಂದ ಪ್ರಶಂಸಾ ಪತ್ರ ಲಭಿಸಿರುವುದನ್ನು ಅವರು ಹೆಮ್ಮೆಯಿಂದ ತಿಳಿಸಿದರು. ಸಂಸ್ಥಾಪಕ ಅಧ್ಯಕ್ಷೆಯವರು ಮೂರು ಬಾರಿ ಲೋಕಸಭಾ ಸದಸ್ಯೆಯಾಗಿದ್ದು, ಚೀನಾ ಭೇಟಿಯ ನಂತರ ಕರ್ನಾಟಕದಲ್ಲಿ ಮಹಿಳಾ ಮೀಸಲಾತಿ ಕುರಿತು ಚರ್ಚೆಗಳು ವೇಗ ಪಡೆದವು ಎಂದು ಅವರು ಹೇಳಿದರು.

ಪ್ರಾಂಶುಪಾಲರಾದ ಡಾ. ಯಡವಳ್ಳಿ ಬಸವರಾಜ್ ಅವರು ಸಂಸ್ಥಾಪಕ ಅಧ್ಯಕ್ಷೆಯವರ ದೂರದೃಷ್ಟಿ ಹಾಗೂ ಟ್ರಸ್ಟ್‌ನ ಸಮಾಜಮುಖಿ ಸೇವೆಗಳ ಕುರಿತು ವಿವರಿಸಿದರು. ಸಂಸ್ಥೆ ಕೇವಲ ಶೈಕ್ಷಣಿಕ ಚಟುವಟಿಕೆಗಳಿಗೆ ಮಾತ್ರ ಸೀಮಿತವಾಗದೆ, ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ ಎಂದು ಅವರು ತಿಳಿಸಿದರು.

ಭಾರತೀಯ ರೆಡ್ ಕ್ರಾಸ್ ಸೊಸೈಟಿ (ಐ.ಆರ್.ಸಿ.ಎಸ್.) ಕಾರ್ಯದರ್ಶಿ ಶಕೀಬ್ ಅವರು ರೆಡ್ ಕ್ರಾಸ್ ಸಂಸ್ಥೆಯ ಜಾಗತಿಕ ಸೇವೆಗಳ ಕುರಿತು ಮಾತನಾಡಿ, ರಕ್ತವನ್ನು ಯಾವುದೇ ಕಾರ್ಖಾನೆಯಲ್ಲಿ ತಯಾರಿಸಲಾಗುವುದಿಲ್ಲ; ಸ್ವಯಂಪ್ರೇರಿತ ದಾನದಿಂದ ಮಾತ್ರ ಜೀವಗಳನ್ನು ಉಳಿಸಬಹುದು ಎಂದು ತಿಳಿಸಿದರು. “ರಕ್ತವನ್ನು ರಸ್ತೆಗಳಲ್ಲಿ ಕಳೆದುಕೊಳ್ಳಬೇಡಿ, ಜೀವ ಉಳಿಸಲು ದಾನ ಮಾಡಿ” ಎಂದು ಕರೆ ನೀಡಿದ ಅವರು, ಒಂದು ಯೂನಿಟ್ ರಕ್ತ ನಾಲ್ಕು ಜೀವಗಳನ್ನು ಉಳಿಸಬಲ್ಲದು ಎಂದು ಹೇಳಿದರು.

ಅಭಯ್ ಕಶ್ಯಪ್ ಅವರು ಕಾರ್ಯಕ್ರಮಕ್ಕೆ ಸ್ವಾಗತ ಕೋರಿದರು. ಆರತಿ ಅವರು ವಂದನಾರ್ಪಣೆ ಸಲ್ಲಿಸಿದರು. ಉದ್ಘಾಟನಾ ಕಾರ್ಯಕ್ರಮದ ನಂತರ ಎಲ್ಲಾ ಗಣ್ಯರು ರಕ್ತದಾನ ಶಿಬಿರಕ್ಕೆ ಭೇಟಿ ನೀಡಿ, ರಕ್ತದಾನ ಮಾಡಿದ ದಾನಿಗಳಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಗಣ್ಯರಾದ ಡಾ. ವಿ.ಜೆ. ಭರತ್, ಡಾ. ಬಿ.ಎಸ್. ಖೇಣೇದ್, ಡಾ. ಎಂ. ರಾಮಚಂದ್ರ, ಡಾ. ಶೇಖ್ಮೀಪರ್ ಡಿ., ಗೌರಿಶಂಕರ್ ಹಿರೇಮಠ್, ಫಕ್ರುದ್ದೀನ್,ಎಸಿÓundefinedಪಿ;ಡಾ.

# ನಿರಂತರ ಅಧ್ಯಾಯನದಿಂದ ಯಶಸ್ಸು:ಮಾಜಿ ಸಚಿವ ರಾಜಶೇಖರ ಪಾಟೀಲ ಅಭಿಮತ

ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್:



ನಾಗರಿಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ನಿರಂತರ ಅಧ್ಯಯನ ಮತ್ತು ಸತತ ಪ್ರಯತ್ನ ಕೈಗೊಂಡಾಗ ಮಾತ್ರ ಜೀವನದಲ್ಲಿ ಯಶಸ್ಸು ಕಾಣಲು ಸಾಧ್ಯವಾಗುತ್ತದೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ್ ಹೇಳಿದರು.ನಗರದ ನಗರೇಶ್ವರ ಪ್ರಾಥಮಿಕ ಹಾಗೂ ಪ್ರೌಢ ಶಾಲೆ ಆವರಣದಲ್ಲಿ ಶುಕ್ರವಾರ ಆಯೋಜಿಸಿದ್ದ ಶಾಲೆಯ ನೂತನ ಕಟ್ಟಡದ ವಾಸ್ತು ಪೂಜೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನಿತ್ಯ ಜೀವನದಲ್ಲಿ ಪಾಲಕ ಪೋಷಕರು ಅನೇಕ ಸಮಸ್ಯೆಗಳನ್ನು ಎದುರಿಸಿ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜತೆಗೆ ಉತ್ತಮ ಸಂಸ್ಕಾರಗಳನ್ನು ಕಲಿಸಿಕೊಡಬೇಕು. ಇದರಿಂದಾಗಿ ವೃದ್ಧಾಪ್ಯದಲ್ಲಿ ಪಾಲಕ ಮತ್ತು ಪೋಷಕರು ವೃದ್ಧಾಶ್ರಮಕ್ಕೆ ಹೋಗುವ ಪರಿಸ್ಥಿತಿ ಬರುವುದೇ ಇಲ್ಲ ಎಂದು ತಿಳಿಸಿದರು. ಮಕ್ಕಳನ್ನು ಬಾಲ್ಯದಿಂದಲೇ ಶಿಕ್ಷಣದ ಜತೆಗೆ ಉತ್ತಮ ಸಂಸ್ಕಾರ ಬೆಳೆಸಿ ದೇಶದ ಉತ್ತಮ ನಾಗರಿಕರನ್ನಾಗಿಸುವ ಹೊಣೆಗಾರಿಕೆ ನಮ್ಮೆಲ್ಲರ ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೇ ವಿದ್ಯಾಭ್ಯಾಸ ಮಾಡುವ ಮೂಲಕ ಸಮಾಜದಲ್ಲಿ ಉತ್ತಮ ಸಾಧನೆ ಮಾಡ ಬೇಕು.ವಿದ್ಯಾರ್ಥಿಗಳು ಕೇವಲ ಅಭ್ಯಾಸ ಮಾಡಿದರೆ ಸಾಲದು, ತಾವು ಕಲಿತ ವಿದ್ಯೆಣಟಿಜಜಜಿಟಿಜಜಯಿಂದ ಸಮಾಜದಲ್ಲಿ ಏನಾದರೂ ಸಾಧನೆ ಮಾಡಬೇಕು, ಜೀವನದಲ್ಲಿ ನಯ ವಿನಯ ಕಲಿತುಕೊಳ್ಳಬೇಕು, ಹಾಗೆಯೇ ಗುರು ಹಿರಿಯರಿಗೆ, ತಂದೆ ತಾಯಿಯಂದಿರಿಗೆ ಗೌರವ ಕೊಡಬೇಕು ಎಂದು ಸಲಹೆ ನೀಡಿದರು. ಕನ್ನಿಕಾ ಪರಮೇಶ್ವರಿ ಶಿಕ್ಷಣ ಸಂಸ್ಥೆಯ ಸಮಗ್ರ ಬೆಳವಣಿಗೆಗೆ ಪೂರಕವಾಗಿ ಮಾಜಿ ಸಚಿವ ಬಸವರಾಜ ಪಾಟೀಲ್ ಅವರು ಸೇರಿ ನನ್ನ ಆಡಳಿತ ಅವಧಿಯಲ್ಲಿ ಎಲ್ಲ ತರಹದ ಸಹಕಾರ ನೀಡಲಾಗಿದೆ. ಜತೆಗೆ ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ ಪಾಟೀಲ್ ಹಾಗೂ ಭೀಮರಾವ ಪಾಟೀಲ್ ಅವರು ಕೂಡಾ ತಮ್ಮ ಶಿಕ್ಷಣ ಸಂಸ್ಥೆಗೆ ಅನೇಕ ಸೌಲಭ್ಯಗಳನ್ನು ನೀಡಿದ್ದಾರೆ ಎಂದು ಮಾಹಿತಿ ನೀಡಿದರು. ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಮಾತನಾಡಿ,ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಾಲೆಗಳು ನಡೆಸುವುದು ಬಹಳ ಕಷ್ಟಕರ ಸಂಗತಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ನಗರೇಶ್ವರ ಶಾಲೆ ಉತ್ತಮವಾಗಿ ಬೆಳಸುವ ಮೂಲಕ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುತ್ತಿರುವುದು ಬಹುದೊಡ್ಡ ಸಾಧನೆಯಾಗಿದೆ. ನೀಡಿದರು.ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆ ಆರಂಭದಲ್ಲಿ ವಿದ್ಯಾರ್ಥಿಗಳು ಮೊಬೈಲ್, ಟಿವಿ ನೋಡುವುದನ್ನು ಕಡಿಮೆ ಮಾಡಿ ಓದಿನ ಕಡೆಗೆ ಹೆಚ್ಚಿನ ಗಮನ ನೀಡಿ ಪರೀಕ್ಷೆಯನ್ನು ಭಯಮುಕ್ತರಾಗಿ ಎದುರಿಸಿ ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಹೆಚ್ಚಿಸಬೇಕು ಎಂದು ತಿಳಿಸಿದರು. ಹೀಗಾಗಿ ಈ ಶಾಲೆಯ ಅಭಿವೃದ್ಧಿಗೆ ಇಬ್ಬರು ಎಂಎಲ್ಸಿಗಳು ಸೇರಿ ಒಟ್ಟು 6 ಲಕ್ಷ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು. ಸಂಸ್ಥೆಯ ಅಧ್ಯಕ್ಷ ನಾಗರಾಜ ರಘೋಜಿ ಮಾತನಾಡಿ, ಮಕ್ಕಳಲ್ಲಿ ಉತ್ತಮ ಸಂಸ್ಕಾರ ಹಾಗೂ ಜ್ಞಾನವನ್ನು ಬೆಳೆಸುವುದು ಪ್ರತಿಯೊಬ್ಬ ಪೋಷಕರ ಜವಾಬ್ದಾರಿ. ಪ್ರತಿಯೊಬ್ಬ ಪಾಲಕರು ತಮ್ಮ ಜವಾಬ್ದಾರಿಗಳನ್ನು ಅರಿತು ಮಕ್ಕಳ ಭವಿಷ್ಯದಲ್ಲಿ ಬೆಳಕಾಗಿ ನಿಂತರ ಮಕ್ಕಳ ಬದುಕು ಹಾಗೂ ಸಮಾಜದ ಸ್ಥಿತಿಯು ಅತ್ಯುತ್ತಮವಾಗಿರುತ್ತದೆ. ಮಕ್ಕಳ ಭವಿಷ್ಯವು ಉಜ್ವಲವಾಗಿರಬೇಕು ಎನ್ನುವುದು ಪ್ರತಿಯೊಬ್ಬ ಪೋಷಕರ ಇಚ್ಛೆಯಾಗಿರುವುದು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳನ್ನು ಅದಕ್ಕೆ ತಕ್ಕಂತೆ ಬೆಳೆಸುವುದು ಒಂದು ಸವಾಲಿನ ಕೆಲಸ ಎಂದರು. ಪಾಲಕರು ತಮ್ಮ ಮಕ್ಕಳನ್ನು ಶಿಕ್ಷಕರು ಸರಿಯಾಗಿ ಅಭ್ಯಾಸ ಮಾಡಿಸುತ್ತಿದ್ದಾರೆ ಅಥವಾ ಇಲ್ಲವೂ ಎಂದು ಪ್ರಶ್ನೆ ಮಾಡಿದರು. ಅದರೆ ಪಾಲಕರು ಆ ಪ್ರಶ್ನಿಗೆ ಉತ್ತರಿಸಿಲ್ಲ. ಏಕೆಂದರೆ ನಗರೇಶ್ವರ ಶಾಲೆಯ ಶಿಕ್ಷಕರು ಶಿಕ್ಷಕಿಯರು ಮಕ್ಕಳಿಗೆ ಉತ್ತಮ ರೀತಿಯಲ್ಲಿ ಪಾಠ ಕಲಿಸುತ್ತಿದ್ದಾರೆ ಅದಕ್ಕಾಗಿ ಪಾಲಕರು ಯಾವುದೇ ಪ್ರಶ್ನೆ ಮಾಡಿರುವುದಿಲ್ಲ ಎಂದರು. ಹಾಗೂ ಪಾಲಕರು ತಮ್ಮ ಮಕ್ಕಳಿಗೆ ಮನೆಯಲ್ಲಿ ಸರಿಯಾದ ಸಂಸ್ಕಾರ ನೀಡಿದರೆ ಮಾತ್ರ ಮಕ್ಕಳು ಉತ್ತಮ ರೀತಿಯಿಂದ ಬೆಳೆಯಲು ಸಾಧ್ಯ ಎಂದರು.ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್, ದತ್ತಕುಮಾರ ಚಿದ್ರಿ, ಬಾಲಚಂದ್ರ ಜಾಜಿ, ಲಕ್ಷ್ಮಣ ಹಣಕುಣಿ, ಜಯಪಾಲ ಗುಪ್ತಾ, ದೇವದತ್ತ ಉಪ್ಪಾಲಿ, ವೆಂಕಟ ಕೊಟರಗಿ, ಸಂಧ್ಯಾರಾಣಿ ರಘೋಜಿ, ನಾರಾಯಣ ಚಿದ್ರಿ, ಸಂಗಪ್ಪ ರಘೋಜಿ, ಶ್ರೀನಿವಾಸ ರಘೋಜಿ, ಪ್ರೇಮಕುಮಾರ ಜಾಜಿ, ನಿರ್ಮಲಾ ರಾಯಚೂರಕರ್, ಸುಧೀಂದ್ರ ಗಾದಾ, ಪಾಮಯ್ಯ ಗಾದಾ ಸೇರಿ ಅನೇಕರಿದ್ದರು. ಕೊನೆಯಲ್ಲಿ ಶಾಲಾ ವಾರ್ಷಿಕೋತ್ಸವ ಜರುಗಿತು. ಈ ಕಾರ್ಯಕ್ರಮದಲ್ಲಿ ಮಕ್ಕಳಿಂದ ವಿವಿಧ ಸಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ಶಿವಾಜಿ ಜಯಂತಿ ನಿಮಿತ್ತ ಅನ್ನ ಸಂತರ್ಪಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ತಾಲೂಕಿನ ಕಿಲ್ಲನಕೇರಾ ಗ್ರಾಮದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತೋತ್ಸವ ನಿಮಿತ್ತ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಸದಸ್ಯರಾದ ಶರಣಪ್ಪ ಡಿ ಮಾನೇಗಾರ ಯರಗೋಳ ಇವರ ಅಭಿಮಾನಿ ಬಳಗದಿಂದ ಅನ್ನ ಸಂತರ್ಪಣೆ ಕಾರ್ಯಕ್ರಮ ನಡೆಸಿಕೊಟ್ಟರು.

ಈ ಸಂದರ್ಭದಲ್ಲಿ ರಾಘವೇಂದ್ರ ಅಗಸಿಮುಂದಳ್, ವೀರೇಶ ಸ್ವಾಮಿ, ನರಸಿಂಗಪ್ಪ ಬಡಿಗೇರಾ, ಖಾಜಪ್ಪ ಪಿಂಜಾರ್, ಪ್ರಕಾಶ ಬಾವೂರ, ದೇವು ಬೊಮ್ಮಣ್ಣೋರ್, ರವಿ ಧೋತ್ರೆ, ಭೀಮು ಕಾಕಲಾರ್, ಸಾಬಣ್ಣ ಘಂಟಿ, ದೊಡ್ಡಮಲ್ಲಪ್ಪ ಕುರುಬರ್,

ಮಲ್ಲು ಉಳ್ಳೆಸೂಗೂರು, ಯಂಕು ಘಂಟಿ, ಪರಶುರಾಮ ಬಾಗ್ಲಿ, ಶೇಖು ಅಗಸಿಮುಂದಳ್, ತಾಯಪ್ಪ ಕಾವಲಿ, ನಾಗು ಕೊನೆಮನಿ, ಸಿದ್ದು ಬಾವೂರ, ಮಹೇಶ ಕಲಾಲ್, ಬನ್ನು ಮಡಿವಾಳ, ಸಿದ್ರಾಮ್ ಎದ್ದೇರಿ, ಭಾಗೇಶ ಶೇಕಸಿಂದಿ, ಮಹೇಶ ಉಳ್ಳೆಸೂಗೂರು, ಬಸ್ಸು ನಾಟೇಕಾರ, ಅನಿಲ್ ನಾಟೇಕಾರ್ ಸೇರಿದಂತೆ ಗ್ರಾಮದ ಯುವಕರು ಉಪಸ್ಥಿತರಿದ್ದರು.


# ತುರ್ತಾಗಿ ಸಹಾಯಕಿ ನೇಮಕ ಮಾಡುವಂತೆ ಬಸವರಾಜ ಕುಂಬಾರ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಯಾದಗಿರಿ ತಾಲೂಕಿನ ಬಳಿಚಕ್ರ ಗ್ರಾಮದಲ್ಲಿರುವ ಅಂಗನವಾಡಿ ಕೇಂದ್ರ 1ರಲ್ಲಿ ಕಳೆದ ಸುಮಾರು ಒಂದು ವರ್ಷದಿಂದ ಅಂಗನವಾಡಿ ಸಹಾಯಕಿ ಹುದ್ದೆ ಖಾಲಿಯಾಗಿರುವುದು ಸ್ಥಳೀಯರ ಗಮನಕ್ಕೆ ಬಂದಿರುವ ಗಂಭೀರ ವಿಷಯವಾಗಿದೆ. ಸದರಿ ಹುದ್ದೆ ಭರ್ತಿಯಾಗದೇ ಇರುವುದರಿಂದ ಮಕ್ಕಳಿಗೆ ಪೋಷಣಾ ಆಹಾರ ವಿತರಣೆ, ಸ್ವಚ್ಛತೆ ಹಾಗೂ ದಿನನಿತ್ಯದ ಪೂರ್ವಪ್ರಾಥಮಿಕ ಚಟುವಟಿಕೆಗಳಲ್ಲಿ ವ್ಯತ್ಯಯ ಉಂಟಾಗುತ್ತಿದೆ ಎಂದು ಸಮಾಜ ಸೇವಕ ಬಸವರಾಜ ಕುಂಬಾರ ಅವರು ಜಿಲ್ಲಾಧಿಕಾರಿಗೆ ಮನವಿಯನ್ನು ಸಲ್ಲಿಸಿ ಪತ್ರಿಕೆಗೆ ತಿಳಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳ ಗಮನಕ್ಕೆ ವಿಷಯವನ್ನು ತಂದಿದ್ದರೂ, ಇದುವರೆಗೆ ಯಾವುದೇ ಸ್ಪಷ್ಟ ಹಾಗೂ ಲಿಖಿತ ಪ್ರತಿಕ್ರಿಯೆ ಲಭ್ಯವಾಗಿಲ್ಲ. ವಿಷಯವನ್ನು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದಿರುವುದಾಗಿ ಮೌಖಿಕವಾಗಿ ತಿಳಿಸಿದರೂ, ಸಮಸ್ಯೆ ಪರಿಹಾರವಾಗದೇ ವಿಳಂಬವಾಗುತ್ತಿರುವುದು ವಿಷಾದನೀಯವಾಗಿದೆ. ಪ್ರಸ್ತುತ ಅಂಗನವಾಡಿ ಕಾರ್ಯಕರ್ತೆ ಒಬ್ಬರೇ ಕೇಂದ್ರವನ್ನು ನಿರ್ವಹಿಸುತ್ತಿರುವ ಕಾರಣ, ಇಲಾಖಾ ಸಭೆಗಳು ಹಾಗೂ ಇತರೆ ಅಧಿಕೃತ ಕಾರ್ಯಕ್ರಮಗಳಿಗೆ ಹಾಜರಾಗುವ ಸಂದರ್ಭಗಳಲ್ಲಿ ಕೇಂದ್ರವನ್ನು ತಾತ್ಕಾಲಿಕವಾಗಿ ಮುಚ್ಚುವ ಪರಿಸ್ಥಿತಿ ಎದುರಾಗುತ್ತಿದೆ. ಇದರಿಂದ ಸಣ್ಣ ಮಕ್ಕಳಿಗೆ ಪೋಷಣಾ ಹಾಗೂ ಶೈಕ್ಷಣಿಕ ಸೇವೆಗಳು ನಿರಂತರವಾಗಿ ಲಭ್ಯವಾಗುತ್ತಿಲ್ಲ. ಅಂಗನವಾಡಿ ಕೇಂದ್ರಗಳು ಗ್ರಾಮೀಣ ಮಕ್ಕಳ ಆರೋಗ್ಯ, ಪೋಷಣೆ ಹಾಗೂ ಪೂರ್ವಪ್ರಾಥಮಿಕ ಶಿಕ್ಷಣಾಭಿವೃದ್ಧಿಗೆ ಪ್ರಮುಖ ಆಧಾರವಾಗಿದ್ದು, ಸರ್ಕಾರದ Integrated Child Development Services (ICDS) ಯೋಜನೆಯಡಿ ಕಾರ್ಯನಿರ್ವಹಿಸುತ್ತಿವೆ. ಸಹಾಯಕಿ ಹುದ್ದೆ ಖಾಲಿಯಾಗಿರುವುದರಿಂದ ಯೋಜನೆಯ ಉದ್ದೇಶಗಳ ಸಮರ್ಪಕ ಅನುಷ್ಠಾನಕ್ಕೆ ಅಡಚಣೆ ಉಂಟಾಗಿದೆ. ಈ ಕೂಡಲೆ ಬಳಿಚಕ್ರ ಗ್ರಾಮದ ಅಂಗನವಾಡಿ ಕೇಂದ್ರ 1ಕ್ಕೆ ತುರ್ತಾಗಿ ಅಂಗನವಾಡಿ ಸಹಾಯಕಿಯನ್ನು ನೇಮಕ ಮಾಡುವಂತೆ ಹಾಗೂ ಸಂಬಂಧಿತ ಇಲಾಖೆಗೆ ಅಗತ್ಯ ಸೂಚನೆಗಳನ್ನು ನೀಡಿ ಮಕ್ಕಳಿಗೆ ನಿರಂತರ ಹಾಗೂ ಸಮರ್ಪಕ ಸೇವೆಗಳು ಲಭ್ಯವಾಗುವಂತೆ ವ್ಯವಸ್ಥೆ ಮಾಡಿ ಎಂದು ಹೇಳಿದರು.

# ಅನವರ ಗ್ರಾಮಸ್ಥರಿಗೆ ಉದ್ಯೋಗ ನೀಡಿ: ಜನಪರ ಹೋರಾಟ ಸಮಿತಿ ಮನವಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಡಗೇರಾ ತಾಲೂಕಿನ ಅನವರ ಗ್ರಾಮದಲ್ಲಿ ಉದ್ಯೋಗ ಖಾತೆ ಎಂಬ ಯೋಜನಾ ಅಡಿಯಲ್ಲಿ ಪ್ರತಿಯೊಬ್ಬ ಗ್ರಾಮಸ್ಥರಿಗೂ ಉದ್ಯೋಗ ಸೃಷ್ಟಿಸಲಾಗಿದೆ ಆದರೆ ಇಲ್ಲಿ ಸುಮಾರು 200 ಯಿಂದ 300 ಜನಗಳ ಉದ್ಯೋಗ ಖಾತೆ ಇದ್ದರೂ ಸಹ ಯಾವುದೇ ಕೆಲಸ ನೀಡುತ್ತಿಲ್ಲ, ಹೀಗಾದರೆ ಅವರ ಜೀವನ ಗತಿ ಏನು ಅವರ ಕುಟುಂಬ ಬೀದಿ ಪಾಲಾಗುತ್ತದೆ ಅವರು ಕುಟುಂಬದ ನೆರವು ಯಾರು ನೋಡಿಕೊಳ್ಳುತ್ತಾರೆ ಎಂದು ಜನಪರ ಹೋರಾಟ ಸಮಿತಿಯವರು ಬಂದು ಜನರ ಉದ್ಯೋಗ ಖಾತೆಗಳನ್ನು ತೆಗೆದುಕೊಂಡು ಗ್ರಾಮ ಪಂಚಾಯತಿ ಅಭಿವೃದ್ಧಿ ಸಿಬ್ಬಂದಿಗಳಿಗೆ ನೀಡಿ ಮನವಿಯನ್ನು ಸಲ್ಲಿಸಿ ತಿಳಿ ಹೇಳಿದರು, ನಂತರ ಹತ್ತು ದಿನಗಳಲ್ಲಿ ಕೆಲಸ ನೀಡುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂಬ ಮಾಹಿತಿಯನ್ನು ಪತ್ರಿಕೆಗೆ ನೀಡಿದ್ದರೆ. ಈ ಸಂದರ್ಭದಲ್ಲಿ ಜನಪರ ಹೋರಾಟ ಸಮಿತಿಯ ರಾಜ್ಯ ಕಾರ್ಯದರ್ಶಿ ಅಮರಯ್ಯ ಸ್ವಾಮಿ, ಜಿಲ್ಲಾ ಅಧ್ಯಕ್ಷ ರಾಚಯ್ಯ ಸ್ವಾಮಿ, ಜಿಲ್ಲಾ ಉಪಾಧ್ಯಕ್ಷ ಗೌರಿ ಶಂಕರ, ಜಿಲ್ಲಾ ಮಹಿಳಾ ಅಧ್ಯಕ್ಷ ಈರಮ್ಮ, ಜಿಲ್ಲಾ ನಾಮ ಶರಣು ಸ್ವಾಮಿ, ಜಿಲ್ಲಾ ಮಹಿಳಾ ಕಾರ್ಯದರ್ಶಿ ಬಸವಲಿಂಗಮ್ಮ, ರಾಜಮ್ಮ ಮುಂತಾದವರಿದ್ದರು.

# ಶ್ರೀ ವಿಶ್ವಾರಾಧ್ಯರ ಜಾತ್ರೆ, ಕೊಪ್ಪಳದ ಗವಿಸಿದ್ದೇಶ್ವರ ಶ್ರೀಗಳು ಆಗಮನ





• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲೆಯ ಪವಿತ್ರ ಧಾರ್ಮಿಕ ಪೀಠಗಳಲ್ಲಿ ವಿಶಿಷ್ಟಸ್ಥಾನ ಪಡೆದಿರುವ ಅಬ್ಬೆತುಮಕೂರು ತೀರ್ಥಕ್ಷೇತ್ರವು ಐತಿಹಾಸಿಕ ಪೌರಾಣಿಕ ಆಧ್ಯಾತ್ಮಿಕ ವೈಭವದ ಜೀವಂತ ಪ್ರತೀಕವಾಗಿ ಭಕ್ತರ ಮನಸ್ಸುಗಳಲ್ಲಿ ಅಚಲ ಸ್ಥಾನ ಪಡೆದಿದೆ. ಯಾದಗಿರಿ ತಾಲೂಕಿನ ಈ ದಿವ್ಯ ಧಾಮವು ಅನಾದಿಕಾಲದಿಂದಲೂ ಭಕ್ತಿಸಂಪ್ರದಾಯ, ವೈದಿಕ ಪರಂಪರೆ ಹಾಗೂ ದೈವಿಕ ಅನುಭವಗಳ ಕೇಂದ್ರಬಿಂದು ಆಗಿ ಪ್ರಭಾಸಿಸುತ್ತಿದೆ. ಇಲ್ಲಿ ವಿರಾಜಮಾನರಾಗಿರುವ ಶ್ರೀ ವಿಶ್ವಾರಾಧ್ಯ ದೇವರು ಪವಾಡಪ್ರತಾಪಿ, ಇಷ್ಟಾರ್ಥಪ್ರದಾತ, ಭಕ್ತವತ್ಸಲ ಸಿದ್ಧಿಪುರುಷರೆಂಬ ಅಚಲ ಭಕ್ತಿಭಾವ ಭಕ್ತಜನರಲ್ಲಿ ಗಾಢವಾಗಿ ನೆಲೆಗೊಂಡಿದೆ. ಬೇಡಿದದು ನೀಡುವ ಕೃಪಾಸಾಗರ ಎಂಬ ನಂಬಿಕೆಯಲ್ಲಿ ಆರಾಧಿಸಲ್ಪಡುವ ದೇವರ ದಿವ್ಯ ಸನ್ನಿಧಿ ಲಕ್ಷಾಂತರ ಭಕ್ತರ ಸಂಕಟನಿವಾರಣೆಯ ಆಶಾಕಿರಣವಾಗಿದೆ. ಪ್ರತಿವರ್ಷ ವೈಭವ ವಿಶೇಷತೆಯೊಂದಿಗೆ ನಡೆಯುವ ಅಬ್ಬೆತುಮಕೂರು ಮಹಾಜಾತ್ರೆ ಅಂಗವಾಗಿ ಇದೇ ಫೆಬ್ರವರಿ 22ರಂದು ಭವ್ಯ, ದಿವ್ಯ, ಅದ್ದೂರಿ ರಥೋತ್ಸವ ಮಹಾಮಹೋತ್ಸವವಾಗಿ ನೆರವೇರಲಿದೆ ಎಂದು ದೇವಸ್ಥಾನ ಆಡಳಿತ ಮಂಡಳಿ ಪ್ರಕಟಿಸಿದೆ. ದೇಶದ ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆ ವ್ಯಕ್ತವಾಗಿದ್ದು, ರಥೋತ್ಸವದ ಪವಿತ್ರ ಕ್ಷಣಗಳು ಭಕ್ತಿ ಪರವಶತೆ, ನಂಬಿಕೆ, ಸಮರ್ಪಣೆ ಹಾಗೂ ಆಧ್ಯಾತ್ಮಿಕ ಉಲ್ಲಾಸದ ಮಹಾಸಂಗಮವಾಗಿ ರೂಪುಗೊಳ್ಳಲಿವೆ. ಶ್ರೀ ವಿಶ್ವಾರಾಧ್ಯ ಜಾತ್ರೆಗೆ ಗವಿಸಿದ್ದೇಶ್ವರ ಮಠದ ಪೂಜ್ಯ ಗವಿಸಿದ್ದೇಶ್ವರ ಶ್ರೀಗಳು ಆಗಮಿಸಲಿದ್ದಾರೆ ಎಂದು ಪ್ರಕಟಿಸಲಾಗಿದೆ. ಅವರ ಸಾನ್ನಿಧ್ಯದಲ್ಲಿ ಜರುಗಲಿರುವ ರಥೋತ್ಸವವು ಇನ್ನಷ್ಟು ಧಾರ್ಮಿಕ ಗೌರವ ಮತ್ತು ಆಧ್ಯಾತ್ಮಿಕ ಮಹತ್ವವನ್ನು ಪಡೆದುಕೊಳ್ಳಲಿದೆ ಎಂದು ಭಕ್ತರು ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರಥದ ಭವ್ಯ ದರ್ಶನ, ವೇದಘೋಷಗಳ ಮಧ್ಯೆ ನೆರವೇರಲಿರುವ ವೈದಿಕ ವಿಧಿವಿಧಾನಗಳು, ಪೂಜೆ ಸೇವೆಗಳ ಸಂಭ್ರಮ ಭಕ್ತರನ್ನು ದೈವಿಕ ಅನುಭವದ ಲೋಕಕ್ಕೆ ಕೊಂಡೊಯ್ಯಲಿವೆ. ಜಾತಿ ಮತ ಧರ್ಮ ಭೇದಗಳನ್ನು ಮೀರಿದ ಸೌಹಾರ್ದ, ಸಾಮರಸ್ಯ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿ ವಿಶ್ವಾರಾಧ್ಯ ಮಠವು ಸಮಾನತೆ ಸಹೋದರತ್ವದ ಶಾಶ್ವತ ಸಂದೇಶ ಸಾರುತ್ತಿದೆ. ಈ ರಥೋತ್ಸವ ಮಹಾಮಹೋತ್ಸವವು ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲದೆ, ಆಧ್ಯಾತ್ಮಿಕ ಚೈತನ್ಯ ಮತ್ತು ಸಾಂಸ್ಕೃತಿಕ ವೈಭವಗಳ ಮಹಾಸಂಗಮವಾಗಿ ಇತಿಹಾಸದ ಸುವರ್ಣಾಕ್ಷರಗಳಲ್ಲಿ ಅಚ್ಚಳಿಯದ ಘಟ್ಟವಾಗಿ ಉಳಿಯಲಿರುವುದು ನಿಶ್ಚಿತ.

# ಗುರು ಸಾರ್ವಭೌಮರ ನಾಮಸ್ಮರಣೆ ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಬೃಂದಾವನ ನೋಡಿರೋ ಗುರುಗಳ ಬೃಂದಾವನ ನೋಡಿರೋ. ಕೊಳಲನ್ನುವುದುವ ಕೃಷ್ಣ ನಮ್ಮನ್ನು ಹರಸುವ ಕೃಷ್ಣ.ಎನ್ನುವ ಅನೇಕ ಭಕ್ತಿಯ ಗೀತೆಗಳ ಸಚಿತ್ರ ದಾಸವಾಣಿ ಕಾರ್ಯಕ್ರಮ ಮೈಸೂರಿನ ರಾಮಚಂದ್ರ ಆಚಾರ್ಯರು ನೆರವೇರಿಸಿ ಕೊಟ್ಟರು. ಅವರು ನಗರದ ಶ್ರೀಮದ್ ಉತ್ತರಾದಿಮಠ ಶ್ರೀ ರಾಘವೇಂದ್ರ ಸ್ವಾಮಿಗಳ ಪರಿಮಳ ಮಂಟಪದಲ್ಲಿ ವರ್ಧಂತಿ ಹಾಗೂ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಕಾರ್ಯಕ್ರಮದ ಅಂಗವಾಗಿ ಫೇ.19ರಂದು ಗುರುವಾರ ಸಂಜೆ 6 ಗಂಟೆಗೆ ಯಿಂದ ರಾತ್ರಿ 10 ಗಂಟೆಯವರೆಗೂ ಸೇರಿದ ನುರಾರು ಜನ ಭಕ್ತಸಮೂಹವನ್ನು ಭಕ್ತಿಯ ಪಥದಲ್ಲಿ ಕೊಂಡೊಯ್ದರು.

ಶ್ರೀ ಉತ್ತರಾದಿ ಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಅನುಗ್ರಹದಿಂದ ಕಲಿಯುಗದ ಕಾಮಧೇನು ಕಲ್ಪತರು



ಆದ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ಜರುಗಿದವು. ಬೆಳಿಗ್ಗೆಯಿಂದ ಆರಂಭವಾದ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮೊದಲಿಗೆ ಅಷ್ಟೋತ್ತರ, ಪಂಚಾಮೃತ ಅಭಿಷೇಕ, ಅಲಂಕಾರ ಪೂಜೆ, ಆಗಮಿಸಿದ ಭಕ್ತರಿಂದ

ಭಜನೆ, ರಥೋತ್ಸವ, ಗುರುರಾಯರಿಗೆ ಪುಷ್ಪಾರ್ಚನೆಯ ನಂತರ ಪಂ. ನರಸಿಂಹಾಚಾರ್ ಪುರಾಣಿಕ ಅವರು ಪ್ರವಚನ ನಡೆಸಿಕೊಟ್ಟರು. ಅದಾದ ಮೇಲೆ

ಹಸ್ತೋದಕ ಹಾಗೂ ತೀರ್ಥ ಪ್ರಸಾದ ನಡೆಯಿತು. ಮಠದ ವ್ಯವಸ್ಥಾಪಕರಾದ ಶ್ರೀ ರಾಘವೇಂದ್ರ ಜೋಶಿ ಅವರು ಕಾರ್ಯಕ್ರಮವನ್ನು ಹಚ್ಕೊಟ್ಟಾಗಿ ನೆರವೇರಿಸಿ ಕೊಟ್ಟರು. ಜಿಲ್ಲೆಯ ನೂರಾರು ಜನ ವಿಪ್ರಬಾಂಧವರು ಭಾಗವಹಿಸಿ ಗುರು ಸಾರ್ವಭೌಮರ ಅನುಗ್ರಹಕ್ಕೆ ಪಾತ್ರರಾದರು.

# ಶೌರ್ಯ, ಧಾರ್ಮಿಕ ಪರಾಕ್ರಮದ ವೀರ ಶಿವಾಜಿ: ಮೌನೇಶ್



ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತಾಲೂಕಿನ ಮಾಧ್ವಾರ ಗ್ರಾಮದ ಹೃದಯ ಭಾಗವಾಗಿರುವ ಬನದೇಶ್ವರ ವೃತ್ತದಲ್ಲಿ ಹಿಂದೂ ಹೃದಯ ಸಾಮ್ರಾಟ್ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿಯನ್ನು ಆಚರಣೆ ಮಾಡಲಾಯಿತು. ಕರವೇ ಗುರುಮಠಕಲ್ ತಾಲೂಕ ಪ್ರಧಾನ ಕಾರ್ಯದರ್ಶಿ ಮೌನೇಶ ದೊಬ್ಬಲ್ ಮಾತನಾಡಿ ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯ ಮತ್ತು ಧಾರ್ಮಿಕ ಪರಾಕ್ರಮ ಬಗ್ಗೆ ತಿಳಿಸಿ ಹಿಂದವಿ ಸ್ವರಾಜ್ಯ ಸ್ಥಾಪನೆ ಮಾಡಿ ಅಧಿಲ್ ಶಾಹಿ ಹಾಗೂ ಮೊಗಲ್ ಸಾಮ್ರಾಜ್ಯ ವಿರುದ್ಧ ಹೋರಾಡಿ ತನ್ನ ಸಣ್ಣ ಸೈನ್ಯದೊಂದಿಗೆ 280 ಕ್ಕೂ ಹೆಚ್ಚು ಕೋಟೆಗಳನ್ನು ವಶಪಡಿಸಿಕೊಂಡು ಭಾರತದ ಕರಾವಳಿಯನ್ನು ರಕ್ಷಿಸಲು ಬಲಿಷ್ಠ ನೌಕಪಡೆಯನ್ನು ಸ್ಥಾಪಿಸಿದ ಕೀರ್ತಿ ಛತ್ರಪತಿ ಶಿವಾಜಿ ಮಹಾರಾಜರಿಗೆ ಸಲ್ಲುತ್ತದೆ ಹಾಗಾಗಿ ಇಂದಿನ ಯುವ ಪೀಳಿಗೆಗೆ ಅವರ ಸ್ಮರಣೆ ತುಂಬಾ ಅಗತ್ಯ ಎಂದು ಈ ಸಂದರ್ಭದಲ್ಲಿ ತಿಳಿಸಲಾಯಿತು.

ಈ ಸಂದರ್ಭದಲ್ಲಿ ದೇವಸಿಂಗ್ ಠಾಕೂರ್, ಬನಶಂಕರ್ ಹದ್ಗಲ್, ಶ್ರೀಕಾಂತ್ ಮಡಿವಾಳ, ಆನಂದ್ ರಗಮಣ್ಣೋರ್, ರಾಚಪ್ಪಕುನ್ನಿ, ಸುರೇಶ ಮಾಗನೂರ್, ಪ್ರಭು ಹೂಗಾರ್, ನಾಗಾರ್ಜುನ ಮೇಸ್ತ್ರಿ, ನರೇಶ್ ಪಿಡ್ಡಪ್ಪನೋರ್, ದಶರಥ, ಅಂಜಪ್ಪ ದೊಬ್ಬಲ್, ನರೇಶ್ ದೊಬ್ಬಲ್, ಸುರೇಶ ರಾಜಪೂತ್, ಖಾಜನಗೌಡ ಕಲಾಲ್ ಈಶ್ವರ್ ತಿವಾರಿ, ಮಲ್ಲು ರಗಮಣ್ಣೋರ್, ಸಾಯಿಲು ಮಲ್ಲೇಪಲ್ಲಿ, ಕರಣ್,

ಅರುಣ್ ಹಡಪದ ಶಿವು ದೊಬ್ಬಲ್, ಜೈಶಿವ, ಅಶೋಕ್ ಮಡಿವಾಳ್, ಖತಲಪ್ಪ ಭಾಗ್ಲಿ, ರವಿ ಜುಟ್ಲಾ, ಬನ್ನಪ್ಪ ಗಂಡು, ಸ್ವಾಮಿ ವಡ್ಡರ್, ಭೀಮಪ್ಪದೊರೆ, ನಾಗಾರ್ಜುನ ಬೊಂಬಾಯಿ, ಬನ್ನಪ್ಪ ಭಜಂತ್ರಿ ಇನ್ನಿತರರು ಇದ್ದರು.

# ಮಣಕೋಜಿ ಪರಿವಾರದಿಂದ ಅನ್ನ ದಾಸೋಹ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಸಂತಶಿರೋಮಣಿ ಮಾಡಿವಾಳೇಶ್ವರ (ಗವಿ) ಜಾತ್ರಾಮಹೋತ್ಸವ ಹಾಗೂ ರಥೋತ್ಸವ ಅಂಗವಾಗಿ ಪಟ್ಟಣ ಈಶ್ವರ ದೇವಸ್ಥಾನದ ಹತ್ತಿರ ಯುವ ಉತ್ಸಾಹಿ ಅನೀಲ ಮಣಕೋಜಿ ಮತ್ತು ಸುನೀಲ್ ಮಣಕೋಜಿ ಅವರು ಅನ್ನ ದಾಸೋಹ ಏರ್ಪಡಿಸಿದರು. ಸಾವಿರಾರು ಭಕ್ತರು ಪ್ರಸಾದ ಸ್ವೀಕರಿಸಿದರು. ಈ ರಂಗಾ ರೆಡ್ಡಿ, ಸಚಿನ ಮಠಪತಿ, ಪ್ರಶಾಂತ ಮೈನಳ್ಳಿ, ಸಂತೋಷ ಪಂಚಾಳ, ಚನ್ನವೀರ್ ಧತ್ತುರಗಿ, ರಮೇಶ್ ಪಂಚಾಳ, ಸಂತೋಷ ಗಂಜಿ, ಸತೀಶ ಗಂಜಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನೇರ ಸಂದರ್ಶನ ಉದ್ಯೋಗ ಮೇಳ ನಿರ್ಲಕ್ಷ್ಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಿ: ದಾಸನಕೇರಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ಜಿಲ್ಲೆಯಲ್ಲಿ ಯಾವುದೇ ನೇರ ಸಂದರ್ಶನ ಮತ್ತು ಉದ್ಯೋಗ ಮೇಳಗಳನ್ನು ಆಯೋಜಿಸುವಲ್ಲಿ ನಿರ್ಲಕ್ಷತನ ವಹಿಸುತ್ತಿರುವ ಜಿಲ್ಲಾ ಉದ್ಯೋಗಾಧಿಕಾರಿಯ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಜಿಲ್ಲಾಧಿಕಾರಿಯವರಿಗೆ ಸಾಮಾಜಿಕ ಕಾರ್ಯಕರ್ತ ಶಿವರಾಜ ದಾಸನಕೇರಿ ಅವರು ಮನವಿ ಸಲ್ಲಿಸಿದ್ದಾರೆ. ಜಿಲ್ಲೆಯಲ್ಲಿ ಉದ್ಯೋಗ ವಿನಿಯಮ ಇಲಾಖೆಯಿಂದ ನಿರುದ್ಯೋಗ ಯುವಕ–ಯುವತಿಯರಿಗೆ ಯಾವುದೇ ನೇರ ಸಂದರ್ಶನ ಮತ್ತು ಉದ್ಯೋಗ ಮೇಳಗಳನ್ನು ಆಯೋಜಿಸುವಲ್ಲಿ ನಿರ್ಲಕ್ಷತನ ಹಾಗೂ ಪಂಚ ಗ್ಯಾರಂಟಿಗಳಲ್ಲಿ ಒಂದಾದ ಯುವನಿಧಿ ವಿದ್ಯಾರ್ಥಿಗಳಿಗೆ ಪರಿಪೂರ್ಣ ಮಾಹಿತಿ ನೀಡದೆ, ಸುರಪುರ ನಗರಸಭೆಯ ಆಯುಕ್ತರ ಹುದ್ದೆಗೆ ಹೆಚ್ಚಿನ ಪ್ರಾಮುಖ್ಯತೆ ತೋರಿಸುತ್ತಿರುವ ಜಿಲ್ಲಾ ಉದ್ಯೋಗಾಧಿಕಾರಿ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂದು ಸಂಘಟನೆಯ ಪರವಾಗಿ ದಿನಾಂಕ 27–01–2026 ರಂದು ಮನವಿ ಪತ್ರ ನೀಡಲಾಗಿತ್ತು. ಆದರೆ ಇಲ್ಲಿಯವರೆಗೆ ಇಲಾಖೆಯಿಂದ ಯಾವುದೇ ಸುಧಾರಣೆ ಆಗಿರುವುದು ಕಂಡು ಬಂದಿರುವುದಿಲ್ಲ ಮತ್ತು ಅಧಿಕಾರಿ ಮೇಲೆ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಹಾಗೂ ಹೆಚ್ಚುವರಿ ಆಯುಕ್ತರ ಹುದ್ದೆಯ ಪ್ರಭಾರದಿಂದ ಸದರಿಯವರನ್ನು



ತೆಗೆದಿರುವುದಿಲ್ಲ.

ಜಿಲ್ಲಾ ಉದ್ಯೋಗ ವಿನಿಯಮ ಇಲಾಖೆಯಿಂದ ಮತ್ತಷ್ಟು ನಿಷ್ಕಾಳಜಿತನ ಹೆಚ್ಚಾಗಿದೆ, ಪ್ರತಿ ದಿವಸ ಉದ್ಯೋಗ ವಿನಿಮಯ ಕಚೇರಿ ಬೆಳಿಗ್ಗೆ 11.30 ಗಂಟೆಗೆ ತೆಗೆಯುತ್ತದೆ. ಒಬ್ಬ ಮಹಿಳೆ ಸಿಬ್ಬಂದಿ ಮಾತ್ರ ಕಚೇರಿಯಲ್ಲಿರುತ್ತಾರೆ. ಇಲಾಖೆಯ ಬಗ್ಗೆ ಆ ಮಹಿಳಾ ಸಿಬ್ಬಂದಿಗೆ ಯಾವುದೇ ಮಾಹಿತಿ ಇರುವುದಿಲ್ಲ, ಯುವನಿಧಿ ವಿದ್ಯಾರ್ಥಿಗಳಿಗೆ ಯಾವುದೇ ಮಾಹಿತಿ ನೀಡದೆ ಕೌಶಲ್ಯಾ ಕಚೇರಿಗೆ ಕಳುಹಿಸುತ್ತಿರುವುದು ಕಂಡು ಬಂದಿರುತ್ತದೆ. ಪ್ರತಿ ದಿವಸ ಸುಮಾರು 20 ರಿಂದ 25 ಯುವನಿಧಿ ವಿದ್ಯಾರ್ಥಿಗಳು ಕಚೇರಿಗೆ ಭೇಟಿ ನೀಡುತ್ತಿದ್ದಾರೆ. ನೇರ ಸಂದರ್ಶನ, ಉದ್ಯೋಗ ಮೇಳ ಹಾಗೂ ಯುವನಿಧಿ ವಿದ್ಯಾರ್ಥಿಗೆ ಇರುವ ಸೌಲಭ್ಯಗಳ ಬಗ್ಗೆ ಯಾವುದೇ ಮಾಹಿತಿ ನೀಡುವುದಿಲ್ಲ.

ಇದರಿಂದ ಜಿಲ್ಲೆಯ ನಿರುದ್ಯೋಗ ವಿದ್ಯಾರ್ಥಿಗಳು ಔದ್ಯೋಗಿಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಜಿಲ್ಲಾ ಮಟ್ಟದ ಉದ್ಯೋಗ ಅಧಿಕಾರಿ ಸುರಪುರ ನಗರಸಭೆಯ ಆಯುಕ್ತರ ಹೆಚ್ಚುವರಿ ಹುದ್ದೆ ವಹಿಸಿಕೊಂಡಿರುವುದರಿಂದ ಅವರು ತಮ್ಮ ಮೂಲ ಇಲಾಖೆಯನ್ನೇ ಮರೆತಿದ್ದಾರೆ. ಯಾದಗಿರಿ ಜಿಲ್ಲೆಯು ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಔದ್ಯೋಗಿಕವಾಗಿ ಹಿಂದುಳಿದ ಜಿಲ್ಲೆ ಎಂದು ಹಣೆ ಪಟ್ಟಿ ಕಟ್ಟಿಕೊಂಡಿದೆ. ಇದರಿಂದಾಗಿ ಅರ್ಹತೆ ಹೊಂದಿದವರಿಗೆ ಸೌಲಭ್ಯಗಳು ದೊರೆಯುತ್ತಿಲ್ಲ. ಜಿಲ್ಲೆಯಲ್ಲಿ ವಿವಿಧ ಹಂತಗಳಲ್ಲಿ ಶಿಕ್ಷಣ ಪಡೆದುಕೊಂಡ ಹಲವಾರು ವಿದ್ಯಾರ್ಥಿಗಳು ಆಗಿರುವ ಪ್ರಮಾಣ ಹೆಚ್ಚಾಗಿದೆ. ಜಿಲ್ಲೆಯಲ್ಲಿರುವ ಹಾಗೂ ಸುತ್ತ ಮುತ್ತಲೂ ಜಿಲ್ಲೆಗಳಲ್ಲಿ ಇರುವ ಖಾಸಗಿ ಕಂಪನಿಗಳಲ್ಲಿ ಉದ್ಯೋಗವಕಾಶ ದೊರಕಿಸಿಕೊಡುವುದು ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯ ಜವಾಬ್ದಾರಿ ಆಗಿದೆ.

ಆದರೆ ಸುಮಾರು 6–7 ತಿಂಗಳುಗಳಿಂದ ಯಾದಗಿರಿ ಜಿಲ್ಲೆಯಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಇಲಾಖೆಯಿಂದ ಯಾವುದೇ ನೇರ ಸಂದರ್ಶನಗಳಾಗಲಿ ಅಥವಾ ಉದ್ಯೋಗ ಮೇಳಗಳಾಗಲಿ ಆಯೋಜಿಸಿರುವುದಿಲ್ಲ. ಆದರೆ ಪಕ್ಕದ ಜಿಲ್ಲೆಗಳಾದ ಕಲಬುರಗಿ, ರಾಯಚೂರು, ಬಿಜಾಪುರ ಗಳಲ್ಲಿ ನೇರ ಸಂದರ್ಶನಗಳು ಮತ್ತು ಉದ್ಯೋಗ ಮೇಳಗಳು ನಡೆಯುತ್ತಿವೆ. ಇದರಿಂದಾಗಿ ಆ ಜಿಲ್ಲೆಗಳಲ್ಲಿ ಇರುವ ನಿರುದ್ಯೋಗಿದಾರರಿಗೆ ಉದ್ಯೋಗ ಪಡೆದುಕೊಳ್ಳಲು ಅನೂಕೂಲವಾಗುತ್ತದೆ. ಆದರೆ ಯಾದಗಿರಿ ಜಿಲ್ಲೆಯಲ್ಲಿ 6–7 ತಿಂಗಳುಗಳಿಂದ ನೇರ ಸಂದರ್ಶನಗಳು ಮತ್ತು ಉದ್ಯೋಗ ಮೇಳಗಳು ಸಂಪೂರ್ಣ ನಿಂತು ಹೋಗಿವೆ. ಹಲವಾರು ವಿದ್ಯಾರ್ಥಿಗಳು ಕಚೇರಿಗೆ ಹೋಗಿ ವಿಚಾರಿಸಿದಾಗ ಜಿಲ್ಲಾ ಮಟ್ಟದ ಅಧಿಕಾರಿಗಳು ನಗರಸಭೆ ಸುರಪುರದ ಆಯುಕ್ತರ ಹೆಚ್ಚುವರಿ ಹುದ್ದೆಯ ಚಾರ್ಜ ವಹಿಸಿಕೊಂಡಿರುತ್ತಾರೆ ಎಂದು ಕಚೇರಿ ಸಿಬ್ಬಂದಿಗಳು ಹೇಳುತ್ತಾರೆ.

ಆದರೆ ಅವರು ಒಟ್ಟಾರೆಯಾಗಿ ಜಿಲ್ಲಾ ಉದ್ಯೋಗ ಕಚೇರಿಗೆ ಬರುವುದೇ ಇಲ್ಲಾ. ಮತ್ತು ಅವರು ತಮ್ಮ ಇಲಾಖೆಯನ್ನು ಸಂಪೂರ್ಣ ಮರೆತಿದ್ದಾರೆ ಅನಿಸುತ್ತದೆ. ಜಿಲ್ಲೆಯಲ್ಲಿ ಯುವನಿಧಿ ಸೌಲಭ್ಯ ಪಡೆಯಲು ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ, ಯಾವುದೇ ಮಾಹಿತಿ ನೀಡುವವರೆ ಇಲ್ಲ, ಉದ್ಯೋಗ ಇಲಾಖೆಯ ಸಿಬ್ಬಂದಿಗಳಿಗೆ ಕೇಳಿದರೆ ಜಿಲ್ಲಾ ಕೌಶಲ್ಯ ಇಲಾಖೇಯ ಕಡೆಗೆ ಬೆರಳು ಮಾಡಿ ತೋರಿಸುತ್ತಾರೆ, ಅಲ್ಲಿ ಹೋಗಿ ಕೇಳಿದರೆ ಜಿಲ್ಲಾ ಉದ್ಯೋಗ ಇಲಾಖೆ ಕಡೆಗೆ ಬೆರಳು ಮಾಡಿ ತೋರಿಸುತ್ತಾರೆ. ಹೀಗಾದರೆ ವಿದ್ಯಾರ್ಥಿಗಳ ಗೋಳು ಯಾರಿಗೆ ಹೇಳಬೇಕು. ಯುವನಿಧಿ ಸೌಲಭ್ಯ ಪಡೆಯುವ ವಿದ್ಯಾರ್ಥಿಗಳಿಗೆ ವಿವಿಧ ಕೌಶಲ್ಯ ತರಬೇತಿಗಳನ್ನು ನೀಡಬೇಕು ಎಂಬ ಸರಕಾರದ ಆದೇಶವಿದೆ. ಜಿಲ್ಲಾ ಉದ್ಯೋಗ ಅಧಿಕಾರಿಗಳಿಗೆ ಇದು ಗೊತ್ತೆ ಇಲ್ಲ ಎನ್ನುವ ರೀತಿ ಕಚೇರಿಯ ಸಿಬ್ಬಂದಿಗಳು ಉತ್ತರಿಸುತ್ತಾರೆ. ಕಚೇರಿಯಲ್ಲಿರುವ ಸಿಬ್ಬಂದಿಗಳು ಆಟಕ್ಕುಂಟು ಲೆಕ್ಕಕ್ಕಿಲ ಎಂಬಂತೆ ಕಚೇರಿಗೆ ಬರುತ್ತಾರೆ. ಸುಮ್ಮನೆ ಮೋಬೈಲ್ ಅಲ್ಲಿ ಕಾಲ ಕಳೆದು ಮನೆಗೆ ಹೋಗುತ್ತಾರೆ. ಜಿಲ್ಲಾ ಉದ್ಯೋಗ ಅಧಿಕಾರಿಯಂತೂ ಆಯುಕ್ತರ ಹುದ್ದೆಯ ಎಲ್ಲಾ ಸಾಕರ್ಯಗಳನ್ನು ಅನುಭವಿಸುತ್ತಿದ್ದಾರೆ. ಹೀಗಾದರೆ ಉದ್ಯೋಗ ಇಲಾಖೆಗೆ ಬರುವ ವಿದ್ಯಾರ್ಥಿಗಳ ಗೋಳು ಯಾರಿಗೆ ಹೇಳಬೇಕು ಎನ್ನುವಂತಾಗಿದೆ. ಆದ್ದರಿಂದ ಯಾದಗಿರಿ ಜಿಲ್ಲೆಯ ನಿರುದ್ಯೋಗ ವಿದ್ಯಾರ್ಥಿಗಳ ಬಗ್ಗೆ ತಮಗೆ ಕಳಕಳಿ ಇದ್ದರೆ ಕೂಡಲೇ ಜಿಲ್ಲಾ ಉದ್ಯೋಗಾಧಿಕಾರಿಯ ಹೆಚ್ಚುವರಿ ಪ್ರಭಾರವನ್ನು ಕೂಡಲೇ ತೆಗೆಯಬೇಕು ಮತ್ತು ಯಾದಗಿರಿ ಜಿಲ್ಲೆಯಿಂದ ಬೇರೆ ಕಡೆಗೆ ವರ್ಗಾವಣೆ ಮಾಡಬೇಕು ಹಾಗೂ ಇಲಾಖೆಯಲ್ಲಿರುವ ಸಿಬ್ಬಂದಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಅವರು ಕೋರಿದ್ದಾರೆ.

# ಸರ್ವಜ್ಞ ಶ್ರೇಷ್ಠ ಜ್ಞಾನಿ: ಬಾಬುರಾವ ಕಾಡ್ಲೂರ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ತ್ರಿಪದಿ ಎಂಬ ಮೂರು ಸಾಲಿನ ವಚನಗಳ ಮೂಲಕ ಜಗದ ಸಾರ ತಿಳಿಸಿದ ಸರ್ವಜ್ಞ ಅವರು ಶ್ರೇಷ್ಠ ಜ್ಞಾನಿಯಾಗಿದ್ದರೆಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಾಬುರಾವ ಕಾಡ್ಲೂರ್ ಹೇಳಿದರು. ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಯಂತ್ಯೋತ್ಸವ ಸಮಿತಿ ಸಂಯುಕ್ತವಾಗಿ ಇಲ್ಲಿನ ಜಿಲ್ಲಾ ಕನ್ನಡ ಸಾಹಿತ್ಯಭವನದಲ್ಲಿ ಹಮ್ಮಿಕೊಂಡಿದ್ದ ಸಂತಕವಿ ಸರ್ವಜ್ಞ ಅವರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಹಾವೇರಿ ಜಿಲ್ಲೆಯವರಾದ ಪುಷ್ಪದತ್ತ ಎಂಬ ಮೊದಲ ಹೆಸರಿನ ಇವರು ನಂತರ ವಚನಗಳ ರಚನೆ ಮೂಲಕ ಸರ್ವಜ್ಞನೆಂದು ಪ್ರಸಿದ್ಧಿಯಾದರು. ಬಾಲ್ಯದಲ್ಲಿಯೇ ಅಗಾಧವಾದ ಪಾಂಡಿತ್ಯವನ್ನು ಶಿವನ ವರಪ್ರಸಾದದಿಂದ ಪಡೆದಿದ್ದರೆಂದರು. ಸರ್ವಜ್ಞ ರಚಿಸಿದ

ಸುಮಾರು 7070 ತ್ರಿಪದಿ ವಚನಗಳು ಲಭ್ಯವಾಗಿದೆಯೆಂಬುವುದು ತಜ್ಞರ ಅಭಿಪ್ರಾಯವಾಗಿದೆ. ಅವರ ಜೀವನ ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕೆಂದು ಕಾಡ್ಲೂರ ಹೇಳಿದರು.

ಸರ್ವಜ್ಞ ಭವನಕ್ಕೆ ನಿವೇಶನ ಕೇಳಿದ ಹಿನ್ನಲೆಯಲ್ಲಿ ನಿವೇಶನ ನೀಡುವ ಭರವಸೆ ಬಾಬುರಾವ ಕಾಡ್ಲೂರ ನೀಡಿದರು. ವಿಶೇಷ ಉಪನ್ಯಾಸ ನೀಡಿದ ಅಯ್ಯಮ್ಮ ಜೇಗಾಂ ಸೌರಾಷ್ಟ್ರಹಳ್ಳಿ ಅವರು, ಸರ್ವಜ್ಞ ಎಂದರೆ ಸಂಸ್ಕೃತದಲ್ಲಿ ಎಲ್ಲವನ್ನೂ ತಿಳಿದವರು ಎಂದರ್ಥ. ಇವರು ಕನ್ನಡದ ತ್ರಿಪದಿ ಸಾಹಿತ್ಯದ ಪ್ರಮುಖ ಕವಿ. ಪ್ರಮುಖವಾಗಿ ತ್ರಿಪದಿಗಳೆಂಬ ಮೂರು ಸಾಲಿನ ವಚನಗಳನ್ನು ರಚಿಸಿರುವ ಮೂಲಕ ಅಲ್ಪಶಬ್ದಗಳಲ್ಲಿ ಅಗಾಧವಾದುದನ್ನೂ ತಿಳಿಸಿದ ಪರಮಜ್ಞಾನಿ ಎಂದರು.

ಇವರು ಜೀವಿಸಿದ್ದ ಕಾಲ ಸುಮಾರು 17ನೇ ಶತಮಾನದ ಆದಿಭಾಗ ಎಂದು ಪ್ರತಿಪಾದಿಸಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ತಹಸೀಲ್ದಾರ ಸುರೇಶ ಅಂಲಗಿ, ಯುವ ಕ್ರೀಡಾ ಇಲಾಖೆ ಅಧಿಕಾರಿ ರಾಜು ಭಾವಿಹಳ್ಳಿ, ಕುಂಬಾರ ಸಮಾಜದ ಜಿಲ್ಲಾಧ್ಯಕ್ಷ ದೇವಿಂದ್ರಪ್ಪ ದರ್ಶನಾಪುರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರಾದ ಉತ್ತರಾದೇವಿ ಮಠಪತಿ ಇದ್ದರು.

# ಅಧಿಕಾರ ದೊರೆತರೆ ಬೆಳವಣಿಗೆ ಸಾಧ್ಯ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ರಾಜ್ಯದಲ್ಲಿ ಕುಂಬಾರ ಸಮುದಾಯ ಅತ್ಯಂತ ಹಿಂದುಳಿದಿದೆ ಅಧಿಕಾರ ದೊರತರೆ ಮಾತ್ರ ಬೆಳವಣಿಗೆ ಸಾಧ್ಯ ಎಂದು ಕುಂಬಾರ ಕ್ಷೇಮಾಭಿವೃದ್ಧಿ ಸಂಘ ಮುದಗಲ್ ಘಟಕದ ಅಧ್ಯಕ್ಷ ಕುಂಬಾರ ಚನ್ನಬಸವ ಚಕ್ರಸಾಲಿ ಶುಕ್ರವಾರ ಹೇಳಿದರು.

ಪುರಸಭೆ, ನಾಡ ಕಾರ್ಯಾಲಯ, ಪಶು ಆಸ್ಪತ್ರೆ, ಪ್ರಥಮ ದರ್ಜೆ ಕಾಲೇಜ್, ವಸತಿ ನಿಲಯ, ಸಮುದಾಯ ಆರೋಗ್ಯ ಕೇಂದ್ರ, ಮಾಜಿ ಶಾಸಕರ ಕಾರ್ಯಾಲಯ, ಸೇರಿದಂತೆ ವಿವಿಧಡೆ ಸರ್ವಜ್ಞರವರ 506ನೇ ಜಯಂತಿ ನಿಮಿತ್ಯ ಅವರ ಭಾವಚಿತ್ರಕ್ಕೆ ಹೂ ಮಾಲೆ ಹಾಕಿ ಪೂಜೆ ಸಲ್ಲಿಸಿ ನಂತರ ಮಾತನಾಡಿದರು. ಇದೆ ವೇಳೆ ಪ್ರಾಚಾರ್ಯ ಸಿದ್ದರಾಮ ಪಾಟೀಲ್, ಪಶು ವೈದ್ಯಾಧಿಕಾರಿ ಶರಣಪ್ಪ ನಾಯಕ, ಸರ್ವಜ್ಞರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಪುರಸಭೆ ವ್ಯವಸ್ಥಾಪಕ ಸುರೇಶ ಹೊನ್ನಳ್ಳಿ, ಚನ್ನಮ್ಮ ದಳವಾಯಿ ಹಿರೇಮಠ, ವೆಂಕಣ್ಣ ದೇಶಪಾಂಡೆ, ಮಂಜುನಾಥ, ಭಿಮಣ್ಣ ಕುಂಬಾರ ,ಪತ್ರಕರ್ತ ಮಂಜುನಾಥ ಕುಂಬಾರ, ಪ್ರಚಾರ ಸಮಿತಿ ಅಧ್ಯಕ್ಷ ಅರುಣಕುಮಾರ ಯರದಿಹಾಳ, ಬಸವರಾಜ ಜಲ್ಲಿ, ಕೆಡಿಪಿ ಸದಸ್ಯ ರಾಘವೇಂದ್ರ ಕುದರಿ, ಯುವ ಘಟಕ ಅಧ್ಯಕ್ಷ ಅಬ್ದುಲ್ ಖದೀರ, ಕೃಷ್ಣ ಚಲುವಾದಿ ಗಂಗಾಧರ್ ಯಾದವ, ಸೇರಿದಂತೆ ಇತರರಿದ್ದರು.

# ತಹಶೀಲ್ದಾರ ಕಚೇರಿಯಲ್ಲಿ 'ಸರ್ವಜ್ಞ ಜಯಂತಿ' ಆಚರಣೆ



(ವರದಿ:ಪರಮೇಶ ರಾಂಪುರೆ)

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ತಾಲ್ಲೂಕು ಆಡಳಿತದ ವತಿಯಿಂದ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಸ್ಥಳೀಯ ತಹಶೀಲ್ದಾರ್ ಕಚೇರಿಯಲ್ಲಿ ಮಹಾನ ದಾರ್ಶನಿಕ ಕವಿ ಶ್ರೀ ಸರ್ವಜ್ಞರ ಜಯಂತಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ಕಾರ್ಯಕ್ರಮದ ನೇತೃತ್ವವನ್ನು ತಹಶೀಲ್ದಾರ್ ಅಮಿತ ಕುಮಾರ್ ಕುಲಕರ್ಣಿ ಅವರು ವಹಿಸಿ, ಸರ್ವಜ್ಞರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು. ನಂತರ ಮಾತನಾಡಿದ ಅವರು, ಸರ್ವಜ್ಞರ ತ್ರಿಪದಿಗಳು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಶಕ್ತಿ ಹೊಂದಿವೆ ಎಂದು ಸ್ಮರಿಸಿದರು.

ಜಾತಿ ಭೇದ, ಅಜ್ಞಾನ ಮತ್ತು ಮೂಢನಂಬಿಕೆಗಳನ್ನು ಖಂಡಿಸಿದ ಇವರು, ಕಾಯಕವೇ ಕೈಲಾಸವೆಂದು ನಂಬಿದ್ದರು. ಕನ್ನಡ ಸಾಹಿತ್ಯಕ್ಕೆ ಇವರು ನೀಡಿದ ಕೊಡುಗೆ ಅಪಾರ. ಇವರ ವಚನಗಳು ಇಂದಿಗೂ ಮತ್ತು ಎಂದೆಂದಿಗೂ ನಮಗೆ ದಾರಿದೀಪವಾಗಿವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ತಾಲ್ಲೂಕು ಆಡಳಿತದ ಪ್ರಮುಖ ಅಧಿಕಾರಿಗಳು ಭಾಗವಹಿಸಿದ್ದರು:

ರಮೇಶ್ ಪೆದ್ದೆ ಗ್ರೇಡ್–2 ತಹಶೀಲ್ದಾರ್, ಗೋಪಾಲ ಕೃಷ್ಣ ಉಪತಹಶೀಲ್ದಾರ್, ಶಿವಾನಂದ ನಾವಡೆ ಉಪ ತಹಶೀಲ್ದಾರ್, ಠಾಣಾ ಕುಶನೂರು, ಶ್ರೀಮತಿ ಸವಿತಮ್ಮ ಶಿರಸ್ತೇದಾರ್, ಮತ್ತು ಸಿಬ್ಬಂದಿ ವರ್ಗದವರದ ಕಚೇರಿಯ ಪ್ರಥಮ ದರ್ಜೆ ಸಹಾಯಕರಾದ ಮಲ್ಲಪ್ಪ ಹಾಗೂ ಪ್ರಶಾಂತ್, ದ್ವಿತೀಯ ದರ್ಜೆ ಸಹಾಯಕರಾದ ಶ್ರೀಕಾಂತ್, ಸಂಜಯ್ ಕುಮಾರ, ಮಾಣಿಕ್, ವಿಕ್ರಮ್ ಮತ್ತು ಕಚೇರಿಯ ಇತರೆ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸ್ವಾಗತ ಫಲಕ ಬಿದ್ದು ಒಬ್ಬ ಸಾವು




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ಕಂಪ್ಲಿ

ಕೋಟೆಯ ತುಂಗಭದ್ರಾ ನದಿ ಸೇತುವೆ ದ್ವಾರದಲ್ಲಿ ಅಡ್ಡಲಾಗಿ ಕಬ್ಬಿಣದ ಸ್ವಾಗತ ಫಲಕವನ್ನು ಕ್ರೇನ್‌ನಿಂದ ಅಳವಡಿಸುವಾಗ ಸ್ವಾಗತ ಫಲಕ ಕಳಚಿ ಬಿದ್ದು ಒಬ್ಬ ಮೃತಪಟ್ಟು, ಇಬ್ಬರು ಗಾಯಗೊಂಡ ಘಟನೆ ನಡೆದಿದೆ.

ಪಟ್ಟಣದ 4ನೇ ವಾರ್ಡ್ ನಿವಾಸಿ ವೆಲ್ಡಿಂಗ್ ಲೇಬರ್ ಶೆಕ್ಷಾ(35) ಮೃತ ದುರ್ದೈವಿ. ಗಾಯಗೊಂಡ ಈತನನ್ನು ಕಂಪ್ಲಿಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಗಂಗಾವತಿಗೆ ಕರೆದೊಯ್ಯುವಾಗ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ. ಇನಾಯತ್ (32)ಗೆ ಗಂಭೀರ ಗಾಯಗಳಾಗಿದ್ದು, ಕರೀಮ್(21)ಗೆ ಸಣ್ಣಪುಟ್ಟ ಗಾಯಗಳಾಗಿವೆ. ಪಿಐ ಕೆ.ಬಿ.ವಾಸುಕುಮಾರ್, ಪಿಎಸ್‌ಐ ಅವಿನಾಶ್ ಕಾಂಬ್ಳೆ ಸ್ಥಳಕ್ಕೆ ಬೇಟಿ ನೀಡಿದ್ದರು.

## ಈಶ್ವರ ಖಂಡ್ರೆ ಅಭಿನಂದನಾ ಸಮಾರಂಭದಲ್ಲಿ ಶಿವಯೋಗಿಶ್ವರ ಸ್ವಾಮೀಜಿ ಅಭಿಮತ

# ರಾಜ್ಯಕ್ಕೆ ಖಂಡ್ರೆ ಮನೆತನದ ಕೊಡುಗೆ ಅಪಾರ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಧಾರ್ಮಿಕ ರಂಗಕ್ಕೆ ವಿಶಿಷ್ಟ ಸೇವೆ ಸಲ್ಲಿಸುವ ಮೂಲಕ ಖಂಡ್ರೆ ಮನೆತನ ರಾಜ್ಯಕ್ಕೆ ಅಪಾರ ಕೊಡುಗೆ ನೀಡಿದೆ ಎಂದು ಭಾತಂಬ್ರಾದ ಶಿವಯೋಗಿಶ್ವರ ಸ್ವಾಮೀಜಿ ಹೇಳಿದರು. ತಾಲ್ಲೂಕಿನ ಹಲಬರ್ಗಾದ ಮಹಾಮಠ ಶರಣಗಿರಿಯಲ್ಲಿ ನಡೆದ ಮೂರನೇ ವಾರ್ಷಿಕೋತ್ಸವ ಹಾಗೂ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ನೂತನ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಚಿವ ಈಶ್ವರ ಖಂಡ್ರೆ ಅವರ ಅಭಿನಂದನಾ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಭೀಮಣ್ಣ ಖಂಡ್ರೆ ಅವರು ನಡೆದ ದಾರಿಯಲ್ಲಿ ನಡೆಯುತ್ತಿರುವ ಸಚಿವ ಈಶ್ವರ ಖಂಡ್ರೆ ಅವರು ಜಿಲ್ಲೆಯ ಅಭಿವೃದ್ಧಿಗೆ ಅವಿರತವಾಗಿ ಶ್ರಮಿಸುತ್ತಿದ್ದಾರೆ.

ಇವರಲ್ಲಿರುವ ವಿಶೇಷ ಸೇವಾಮನೋಭಾವ, ಧರ್ಮನಿಷ್ಠೆ, ಪರೋಪಕಾರ, ಸಂಘಟನಾ ಚಾತುರ್ಯ, ಅಗಾಧ ಪಾಂಡಿತ್ಯವೇ ಇವರನ್ನು ಅವಿರೋಧವಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ನೂತನ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಕೊಂಡೊಯ್ದಿವೆ ಎಂದು ತಿಳಿಸಿದರು. ಶರಣಗಿರಿ ಮಹಾಮಠದ ಮಾತೆ ಬಸವಾಂಜಲಿ ತಾಯಿ ಮಾತನಾಡಿ, ಈಶ್ವರ ಖಂಡ್ರೆ ಅವರ ಅಭಿವೃದ್ಧಿಪರ ಕಾಳಜಿ, ನಾಯಕತ್ವದ ಗುಣ ಮಾದರಿಯಾಗಿವೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಚಿವ ಈಶ್ವರ ಖಂಡ್ರೆ, 122 ವರ್ಷಗಳ ಇತಿಹಾಸ ಹೊಂದಿರುವ ವೀರಶೈವ ಲಿಂಗಾಯತ ಮಹಾಸಭೆಗೆ 24ನೇ ಅಧ್ಯಕ್ಷರನ್ನಾಗಿ ವಿಶ್ವಾಸವಿಟ್ಟು ನನಗೆ ಜವಾಬ್ದಾರಿ ವಹಿಸಲಾಗಿದೆ. ಮಠಾಧೀಶರ ಮಾರ್ಗದರ್ಶನ ಹಿರಿಯರ ಅನುಭವ ಪಡೆದು ಸಮುದಾಯಕ್ಕೆ ಶಕ್ತಿ ತುಂಬುವ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರು.

ಮುಂಬರುವ ದಿನಗಳಲ್ಲಿ ರಾಜ್ಯದಾದ್ಯಂತ ವಸತಿ ನಿಲಯ ಕಟ್ಟಡಗಳನ್ನು ನಿರ್ಮಿಸಿ ಸಮಾಜದ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಶ್ರಮಿಸುವುದಾಗಿ ತಿಳಿಸಿದರು. ಸಿದ್ದಗಂಗಾ ಮಠದ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಶಿವಕುಮಾರ ಪಾಟೀಲ ತೇಗಂಪೂರ ಮಾತನಾಡಿ, ಶಿರಸಂಗಿ ಲಿಂಗರಾಜರು, ಶರಬಸಪ್ಪ ಅಪ್ಪ, ಸಿದ್ದಗಂಗೆಯ ಶಿವಕುಮಾರ ಸ್ವಾಮೀಜಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ ಬೃಹತ್ ಸಂಸ್ಥೆಗೆ ರಾಷ್ಟ್ರೀಯ ಅಧ್ಯಕ್ಷರಾಗಿ ಈಶ್ವರ ಖಂಡ್ರೆ ಅವರು ಅವಿರೋಧವಾಗಿ ಆಯ್ಕೆಯಾಗಿರುವುದು ತಾಲ್ಲೂಕಿಗೆ ಹೆಮ್ಮೆಯ ವಿಷಯ. ಇವರು ಮುಂಬರುವ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸಲಿ ಎಂದು ಆಶಿಸಿದರು. ಗುರುಬಸವ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಮಹಾತ್ಮಗಾಂಧಿ ಸಹಕಾರ ಸಕ್ಕರೆ ಕಾರ್ಖಾನೆಯ ಮಾಜಿ ಅಧ್ಯಕ್ಷ ವೈಜಿನಾಥರಾವ್ ಪಾಟೀಲ ಜ್ಯಾಂತಿ ಅಧ್ಯಕ್ಷತೆ ವಹಿಸಿದ್ದರು.

ಪ್ರಮುಖರಾದ ಶಿವಶಂಕರ ಪಾಟೀಲ ಕರಡ್ಯಾಳ, ಬಾಬುರಾವ್ ಹಾವಶೆಟ್ಟಿ, ಗುಂಡೆರಾವ್ ಪಾಟೀಲ, ಕಾಶಪ್ಪ ಮೂಲಗೆ, ಬಸವಣ್ಣಪ್ಪ ನೇಳಗೆ, ಜ್ಯೋತಿಷ ಹಲಬರ್ಗೆ ಸೇರಿದಂತೆ ಅನೇಕರು ಇದ್ದರು. ದೀಪಕ್ ಠಮಕೆ ನಿರೂಪಿಸಿದರು. ಪ್ರಭುರಾವ್ ಹೊಡಮನಿ ವಂದಿಸಿದರು.

# ವಿದ್ಯುತ್ ದರ ಪರಿಷ್ಕೃರಣೆ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ (ಜೆಸ್ಕಾಂ) 2026–28ನೇ ಆರ್ಥಿಕ ವರ್ಷದ ಎಂ.ವಾಯ್.ಟಿ. ಅವಧಿಗೆ ವಿದ್ಯುತ ದರ ಪರಿಷ್ಕರಣೆಗಾಗಿ ದಿನಾಂಕ: 25–02–2026 ರಂದು ಬೆಳಿಗ್ಗೆ 11 ಗಂಟೆಗೆ ನಿಗಮ ಕಚೇರಿ ಕಲಬುರಗಿಯಲ್ಲಿ ಸಾರ್ವಜನಿಕ ವಿಚಾರಣೆ ಸಭೆ ನಡೆಯಲಿದೆ.

ಆಸಕ್ತರು ತಮ್ಮ ಅಭಿಪ್ರಾಯಗಳನ್ನು ಮೌಖಿಕವಾಗಿ ಅಥವಾ ಲಿಖಿತವಾಗಿ ಮಂಡಿಸಬಹುದು. ಆನ್‌ಲೈನ್ ಮೂಲಕ ಭಾಗವಹಿಸಲು ಇಚ್ಛಿಸುವವರು ದಿನಾಂಕ: 23–02–2026 ರೊಳಗೆ ತಮ್ಮ ವಿವರಗಳನ್ನು ಇ-ಮೇಲ್ (asst.secykerc@gmail.com) ಮೂಲಕ ಕಳುಹಿಸಬೇಕು. ಗ್ರಾಹಕರು ಸಹಕರಿಸುವಂತೆ ಬೀದರ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನೀಯರರು(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ರೋಹಿಣಿ ಬೀರಾದಾರ ಅವರ 'ಅಪೂರ್ಣ ವಾತ್ಸಲ್ಯ' ಕೃತಿ ಬಿಡುಗಡೆ

• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ



ಪಟ್ಟಣದ ಜೈ ಭವಾನಿ ಕಲ್ಯಾಣ ಮಂಟಪದಲ್ಲಿ ನಡೆಯಲಿರುವ ತಾಲೂಕಿನ 3ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ನಿಂಬೂರ ಗ್ರಾಮದ ಯುವ ಕವಯಿತ್ರಿಯಾದ ಕು. ರೋಹಿಣಿ ಬಿರಾದಾರ ಅವರ ಚೊಚ್ಚಲ ಕೃತಿ 'ಅಪೂರ್ಣ ವಾತ್ಸಲ್ಯ' ಲೋಕಾರ್ಪಣೆಗೊಳ್ಳಲಿದೆ. ಅನೇಕ ಗಣ್ಯರ ಸಮ್ಮುಖದಲ್ಲಿ, ಹಿರಿಯ ಸಾಹಿತಿ ಮಾಣಿಕ ನೇಳಗಿ ಅವರ ಸರ್ವಾಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮ ಅತ್ಯಂತ ವೈಭವದಿಂದ ನಡೆಯಲಿದೆ. ಅಪ್ಪ ಪ್ರಕಾಶನದಿಂದ ಹೊರ ಬರುತ್ತಿರುವ ಈ ಕೃತಿಯು ತಾಯಿಯ ಮಮತೆ, ಅಗಲಿಕೆಯ ನೋವು ಮತ್ತು ಜೀವನದ ಭಾವನಾತ್ಮಕ ಅನಿಸಿಕೆಗಳನ್ನು ಒಳಗೊಂಡಿದ್ದು ಸಾಹಿತ್ಯಾಸಕ್ತರ ಗಮನ ಸೆಳೆಯುತ್ತದೆ.

# ಶಾಸಕರ ಮನೆ ಮುಂದೆ ವಾಲ್ಮೀಕಿ ನಾಯಕ ಸಮಾಜದಿಂದ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ಕಂಪ್ಲಿ

ಬೇರೆ ಬೇರೆ ಜನಾಂಗದವರು ವಾಲ್ಮೀಕಿ ನಾಯಕ ಸಮಾಜದ ಹೆಸರಿನಲ್ಲಿ ಪಡೆಯುತ್ತಿರುವ ಸುಳ್ಳು ಜಾತಿ ಪ್ರಮಾಣ ವಿತರಣೆಯನ್ನು ತಡೆಗಟ್ಟುವಲ್ಲಿ ಶಾಸಕರ ವಿಫಲತೆಯನ್ನು ವಿರೋಧಿಸಿ ಹಾಗೂ ಪರಿಶಿಷ್ಟ ಪಂಗಡದ ಸಂವಿಧಾನದ ಹಕ್ಕುಗಳ ರಕ್ಷಣೆಗಾಗಿ ಉತ್ತರ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಮಾಜದಿಂದ ಕಂಪ್ಲಿ ಪಟ್ಟಣದ ಹೊಸಪೇಟೆ ಬೈಪಾಸ್ ರಸ್ತೆಯಲ್ಲಿರುವ ಶಾಸಕ ಜೆ.ಎನ್. ಗಣೇಶ್ ಅವರ ನಿವಾಸದ ಮುಂದೆ ಪ್ರತಿಭನೆಯನ್ನು ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಉತ್ತರ ಕರ್ನಾಟಕ ಪ್ರದೇಶ ವಾಲ್ಮೀಕಿ ನಾಯಕ ಸಂಘದ ಅಧ್ಯಕ್ಷರಾದ ಮಾರೆಪ್ಪ ನಾಯಕ ಮಗದಂಪೂರ, ಎಸ್ಸಿ,ಎಸ್ಟಿ ನಕಲಿ ಜಾತಿ ಪ್ರಮಾಣ ಪತ್ರಗಳ ತಡೆ ಸಮಿತಿ ರಾಜ್ಯಾಧ್ಯಕ್ಷರಾದ ಕಲಬುರಗಿಯ ಶ್ರವಣಕುಮಾರ್ ಡಿ.ನಾಯಕ, ಧರಪ್ಪ ನಾಯಕ, ಬಳ್ಳಾರಿ ನಗರ ಪಾಲಿಕೆ ಸದಸ್ಯ ಹನುಮಂತಪ್ಪ, ವಾಲ್ಮೀಕಿ ನಾಯಕ ಮಹಾಸಭಾದ ಕಂಪ್ಲಿ ತಾಲ್ಲೂಕು ಅಧ್ಯಕ್ಷ ನೀರಗಂಟಿ ವೀರೇಶ್, ಕುರುಗೊಡು ತಾಲ್ಲೂಕು ಅಧ್ಯಕ್ಷ ನಾಗರಾಜ ಹಾಗೂ ಇತರರು ಹಿಂದುಳಿದ ಪ್ರವರ್ಗ–1ರಲ್ಲಿ ಬರುವ ಕೋಲಿ/ಕಬ್ಬಿಲಿಗ ಜನಾಂಗದ ತಳವಾರರು ಪರಿಶಿಷ್ಟ–ಪಂಗಡ, ನಾಯಕ, ನಾಯ್ಕಡ ಹೆಸರಿನಲ್ಲಿ ಜಾತಿಪ್ರಮಾಣ ಪತ್ರಗಳು, ಸಿಂಧುತ್ವಗಳನ್ನು ತೆಗೆದುಕೊಳ್ಳುವುದನ್ನು ತಡೆಗಟ್ಟಬೇಕು,

ಹಿಂದುಳಿದ ಪ್ರವರ್ಗ–1ರಲ್ಲಿ ಬರುವ ಕೊಲಿ/ಕಬ್ಬಲಿಗ/ ಜನಾಂಗದ ವೃತ್ತಿ ಸೂಚಕ ತಳವಾರರನ್ನು ಹಿಂದುಳಿದ ಪ್ರವರ್ಗ–1ರ ಪಟ್ಟಿಯ ಕ್ರಮಸಂಖ್ಯೆ 6ಕ್ಕೆ ಬೆಸ್ತ/ಕೋಲಿ/ಕಬ್ಬಲಿಗ ಗುಂಪಿನ 38ನೇ ಪದವಾಗಿ ಸೇರಿಸಬೇಕು. ಕರ್ನಾಟಕ ಉಚ್ಚನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ 13777/2023 ಹೂಡಿದ ಧಾವೆಯ ಮಧ್ಯಂತರ ಆದೇಶದ ಪ್ರಕಾರ ಪರಿಶಿಷ್ಟ ಪಂಗಡದ ನಾಯಕ, ನಾಯ್ಕಡ, ತಳವಾರ ಹೆಸರಿನಲ್ಲಿ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಪಡೆದುಕೊಂಡವರು ಮತ್ತು ನೀಡಿದವರ ಮೇಲೆ ಶೀಘ್ರವೇ ಕಾನೂನು ಕ್ರಮಗಳನ್ನು ಕೈಗೊಳ್ಳಬೇಕು.

ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶಿಕ್ಷನ ಮತ್ತು ಉನ್ನತ ಶಿಕ್ಷಣದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಸ್ಕಾಲರ್ ಶಿಪ್, ಪ್ರೋತ್ಸಾಹಧನ, ಸಹಾಯಧನ ತಕ್ಷಣ ಬಿಡುಗಡೆ ಮಾಡಬೇಕು. ರಾಜ್ಯದ ವಿವಿಗಳಲ್ಲಿ ಸಂಶೋಧನೆ ಮಾಡುತ್ತಿರುವ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮಾಸಿಕ ವೇತನ, ವಸತಿ ವೇತನ ಕೂಡಲೇ ಬಿಡುಗಡೆ ಮಾಡಬೇಕು. ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖೆಗೆ ಜನಾಂಗದ ಅಭಿವೃದ್ಧಿಗೋಸ್ಕರ 15ಸಾವಿ ಕೋಟಿ ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಮಗಡದ ಅಭಿವೃದ್ಧಿ ನಿಗಮಕ್ಕೆ ಒಂದು ಸಾವಿರ ಕೋಟಿ ಬಿಡುಗಡೆ ಮಾಡಬೇಕು, ರಾಜ್ಯದಲ್ಲಿ ಬುಡಕಟ್ಟು ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕು. ರಾಜ್ಯದಲ್ಲಿ ಪರಿಶಿಷ್ಟ ಪಂಗಡದ ಬೇಡ, ವಾಲ್ಮೀಕಿ, ನಾಯಕ ಜನಾಂಗದವರ ಮೇಲೆ ನಿರಂತರ ದೌರ್ಜನ್ಯ, ದಬ್ಬಾಳಿಕೆ, ಕೊಲೆ, ಅತ್ಯಾಚಾರ, ಅವಮಾನ ಮುಂತಾದ ಘಟನೆಗಳು ದಿನನಿತ್ಯ ಹೆಚ್ಚಾಗುತ್ತಿದ್ದು, ಇಂತಹ ಪ್ರಕರಣಗಳನ್ನು ತಡೆಗಟ್ಟಬೇಕು. ನಾಗರೀಕ ಜಾರಿ ನಿರ್ದೇಶನಾಲಯಕ್ಕೆ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ಸ್ವತಂತ್ರ ತನಿಕೆ ಮಾಡಲು ಮತ್ತು ಸುಮೋಟೋ




ಪ್ರಕರಣ ದಾಖಲಿಸಿಕೊಳ್ಳುವ ಅಧಿಕಾರನ್ನು ನೀಡಬೇಕೆಂದು ಆಗ್ರಹಿಸಿದರಲ್ಲದೆ. ಪರಿಶಿಷ್ಟ ಪಂಗಡದ ಜನಾಂಗದವರ ಅಭಿವೃದ್ಧಿಗೆ ಮೀಸಲಿಟ್ಟಿರುವ 11 ಸಾವರಿ ಕೋಟಿ ರೂಗಳನ್ನು ಗ್ಯಾರಂಟಿ ಯೋಜನೆಗೆ ಉಪಯೋಗಿಸಿಕೊಂಡಿರುವುದು ಮತ್ತು ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಮಗಡಗಳ ಅಭಿವೃದ್ಧಿ ನಿಗಮದ ಹಣ 187 ಕೋಟಿ ರೂಗಳನ್ನು ಭ್ರಷ್ಟಾಚಾರ ಮಾಡಿರುವುದು ಈ ಸಮಾಜಕ್ಕೆ ಮಾಡಿದ ದ್ರೋಹವಾಗಿದೆ ಎಂದು ಅಸಮಧಾನ ವ್ಯಕ್ತಪಡಿಸಿದ ಅವರು ರಾಜ್ಯದಲ್ಲಿ ಇಷ್ಟೆಲ್ಲಾ ಅಣ್ಯಾಯವಾದರೂ ಶಾಸನ ಸಭೆಗಳಲ್ಲಿ ಮೀಸಲಾತಿಯಲ್ಲಿ ಜಯಗಳಿಸಿರುವ ನಮ್ಮ ಸಮಾಜದ ಶಾಸಕರು ಧ್ವನಿ ಎತ್ತುತ್ತಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು ಈ ಎಲ್ಲಾ ಬೇಡಿಕೆಗಳನ್ನು ಶೀಘ್ರವಾಗಿ ಈಡೇರಿಸಬೇಕು ಮತ್ತು ಸರ್ಕಾರದ ಗಮನ ಸೆಳೆಯಬೇಕೆಂದು ರಾಜ್ಯದಲ್ಲಿ ಮೀಸಲಾತಿಯಲ್ಲಿ ಗೆದ್ದಿರುವ ಶಾಸಕರ ಮನೆಗಳ ಮುಂದೆ ಪ್ರತಿಭಟನೆ ಮಾಡುವ ಮೂಲಕ ಶಾಸಕರ ಗಮನ ಸೆಳೆಯುವ ಉದ್ದೇಶವೇ ಹೊರತು ಶಾಸಕರ ವಿರುದ್ಧ ಅಲ್ಲ. ಆದರೆ ಕಂಪ್ಲಿಯ ಶಾಸಕರು ಮಾತ್ರ ತಮ್ಮ ನೀವಾಸಕ್ಕೆ ಬರಲಿಲ್ಲವೆಂದು ಅಸಮಧಾನ ವ್ಯಕ್ತ ಪಡಿಸಿದರು.

ಇದೇ ಸಂದರ್ಭದಲ್ಲಿ ಶಾಸಕರಾದ ಜೆ.ಎನ್.ಗಣೇಶ ಅವರು ಪ್ರತಿಭಟನಾಕಾರರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ತಮ್ಮ ಮೊದಲೇ ನಿಗಧಿ ಪಡಿಸಿದ ಕಾರ್ಯಕ್ರಮಗಳಿರುವುದರಿಂದ ಅಲ್ಲಿಗೆ ಬರಲಾಗಿಲ್ಲ, ಯಾವುದೇ ದುರುದ್ದೇಶವಿಲ್ಲ, ನಮ್ಮ ಆಪ್ತರ ಕೈಯಲ್ಲಿ ಮನವಿ ಪತ್ರವನ್ನು ನೀಡಿ ನಾನು ಅದನ್ನು ನಮ್ಮ ಸಮಾಜದ ಸಚಿವರು ಹಾಗೂ ಶಾಸಕರ ಗಮನಕ್ಕೆ ತರುವ ಮೂಲಕ ಸೂಕ್ತ ನ್ಯಾಯ ಒದಗಿಸುತ್ತೇನೆ ಎಂದು ಸ್ಪಷ್ಟ ಪಡಿಸಿದರು.

ನಂತರ ಪ್ರತಿಭಟನಾಕಾರರು ಶಾಸಕರ ಆಪ್ತರಾದ ಕೆ.ಷಣ್ಮುಖ ಮತ್ತು ನಾಗರಾಜ ಅವರಿಗೆ ಮನವಿ ಪತ್ರವನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ದೊಡ್ಡಯರ್ರಿಸ್ವಾಮಿ, ಟಿ.ಶ್ರೀಧರ್, ವದ್ದಟ್ಟಿ ತಿಪ್ಪೆಸ್ವಾಮಿ, ಚಮದ್ರಸೋಮಸಮುದ್ರ, ಪಂಪಾಪತಿ, ಉಮೇಸ್, ಮಲ್ಲಿಕಾರ್ಜುನ, ಮಂಜು, ಸೂದ್ದಪ್ಪ, ಅಂಬಣ್ಣ, ಲೋಕೇಶ್, ಪ್ರಕಾಶ ಸೇರಿದಂತೆ ಇತರರು ಇದ್ದರು.

ಶಾಸಕರ ಮನೆ ಮುಂದೆ ಪ್ರತಿಭಟನೆ ನಡಸುತ್ತಿದ್ದರಿಂದ ಕಂಪ್ಲಿ ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

# ಮೂರು ರಾಜ್ಯ ಪ್ರಶಸ್ತಿ ಪಡೆದ 'ದಂತಪುರಾಣ' ಚಿತ್ರ ಇಂದು ಕಂಪ್ಲಿಯಲ್ಲಿ ಬಿಡುಗಡೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ ಕಂಪ್ಲಿ

ಇದೇ ಫೆ.21ರಂದು ಕಂಪ್ಲಿ ನಗರದ ಚಂದ್ರಕಲಾ ಚಿತ್ರ ಮಂದಿರಲ್ಲಿ ಮೂರು ರಾಜ್ಯ ಪ್ರಶಸ್ತಿ ಪಡೆದ ದಂತಪುರಾಣ ಚಿತ್ರ ಬಿಡುಗಡೆಯಾಗಲಿದ್ದು, ಮಾನ್ಯ ಶಾಸಕ ಜೆ.ಎನ್.ಗಣೇಶ ಬಿಡುಗಡೆಗೊಳಿಸುವ ಮೂಲಕ ಉದ್ಘಾಟಿಸಲಿದ್ದು, ಒಳ್ಳೆಯ ಕಥೆ ಆಧರಿತ ಚಿತ್ರವನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನರು ವೀಕ್ಷಿಸುವದರೊಂದಿಗೆ ಯಶಸ್ವಿಗೊಳಿಸಬೇಕು ಎಂದು ಚಲನಚಿತ್ರದ ನಿರ್ದೇಶಕ ವಿಶಾಲ್ ರಾಜ್ ಹೇಳಿದರು.

ಗುರುವಾರ ಅವರು ಪಟ್ಟಣದಲ್ಲಿ ಚಿತ್ರದ ಪೋಸ್ಟರ್ ಗಳನ್ನು ಬಿಡುಗಡೆಗೊಳಿಸಿದ ನಂತರ ಮಾತನಾಡಿ, ಈ ಚಿತ್ರವು ಉತ್ತರ ಕರ್ನಾಟಕದ ಸಂಸ್ಕೃತಿ, ಪರಂಪರೆ ಹಾಗೂ ಇಂದಿನ ಜೀವನಶೈಲಿ ಒಳಗೊಂಡಿದೆ. ಮಕ್ಕಳ ಚಲನಚಿತ್ರ ದಂತಪುರಾಣ ಮೂರು ಪ್ರಶಸ್ತಿ ಪುರಸ್ಕೃತಗೊಂಡಿದೆ. ಮೂರು ಕರ್ನಾಟಕ ರಾಜ್ಯ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿರುವ ವಿಭಿನ್ನ ಕಥಾನವಸ್ತುವಿನ ಕನ್ನಡ ಸಿನಿಮಾವಾಗಿದೆ. ಸಾಮಾಜಿಕ ಸಂದೇಶ, ನೈಜ ಪಾತ್ರಗಳು ಹಾಗೂ ಶಕ್ತಿಶಾಲಿ ನಿರೂಪಣೆಯೊಂದಿಗೆ ಪ್ರೇಕ್ಷಕರ ಮನಸೂರೆಗೊಂಡ ಈ ಚಿತ್ರವನ್ನು ತಪ್ಪದೇ ಕಂಪ್ಲಿ ಜನತೆ ನೋಡಬೇಕು. ಮತ್ತು ಮಕ್ಕಳೊಂದಿಗೆ ಪೋಷಕರು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಮಂದಿರಕ್ಕೆ ಆಗಮಿಸಿ, ಇದೇ ಶನಿವಾರದಂದು ಚಿತ್ರಕ್ಕೆ ಹಾರೈಯಿಸಬೇಕು ಎಂದರು.

ಈ ಸಂದರ್ಭದಲ್ಲಿ ನಿರ್ಮಾಪಕ ನವೀನ್ ಶರ್ಮ, ಮುಖಂಡರಾದ ಗಣೇಶ ಯಾದವ್, ಶಿವುಕುಮಾರ, ನೆಣಕಿ ಗಿರೀಶ್, ಆರ್.ಪಿ.ಶಶಿಕುಮಾರ ಸೇರಿದಂತೆ

# ಶಾಲಾ ಕಾಲೇಜುಗಳಲ್ಲಿ ವಿವಿಧ ಸಮಿತಿಗಳನ್ನು ರಚಿಸಿ: ಇಟ್ನಾಳ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಜಿಲ್ಲೆಯ ಎಲ್ಲಾ ಶಾಲಾ–ಕಾಲೇಜು ಮತ್ತು ವಿಶ್ವವಿದ್ಯಾಲಯ ಹಾಗೂ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಆ್ಯಂಟಿಡ್ರಗ್ ಕಮಿಟಿಗಳನ್ನು ರಚಿಸಿ ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದಂತೆ ಅವರಿಗೆ ತಿಳಿ ಹೇಳಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಹೇಳಿದರು.

ಅವರು ಬುಧವಾರ ಜಿಲ್ಲಾಧಿಕಾರಿ ಕಛೇರಿ ಸಭಾಂಗಣದಲ್ಲಿ ಕರೆದ ನಾರ್ಕೋ ಕೋ– ಆರ್ಡಿನೇಷನ್ ಸೆಂಟರ್ (NCORD) ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ ಸೇರಿದಂತೆ ಜಿಲ್ಲೆಯ ಎಲ್ಲಾ ಆಸ್ಪತ್ರೆಯಲ್ಲಿ ಮಾದಕ ದ್ರವ್ಯ ಪತ್ತೆ ಹಚ್ಚುವ 50 ಕಿಟ್‌ಗಳನ್ನಾದರೂ ಎಲ್ಲಾ ಆಸ್ಪತ್ರೆಗಳಲ್ಲಿ ಇಡಬೇಕು.

ಜಿಲ್ಲಾ ಆಸ್ಪತ್ರೆಯಲ್ಲಿ ಸ್ವಲ್ಪ ಹೆಚ್ಚಿನ ಸಂಖ್ಯೆಯಲ್ಲಿ ಅವುಗಳು ಇರುವಂತೆ ನೋಡಿಕೊಳ್ಳಿ. ಅಬಕಾರಿ ಇಲಾಖೆಯವರು ಇಲ್ಲಿಯವರೆಗೆ ಎಷ್ಟು ರೆಸಾರ್ಟ್‌ಗಳಿಗೆ ಭೇಟಿ ನೀಡಿದ್ದೀರಾ, ರೆಸಾರ್ಟ್‌ಗಳಲ್ಲಿ ಯಾವುದೇ ಮಾದಕ ವಸ್ತುಗಳು ಕಂಡು ಬಂದಲ್ಲಿ ತಕ್ಷಣವೇ ಅಂತಹ ರೆಸಾರ್ಟ್‌ಗಳ ವಿರುದ್ಧ ಕ್ರಮ ಕೈಗೊಳ್ಳುವುದರ ಜೊತೆಗೆ ಹೆಚ್ಚಿನ ಪ್ರಕರಣಗಳನ್ನು ದಾಖಲಿಸಿ. ಜಿಲ್ಲೆಯ ಎಲ್ಲಾ ರೆಸಾರ್ಟ್‌ಗಳಿಗೆ ಆಗಾಗ್ಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳಬೇಕು ಎಂದರು.

ಮಾದಕ ವಸ್ತುಗಳ ಸಾಗಾಟ, ಮಾರಾಟ ಮತ್ತು ಬಳಕೆಯ ಕುರಿತ ವಿಷಯಗಳನ್ನು ಗಂಭೀರವಾಗಿ ಪರಿಗಣಿಸಿ. ಇಂತಹ ಯಾವುದೇ ಪ್ರಕರಣಗಳು ಕಂಡು ಬಂದರೆ ಪೊಲೀಸ್, ಅರಣ್ಯ ಇಲಾಖೆ, ಸಾರಿಗೆ, ಅಬಕಾರಿ ಹಾಗೂ ಇತರೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ತಕ್ಷಣ ಕ್ರಮವಹಿಸಬೇಕು. ರೆಸಾರ್ಟ್, ಡಾಬಾಗಳು, ಹೊಟೇಲ್, ಸ್ಟೇ ಹೋಂಗಳಿಗೆ ಆಗಾಗ ಭೇಟಿ ನೀಡಿ ಪರಿಶೀಲನೆ ನಡೆಸುತ್ತಿರಬೇಕು. ಗಾಂಜಾವನ್ನು ಸಾಗುವಳಿ ಭೂಮಿಯ ಮಧ್ಯಭಾಗದಲ್ಲಿ ಹೆಚ್ಚಾಗಿ ಬೆಳೆಯುತ್ತಾರೆ ಎನ್ನುವ ದೂರುಗಳಿದ್ದು, ಈ ಕುರಿತು ಅರಣ್ಯ ಇಲಾಖೆಯವರು ಗಮನ ಹರಿಸಲು ತಮ್ಮ ಸಿಬ್ಬಂದಿಗಳನ್ನು ಬೀಟ್‌ಗಳಾಗಿ ನಿಯೋಜಿಸಿ ಗಮನ ಹರಿಸುತ್ತಿರಬೇಕೆಂದು ಹೇಳಿದರು.

ಈ ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ರಾಮ್ ಎಲ್. ಅರಸಿದ್ದಿ, ಜಿಲ್ಲಾ ಆರೋಗ್ಯ ಅಧಿಕಾರಿ ಟಿ. ಲಿಂಗರಾಜು, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಜಗದೀಶ್

, ಪ್ರಾದೇಶಿಕ ಸಾರಿಗೆ ಅಧಿಕಾರಿ ಪಿ.ಎಸ್. ಹಿರೇಮಠ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕರಾದ ಸೋಮಶೇಖರಗೌಡ ಪಾಟೀಲ ಸೇರಿದಂತೆ ಅರಣ್ಯ, ಸಾರಿಗೆ ಇಲಾಖೆ, ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಶಿವಾಜಿ ಜಯಂತಿ, ಗಮನ ಸೆಳೆದ ಮೆರವಣಿಗೆ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಗರದಲ್ಲಿ ನಿನ್ನೆ ಸಂಜೆ ಛತ್ರಪತಿ ಶಿವಾಜಿ ಮಹಾರಾಜರ. ಜಯಂತಿಯನ್ನು ಜಿಲ್ಲಾಡಳಿತದಿಂದ ವಿಜೃಂಭಣೆಯಿಂದ ಆಚರಿಸಲಾಯ್ತು. ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದಲ್ಲಿ ನಡೆದ ಕಾರ್ಯಕ್ರಮವನ್ನು ಹುಲುಗಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಪ್ರಕಾಶ್ ರಾವ್ ಮೊದಲಾದ ಗಣ್ಯರು ಉದ್ಘಾಟಿಸಿದರು.ಶಿವಾಜಿ ಮಹಾರಾಜರ ಕುರಿತು ಉಪನ್ಯಾಸ ನೀಡಿದ ರಾಜ್ಯ ಸರ್ಕಾರಿ ನೌಕರರ ಮಾಜಿ ಅಧ್ಯಕ್ಷ ಎಂ.ಶಿವಾಜಿರಾವ್, ತಾಯಿ ಜೀಜಾಬಾಯಿ ಆಶಯದಂತೆ ಹಿಂದೂ ಧರ್ಮ ರಕ್ಷಣೆಗೆ ಶಿವಾಜಿ ಮಹಾರಾಜರು ಸುಲ್ತಾನರ ವಿರುದ್ಧ ನಡೆಸಿದ ಕೆಚ್ಚೆದೆಯ ಹೋರಾಟ ಸ್ಮರಣೀಯ ಎಂದರು.

ಕ್ಷತ್ರಿಯ ಸಮಾಜದ ಮುಖಂಡ ನಾಗರಾಜ್ ಚವ್ಹಾಣ್ ಮೊದಲಾದವರು ಪಾಲ್ಗೊಂಡಿದ್ದರು. ಕೋಲಾಚಲಂ ಸಂಧ್ಯಾ ಭಕ್ತಿ ಸಂಗೀತ ಪ್ರಸ್ತುತಪಡಿಸಿದರು. ಇವರಿಗೆ ಎಂ.ಅಹಿರಾಜ್, ಸತ್ಯನಾರಾಯಣ ತಬಲಾ ಸಾಥ್, ಪೊಲಕ್ಸ್ ಹನುಮಂತಪ್ಪ ಹಾರ್ಮೋನಿಯಂ ಸಾಥ್ ನೀಡಿದರು.ಕಾರ್ಯಕ್ರಮಕ್ಕೂ ಮುನ್ನ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆ ಮರಾಟ ಸಮುದಾಯದ ಜನತೆ ಮತ್ತು ಜಾನಪದ ಕಲಾತಂಡಗಳಿಂದ ನಗರದ ಮುನಿಷಿಪಲ್ಹೈಸ್ಕೂಲ್ ಮೈದಾನದಿಂದ ಆರಂಭಗೊಮನಡು ರಂಗಮಂದಿರಕ್ಕೆ ಸಾಗಿಬಂತು.


ವಿಳಂಬ, ಗೈರು:

ಮೆರವಣಿಗೆ ನಾಲ್ಕುಗಂಟೆಗೆ ಆರಂಭವಾಗಬೇಕಾದ್ದು 5.30 ಕ್ಕೆ, ವೇದಿಕೆ ಕಾರ್ಯಕ್ರಮ 6 ಕ್ಕೆ ಆರಂಭವಾಗಬೇಕಾದ್ದು 8 ಗಂಟೆಗೆ ಶುರುವಾಯ್ತು.ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸಿದ್ದ 20 ಕ್ಕೂ ಹೆಚ್ಚು ಹೆಸರುಗಳಲ್ಲಿ ಯಾವೊಬ್ಬ ಜನಪ್ರತಿನಿಧಿ, ಅಧಿಕಾರಿಗಳು ಸಮಾರಂಭಕ್ಕೆ ಆಗಮಿಸಿರಲಿಲ್ಲ.

### ಜೆಡಿಎಸ್ ಜಿಲ್ಲಾಧ್ಯಕ್ಷರಾಗಿ ತಾಯಣ್ಣ ನೇಮಕ ಅಭಿನಂದನಾ ಸಮಾರಂಭ

## ಬಡವರ ರಕ್ತ ಹೀರುವ ಸರ್ಕಾರ: ನೇಮಿರಾಜ್ ನಾಯ್ಕ್ ವಾಗ್ದಾಳಿ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ರಾಜ್ಯ ಕಾಂಗ್ರೆಸ್ ಸರ್ಕಾರ ಬುರುಡೆ ಬಿಡುವ ಸರ್ಕಾರ,ಬಡವರ ರಕ್ತ ಹೀರುವ ಸರ್ಕಾರವಿದು, 6 ತಿಂಗಳ ಗೃಹಲಕ್ಷ್ಮೀ ಹಣ, 15 ಸಾವಿರ ಕೋಟಿ ಕೊಳ್ಳೆ ಹೊಡೆದ ಸರ್ಕಾರವಿದು, ಬಡವರ ದುಡ್ಡು ಕೊಳ್ಳೆ ಹೊಡೆದ ಸರ್ಕಾರ, ಇಂತಹ ಕೆಟ್ಟ ಸರ್ಕಾರವನ್ನು ಎಂದು ನೋಡಿಯೇ ಇಲ್ಲ, ಕೈ ನಾಯಕರು ಮನೆ ಬಾಗಿಲಿಗೆ ಬಂದಾಗ ಇದನ್ನು ಪ್ರಶ್ನಿಸಿ ಎಂದು ಹಗರಿಬೊಮ್ಮನಹಳ್ಳಿ ಕ್ಷೇತ್ರದ ಶಾಸಕ ನೇಮಿರಾಜ ನಾಯ್ಕ್ ಅವರು ಹೇಳಿದರು.

ನಗರದ ಜೆಡಿಎಸ್ ಜಿಲ್ಲಾ ಕಚೇರಿ ಆವರಣದಲ್ಲಿ ಜನತಾದಳ (ಜಾತ್ಯತೀತ) ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರಾಗಿ 3ನೇ ಬಾರಿ ನೇಮಕಗೊಂಡ ಮೀನಳ್ಳಿ ತಾಯಣ್ಣ ಅವರಿಗೆ ಅಭಿನಂದನೆ, ಪದಗ್ರಹಣ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದರು. 5 ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಹೆಣಗಾಡುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಬೆಲೆಗಳನ್ನು ಹೆಚ್ಚಳ ಮಾಡುವ ಮೂಲಕ ಬಡವರ ನೆಮ್ಮದಿ ಜೀವನವನ್ನು ಕಸಿದುಕೊಂಡಿದೆ. ಬಡವರ ವಿರೋಧಿ, ರೈತ ವಿರೋಧಿ ಸರ್ಕಾರ ಇದು, ನಮ್ಮ ದುಡ್ಡಲ್ಲಿ ಶಾಸಕರು, ಸಚಿವರು ವಿದೇಶಿ ಪ್ರವಾಸಕ್ಕೆ ಮಾಡುತ್ತಿದ್ದಾರೆ, ನಾಚಿಕೆಯಾಗಬೇಕು ಎಂದರು.

ನಮ್ಮ ಸಂಘಟನೆ ಬಲವಾಗಬೇಕು, ಪ್ರತಿಯೊಬ್ಬರೂ ಪಕ್ಷವನ್ನು ತಳಮಟ್ಟದಿಂದ ಗಟ್ಟಿಗೊಳಿಸಲು ಶ್ರಮಿಸಬೇಕು, ನಮ್ಮ ಕುಮಾರಣ್ಣ, ದೇವೇಗೌಡ ಅವರು, ನಿಖಿಲ್ ಕುಮಾರಸ್ವಾಮಿ ಕಾಲಿಗೆ ಚಕ್ರ ಕಟ್ಟಿಕೊಂಡು ಪ್ರವಾಸ ಮಾಡುತ್ತಿದ್ದು, ಕಾರ್ಯಕರ್ತರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದ್ದಾರೆ ಎಂದರು. ಸ್ಥಳೀಯ ಸಂಸ್ಥೆಗಳ ಚುನಾವಣೆ ಎದುರಾಗಿದ್ದು, ಪ್ರತಿಯೊಬ್ಬ ಕಾರ್ಯಕರ್ತರು, ನಮ್ಮ ಕುಮಾರಣ್ಣ ಅವಧಿಯಲ್ಲಿ

ಜಾರಿಗೊಳಿಸಿದ ಜನಪದ ಕಾರ್ಯಕ್ರಮಗಳನ್ನು ಮನೆ ಮನಗೆ ತಲುಪಿಸಬೇಕು ಎಂದರು.

ಜೆಡಿಎಸ್ ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ರಾಜಾ ವೆಂಕಟಪ್ಪನಾಯಕ ಮಾತನಾಡಿ, ರೈತರ ಬಗ್ಗೆ ವಿಶೇಷ ಕಾಳಜಿ ಇರುವ ಪಕ್ಷ ನಮ್ಮದು, ನಮ್ಮ ಕುಮಾರಣ್ಣ ಹಾಗೂ ದೇವೇಗೌಡ ಅವರು ರಾಜ್ಯಕ್ಕೆ ತಮ್ಮದೇ ಆದ ಅನೇಕ ಕೊಡುಗೆಗಳನ್ನು ನೀಡಿದ್ದಾರೆ. ಕುಮಾರಣ್ಣ ಅವರು ಅವಧಿಯಲ್ಲಿ ರೈತರ 25 ಸಾವಿರ ಕೋಟಿ ಸಾಲ ಮನ್ನಾ ಮಾಡುವ ಮೂಲಕ ಇತಿಹಾಸ ಸೃಷ್ಟಿಸಿದ್ದಾರೆ. ಕಾರ್ಯಕರ್ತರೇ ಪಕ್ಷದ ಜೀವಾಳ, ಪ್ರತಿಯೊಬ್ಬ ನಮ್ಮೆಲ್ಲ ಕಾರ್ಯಕರ್ತರು ಹಗಲಿರುಳು ಶ್ರಮಿಸಬೇಕು.

2028ಕ್ಕೆ ನಮ್ಮ ಕುಮಾರಣ್ಣ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನೂತನ ಜಿಲ್ಲಾಧ್ಯಕ್ಷ ಮೀನಳ್ಳಿ ತಾಯಣ್ಣ ಅವರು ಮಾತನಾಡಿ, ಕಳೆದ ಸುಮಾರು ವರ್ಷಗಳಿಂದ ಪಕ್ಷದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿರುವೆ, ನನ್ನ ಕೊನೆ ಉಸಿರು ಇರೋವರೆಗೂ ಪಕ್ಷದಲ್ಲಿರುವೆ, ಪಕ್ಷ ನನ್ನ ತಾಯಿ ಇದ್ದಂತೆ. ವರಿಷ್ಠರು ನನ್ನನ್ನು ಗುರುತಿಸಿ 3ನೇ ಬಾರಿ ಜೆಡಿಎಸ್ ಜಿಲ್ಲಾಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ, ನಮ್ಮ ವರಿಷ್ಠರಿಗೆ, ನಮ್ಮ ಎಲ್ಲ ಗಣ್ಯರಿಗೂ ಅಭಿನಂದನೆಗಳನ್ನು ಸಲ್ಲಿಸುವೆ. ಯುಗಾದಿ ಹಬ್ಬದ ಬಳಿಕ ಗ್ರಾಮೀಣ ಕ್ಷೇತ್ರದಿಂದಲೇ ಪಕ್ಷವನ್ನು ಮತ್ತಷ್ಟು ತಳಮಟ್ಟದಿಂದ ಸಂಘಟಿಸಲು ಒತ್ತು ನೀಡುವೆ ಎಂದರು.

ಯುವ ಘಟಕದ ರಾಜ್ಯ ಕಾರ್ಯದರ್ಶಿ ರಾಜೂ ನಾಯ್ಕ್, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲಕ್ಷ್ಮೀಕಾಂತ ರೆಡ್ಡಿ, ವಿಜಯನಗರ ಜಿಲ್ಲಾಧ್ಯಕ್ಷ ಮೃತ್ಯುಂಜಯ ಬಾದಾಮಿ, ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್, ಕೊಟ್ರೇಶ್ ಹೊಸಪೇಟೆ, ಸೋಮಪ್ಪ ಕುರೆಕೊಪ್ಪ, ಜಂಬುನಾಥ್ ಯಾದವ್, ಹೊನ್ನೂರು ಸ್ವಾಮಿ, ಮೀನಳ್ಳಿ ರಮೇಶ್, ಕಿರಣ್ ಕುಮಾರ್, ನ್ಯಾಯವಾದಿ ವಸಂತ ಕುಮಾರ್ ಮಹಿಳಾ ಘಟಕದ ಅಧ್ಯಕ್ಷೆ ಜಮಿಲಾ

ಸೇರಿದಂತೆ ಇತರರಿದ್ದರು.ನ್ಯಾಯವಾದಿ ಯಲ್ಲಗೌಡ ಅವರು ಸ್ವಾಗತಿಸಿದರು. ನಂತರ ನೂತನ ಪದಾಧಿಕಾರಿಗಳಿಗೆ ಆದೇಶ ಪತ್ರಗಳನ್ನು ವಿತರಿಸಿ, ಸನ್ಮಾನಿಸಿ ಗೌರವಿಸಲಾಯಿತು.

## ನಡೆ ನುಡಿ ಒಂದಾದರೆ ಮಾತ್ರ ಸಮಾಜದ ಬದಲಾವಣೆ ಸಾಧ್ಯ: ಕೊಟ್ಟೂರು ಶ್ರೀ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ನಡೆ, ನುಡಿ ಒಂದಾಗಿರುವವರ ಮಾತಿಗೆ ಸಮಾಜದಲ್ಲಿ ಬದಲಾವಣೆ ಮೂಡಿಸುವ ಶಕ್ತಿ ಇರುತ್ತದೆ ಎಂದು ನಿರಂಜನ ಜಗದ್ಗುರು ಕೊಟ್ಟೂರು ಬಸವಲಿಂಗ ಸ್ವಾಮಿ ಹೇಳಿದ್ದಾರೆ.

ನಗರದ ಕೊಟ್ಟೂರು ಸ್ವಾಮಿ ಮಠದಲ್ಲಿ ಅಕ್ಕನ ಬಳಗದ ಸಹಯೋಗದಲ್ಲಿ ನಡೆದ 'ಶಿವಾನುಭವ ಸಂಪದ-10'ರಲ್ಲಿ ಆಶೀರ್ವಚನ ನೀಡಿದ ಅವರು, ಕತ್ತಲನ್ನು ಓಡಿಸಲು ದೀಪ ಬೇಕು. ದೀಪದ ಬೆಳಕು ಬೇಕು. ಜಗತ್ತಿನ ಅಂಧಕಾರವನ್ನು ಓಡಿಸಲು ಜ್ಯೋತಿ ಬೇಕು. ಆ ಜ್ಯೋತಿಯು ಮಾತಾಗಬೇಕು. ಮಾತೇ ಬೆಳಕು ಆಗಬೇಕು. ಆ ಮಾತು ಜ್ಯೋತಿರ್ಲಿಂಗ ಆಗಬೇಕೆಂದರು.

ಪ್ರಸ್ತುತ ದಿನಗಳಲ್ಲಿ ಶ್ರವಣ ಇಂದ್ರಿಯ ಅತ್ಯಂತ ಚುರುಕನ್ನು ಪಡೆದಿದೆ. ಎಲ್ಲೆಲ್ಲೂ ಮಾತೇ ಚಾಲ್ತಿಯಲ್ಲಿದೆ. ಪ್ರಸ್ತುತ ದಿನಗಳಲ್ಲಿ ಮಾತಿಗೆ ಸಾಕಷ್ಟು ಮಹತ್ವವಿದೆ. ಮಾತಿಗೆ ದೊಡ್ಡ ಬೆಲೆ ಇದೆ. ಸತ್ಯ, ಪ್ರಾಮಾಣಿಕತೆ, ಮಾನವೀತೆಗಳನ್ನು ಒಳಗೊಂಡಿರುವ ಮಾತಿಗೆ ಸಾಕಷ್ಟು ಮೌಲ್ಯವಿದೆ. ಅದರಲ್ಲೂ ನಡೆ ಮತ್ತು ನುಡಿ ಒಂದಾಗಿರುವ ಮಾತಿಗೆ ಸಮಾಜದಲ್ಲಿ ಬಲದಾವಣೆ ತರುವ ಶಕ್ತಿ ಇರುತ್ತದೆಂದರು.

ರಾವ್ಬಹದ್ದೂರ್ ವೈ. ಮಹಾಬಲೇಶ್ವರಪ್ಪ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ. ಎ. ತಿಮ್ಮನಗೌಡ, 'ಮಾತೆಂಬುದು ಜ್ಯೋತಿರ್ಲಿಂಗ' ವಿಷಯದ ಉಪನ್ಯಾಸ ನೀಡಿ, ಲಿಂಗದಿಂದ ಹೊರಹೊಮ್ಮುವ ಕಿರಣಗಳಂತೆ ನಮ್ಮ ಮಾತಿನಲ್ಲಿ ಬೆಳಕಿರಬೇಕು. ಕೇಳುಗರ ಮನಸ್ಸಿನಲ್ಲಿ ಬೆಳಕು ಮೂಡಿಸಿ, ಬದುಕಿನಲ್ಲಿ ಮಹತ್ವ ಪಡೆಯಬೇಕು. ಮಾತುಗಳಲ್ಲಿ ಮೃದುತ್ವ ಇರಬೇಕು. ಮಾತು ವ್ಯಕ್ತಿಯ ವ್ಯಕ್ತಿತ್ವವನ್ನೂ, ಭವಿಷ್ಯವನ್ನೂ ನಿರ್ಧರಿಸುವ ಶಕ್ತಿಯನ್ನು ಹೊಂದಿದೆ. ಕಾರಣ ಪ್ರತಿಯೊಬ್ಬರೂ ಮಾತನಾಡುವ ಮೊದಲು ಆಲೋಚಿಸಿ, ಮಾತನಾಡಬೇಕೆಂದರು.

ಸಂಜಯಗಾಂಧಿ ಪಾಲಿಟೆಕ್ನಿಕ್ನ ಪ್ರಾಂಶುಪಾಲ ಗೌರಿಶಂಕರ ಹಿರೇಮಠ, ದ್ವಾದಶ ಜ್ಯೋತಿರ್ಲಿಂಗಗಳನ್ನು ದರ್ಶನ ಮಾಡಿದಷ್ಟು ಭಾಗ್ಯ 'ಮಾತೆಂಬುದು ಜ್ಯೋತಿರ್ಲಿಂಗ'ದ ಅರ್ಥವನ್ನು ತಿಳಿಯುವುದರಿಂದ ಆಗಲಿದೆ. ಪ್ರತಿ ಮಾತಲ್ಲಿ ಒಳ್ಳೆತನವನ್ನು, ಮಾನವೀಯತೆಯನ್ನು, ಆದರ್ಶಗಳನ್ನು, ಸರಳತೆಯನ್ನು ಅಳವಡಿಸಿಕೊಳ್ಳಬೇಕೆಂದರು.

ಹಾನಗಲ್ಲು ಶ್ರೀಕುಮಾರೇಶ್ವರ ಪಾಲಿಟೆಕ್ನಿಕ್ನ ಪ್ರಾಂಶುಪಾಲ ಬಿ. ಶ್ರೀಶೈಲಗೌಡ, ಮಾತು ಜ್ಯೋತಿಯಂತೆ ಅನೇಕರ ಬದುಕಿನಲ್ಲಿ ಬೆಳಕನ್ನು ಮೂಡಿಸಿ, ಕತ್ತಲನ್ನು ಕಳೆಯಬೇಕು. ಮಾತು ಅನೇಕರಿಗೆ ಸ್ಫೂರ್ತಿಯನ್ನು ನೀಡಬೇಕು. ಯುವಪೀಳಿಗೆಯು ಮಾತಿನ ಮೌಲ್ಯ, ಮಾತಿನ ಮಹತ್ವ ಮತ್ತು ಮಾತಿನ ಪ್ರಭಾವಗಳ ಕುರಿತು ತಿಳಿಯಬೇಕೆಂದರು.

ಅಕ್ಕನ ಬಳಗದ ಸುರೇಶ ಎಸ್. ಮಲ್ಲನಗೌಡ ಸ್ವಾಗತ ಕೋರಿ, ಕಾರ್ಯಕ್ರಮ ನಿರ್ವಹಿಸಿದರು. ಪಾರ್ವತಿ, ವಿನುತ ಪ್ರಾರ್ಥನೆ. ಶಕುಂತಲ ವಂದನಾರ್ಪಣೆ ಸಲ್ಲಿಸಿದರು.

### ನ್ಯಾಯಯುತ ಪರಿಹಾರಕ್ಕಾಗಿ ಭೂಸಂತ್ರಸ್ಥರಿಂದ

## ಮಾ.7 ಕ್ಕೆ ರಾಷ್ಟ್ರೀಯ ಹೆದ್ದಾರಿ ಬಂದ್




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತಾಲೂಕಿನ ಕುಡುತಿನಿ ಸುತ್ತಮುತ್ತಲ ಪ್ರದೇಶದಲ್ಲಿನ ಜಮೀನನ್ನು ಕೈಗಾರಿಕೆಗಳಿಗೆ ವಶಪಡಿಸಿಕೊಂಡು. ಕೈಗಾರಿಕೆ ಆರಂಭಿಸದೇ ಇರುವುದರ ವಿರುದ್ಧ, ಭೂಸಂತ್ರಸ್ಥರಿಗೆ ನ್ಯಾಯಯುತವಾದ ಭೂ ಪರಿಹಾರ ನೀಡದಿರುವುದಕ್ಕೆ ಬೇಸತ್ತು. ಕುಡುತಿನಿ ಬಳಿ ಮಾ.7 ರಂದು ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಿ ಪ್ರತಿಭಟನೆ ಮಾಡಲಿದೆಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷ ಯು.ಬಸವರಾಜ್ ಹೇಳಿದ್ದಾರೆ.

ಅವರು ಇಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ. ಈ ಭಾಗದಲ್ಲಿ ಕೈಗಾರಿಕೆ ಆರಂಭಿಸಲು. ಕೈಗಾರಿಕಾ ಕಂಪನಿಗಳ ಜೊತೆ ಶಾಮೀಲಾಗಿ. ನಡೆದ 20 ಸಾವಿರ ಕೋಟಿ ರೂಗಳ ಭೂ ಹಗರಣ ಇದು ಎಂದು ಆರೋಪಿಸಿದರು.

ಈ ಹಿಂದೆ ಜಿಲ್ಲಾಡಳಿತ ಭೂ ಬೆಲೆ ನಿಗಧಿ ಮಾಡಿದ್ದನ್ನು ರೈತರು ಒಪ್ಪಿರಲಿಲ್ಲ. ಆದರೂ ಸಹಮತದ ಒಪ್ಪಿಗೆ (ಕನ್ಸಲ್ಟ್ ಅವಾರ್ಡ್) ಎಂದು ಸರಕಾರ ಹೇಳುತ್ತಿರುವುದು ಸರಿಯಲ್ಲ ಈ ಕುರಿತು ಕಳೆದ ಮೂರು ವರ್ಷಗಳಿಂದ ಹೋರಾಟ ಮಾಡುತ್ತಿದೆ. ಸರ್ಕಾರ, ಶಾಸಕರು, ಸಂಸದರು ಭರವಶೆ ಕೊಡುತ್ತಾರೆ. ಆದರೆ ರೈತರ ಒರ ಯಾವುದೇ ಘೋಷಣೆ ಆಗುತ್ತಿಲ್ಲ.

ಅದಕ್ಕಾಗಿ ಸರ್ಕಾರದ ಗಮನ ಸೆಳೆಯಲು ಕಾರ್ಮಿಕ, ರೈತಪರ, ಪ್ರಗತಿಪರ, ಕನ್ನಡ ಪರ ಸಂಘಟನಗಳು ಸೇರಿ, ಮಾ. 7 ರಂದು ಬೆಳಿಗ್ಗೆ 9 ರಿಂದ . ಕುತಿನಿಬಳಿ ರಾಷ್ಟ್ರೀಯ ಹೆದ್ದಾರಿ ಬಂದ್ ಮಾಡಲಿದೆ. ಹೋರಾಟವನ್ನು ತೀವ್ರತೆಗೆ ತೆಗೆದುಕೊಂಡು ಹೋಗಲಿದೆಂದು. ನಂತರ ಒಂದು ತಿಂಗಳ ನಂತರ ಬಳ್ಳಾರಿ ಬಂದ್ ಮಾಡಲಿದೆಂದು ಹೇಳಿದರು.ಸುದ್ದಿಗೋಷ್ಠಿಯಲ್ಲಿ ಮುಖಂಡರುಗಳಾದ ಜೆ.ಸತ್ಯಬಾಬು, ಚಂದ್ರಕುಮಾರಿ ಮೊದಲಾದವರು ಇದ್ದರು.

## ಮೌಢ್ಯಾಚರಣೆಗಳಿಂದ ಮುಕ್ತರಾಗಿ, ವಿಜ್ಞಾನ ಅರಿತುಕೊಳ್ಳಿ: ಸೋಮಶೇಖರ್ ಹರ್ತಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ವಿದ್ಯಾವಂತರೆ ಮೂಢನಂಬಿಕೆಗಳಿಗೆ ಅತೀ ಹೆಚ್ಚು ಬಲಿಯಾಗುತ್ತಿರುವುದು ನೋವಿನ ಸಂಗತಿ. ಮಕ್ಕಳು ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯನ್ನು ಸದುಪಯೋಗ ಪಡೆದುಕೊಳ್ಳಿ. ಮೌಢ್ಯಾಚರಣೆಗಳಿಂದ ಮುಕ್ತರಾಗಿ ವಿಜ್ಞಾನದ ಅರಿವು ಮೂಡಿಸಿ ಎಂದರು.

ಕೊಪ್ಪಳ ಜಿಲ್ಲೆಯ ಕುಕನೂರು ತಾಲ್ಲೂಕಿನ ಸರಕಾರಿ ಪದವಿ ಪೂರ್ವ ಕಾಲೇಜು ( ಪ್ರೌಢ ಶಾಲಾ ವಿಭಾಗ) ತಳಕಲ್ ಗ್ರಾಮದಲ್ಲಿ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಜಿಲ್ಲಾ ಘಟಕ,ಮಹಿಳಾ ಧ್ವನಿ ಸಂಸ್ಥೆ, ಹೈಬ್ರೀಡ್ ನ್ಯೂಸ್, ಶಾಲೆಯ ಸಿ.ವಿ.ರಾಮನ್ ಇಕೋ ಕ್ಲಬ್ ವತಿಯಿಂದ ಪವಾಡಗಳ ರಹಸ್ಯ ಬಯಲು ಹಾಗೂ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿಯ ಕೊಪ್ಪಳ ಜಿಲ್ಲಾಧ್ಯಕ್ಷರಾದ ಸೋಮಶೇಖರ್ ಹರ್ತಿ ಉದ್ಘಾಟಿಸಿ ಮಾತನಾಡಿದರು. ಪ್ರಾಸ್ತವಿಕವಾಗಿ ಪ್ರಿಯದರ್ಶಿನಿ ಮುಂಡರಗಿಮಠ ಮಾತನಾಡಿದರು.

ಮುಖ್ಯ ಗುರುಗಳಾದ ಶಂಕರಗೌಡ ವಣಗೇರಿ ಮಾತನಾಡಿ ಗ್ರಾಮೀಣ ಪ್ರದೇಶದ ಮಕ್ಕಳು ಇನ್ನೂ ಆ ಮೌಢ್ಯಾಚರಣೆಗಳಿಂದ ಹೊರಬಂದಿಲ್ಲ ಅವರಿಗೆ ಅರಿವು ಮೂಡಿಸುವುದು ಅಗತ್ಯವಿದೆ. ವಿದ್ಯಾರ್ಥಿಗಳಿಗೆ ವಿಜ್ಞಾನ ವಿಷಯವನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ ಎಂದರು. ಇದೇ ವೇಳೆ ಸಂಪನ್ಮೂಲ ವ್ಯಕ್ತಿಗಳಾದ ಅಮರೇಶ ಕಮ್ಮಾರ ಮತ್ತು ರಘುನಾಥ ಸಂಗಳದ ವಿದ್ಯಾರ್ಥಿಗಳಿಗೆ ವಿಜ್ಞಾನ ರಸ ಪ್ರಶ್ನೆ ಕಾರ್ಯಕ್ರಮ ಹಾಗೂ ಪವಾಡಗಳ ರಹಸ್ಯ ಬಯಲು ಕಾರ್ಯಕ್ರಮದ ಪ್ರಾತ್ಯಕ್ಷಿಕೆ ಪ್ರದರ್ಶನ ಮಾಡುವ ಮೂಲಕ ಮಕ್ಕಳಿಗೆ ವಿಚಾರ ಜ್ಞಾನ ಹೆಚ್ಚಿಸಿ ಅದರ ಹಿಂದಿನ ವಿಜ್ಞಾನ ಮತ್ತು ಕೈ ಚಳಕದ ಬಗ್ಗೆ ಮಕ್ಕಳಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಬಿ.ಆರ್.ಸಿ ಸಂಗಮೇಶ ತೋಟದ, ಸಾಹಿತಿ ಬಿ.ಎನ್.ಹೊರಪೇಟಿ, ಶಿಕ್ಷಕರಾದ ಕಲ್ಪನಾ, ಮಲ್ಲಪ್ಪ ಗಟ್ಟಿ,ಡಾ.ವೀಣಾ ದೇವಿ,ಉಮೇಶ ಕಮತರ ,ನಾಗರತ್ನಮ್ಮ,ಸತ್ಯಪ್ಪ ಚಲವಾದಿ, ವಾಸವಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತಿ ಇದ್ದರು. ಇದೇ ವೇಳೆ ಮುಖ್ಯ ಅತಿಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

## ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಳಕ್ಕೆ ಶ್ರಮಿಸಿ: ತಂಗಡಗಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಮಕ್ಕಳ ಭವಿಷ್ಯವನ್ನು ರೂಪಿಸುವ ಶಕ್ತಿ ಶಿಕ್ಷಕರಲ್ಲಿ ಅಡಗಿದ್ದು, ಪೂರ್ವ ಸಿದ್ಧತಾ ಪರೀಕ್ಷೆಗಳಲ್ಲಿ ಕನಿಷ್ಠ ಅಂಕಗಳ ಸಮೀಪಕ್ಕೆ ಬಂದು ಅನುತ್ತೀರ್ಣರಾಗಿರುವ ಮಕ್ಕಳ ಮೇಲೆ ವಿಶೇಷ ಕಾಳಜಿ ವಹಿಸುವ ಮೂಲಕ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ ಹೆಚ್ಚಳಕ್ಕೆ ಎಲ್ಲಾ ಶಿಕ್ಷಕರು ಶ್ರಮವಹಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್. ತಂಗಡಗಿ ಹೇಳಿದರು.

ಅವರು ಮಂಗಳವಾರ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಕೊಪ್ಪಳ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮತ್ತು ಜಿಲ್ಲೆಯ ಮುಖ್ಯೋಪಾಧ್ಯರುಗಳಿಗೆ ಕ-ರೆದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳಿಗೆ ಇನ್ನೂ ಒಂದು ತಿಂಗಳು ಮಾತ್ರ ಬಾಕಿಯಿದ್ದು, ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಕಲಿಕೆಗೆ ವಿಶೇಷ ಗಮನವನ್ನು ಹರಿಸಬೇಕು. ಈ ಅವಧಿಯನ್ನು ಮಕ್ಕಳಿಗಾಗಿಯೇ ಮೀಸಲಿಡಬೇಕು. ಮಕ್ಕಳಿಗೆ ಪರೀಕ್ಷೆಗೆ ತೇರ್ಗಡೆಗೆ ಅನುಕೂಲವಾಗುವಂತಹ ಸಾಮಾನ್ಯ ಜ್ಞಾನವನ್ನು ಹೇಳಿಕೊಡಬೇಕು. ವಿಶೇಷ ತರಗತಿಗಳ ಮೂಲಕ ಅವರ ಕಲಿಕಾ ಗುಣಮಟ್ಟದ ಹೆಚ್ಚಳಕ್ಕೆ ಕ್ರಮವಹಿಸಬೇಕು.

ಶಿಕ್ಷಕರು ಪ್ರಾಮಾಣಿಕ ಪ್ರಯತ್ನ, ಚಿಂತನೆಗಳಿಂದ ಮಕ್ಕಳ ಉತ್ತಮ ಭವಿಷ್ಯವನ್ನು ರೂಪಿಸಲು ಸಾಧ್ಯವಾಗುತ್ತದೆ. ಮಕ್ಕಳು ತಮ್ಮ ತಂದೆ-ತಾಯಿಗೆ ನೀಡುವ ಗೌರವಕ್ಕಿಂತಲೂ ಹೆಚ್ಚಾಗಿ ಗುರುಗಳಿಗೆ ಗೌರವನ್ನು ನೀಡುತ್ತಾರೆ. ಜೀವ ಉಳಿಸುವ ಶಕ್ತಿ ವೈದ್ಯರ ಕೈಯಲ್ಲಿದ್ದರೆ, ಮಕ್ಕಳ ಭವಿಷ್ಯವನ್ನು ರೂಪಿಸುವ ಶಕ್ತಿ ಗುರುಗಳಲ್ಲಿದೆ. ಈ ನಿಟ್ಟಿನಲ್ಲಿ ತಾವುಗಳು ವಿದ್ಯಾರ್ಥಿಗಳಿಗೆ ತಮ್ಮ ಮಕ್ಕಳಂತೆ ವಿಶೇಷ ಕಾಳಜಿವಹಿಸಬೇಕು. ಭವಿಷ್ಯದಲ್ಲಿ ಮಕ್ಕಳು ಉನ್ನತ ಮಟ್ಟದಲ್ಲಿ ಬೆಳೆದಾಗ, ಆ ಕೀರ್ತಿ ನಿಮಗೆ ಸಲ್ಲುತ್ತದೆ. ಶೇ.100 ರಷ್ಟು ಫಲಿತಾಂಶ ಬರುವ ಶಾಲೆಗೆ ಬಹುಮಾನವನ್ನು ನೀಡಿ ಆ ಶಾಲೆಯ ಮುಖ್ಯೋಪಾಧ್ಯಯರಿಗೆ ಮತ್ತು ಉತ್ತಮ ಸ್ಥಾನ ಪಡೆದ ಮಕ್ಕಳಿಗೆ ಸನ್ಮಾನಿಸಲಾಗುವುದು ಎಂದರು.

ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಪರೀಕ್ಷೆಗಳು ಪ್ರತಿಯೊಬ್ಬ ವಿದ್ಯಾರ್ಥಿಗೂ ಶೈಕ್ಷಣಿಕ ಜೀವನದ ಮಹತ್ವದ ಮೈಲಿಗಲ್ಲಾಗಿದೆ. ಇಲ್ಲಿಂದಲೇ ವಿದ್ಯಾರ್ಥಿಗಳ ಜೀವನದಲ್ಲಿ ತಿರುವು ಪಡೆದುಕೊಳ್ಳುತ್ತದೆ. ಹಾಗಾಗಿ ಈ ಎರಡು ಹಂತದಲ್ಲಿ ವಿದ್ಯಾರ್ಥಿಗಳು ಯಶಸ್ವಿಯಾಗಬೇಕು. ಈ ಬಗ್ಗೆ ಆಯಾ ಶಾಲಾ, ಕಾಲೇಜುಗಳ ಮುಖ್ಯಸ್ಥರ ಮೇಲೆ ಜವಾಬ್ದಾರಿ ಹೆಚ್ಚಿರುತ್ತದೆ. ಜಿಲ್ಲೆಯ ದ್ವಿತಿಯ ಪಿಯುಸಿಯ ಫಲಿತಾಂಶವು ಉತ್ತಮ ಸ್ಥಾನದಲ್ಲಿದೆ. ಇದು ಇನ್ನೂ ಉನ್ನತ ಮಟ್ಟಕ್ಕೆ ಹೋಗಬೇಕು. ಮುಖ್ಯಮಂತ್ರಿಗಳು ಪ್ರತಿ ವರ್ಷದಲ್ಲಿ ಎರಡು ಬಾರಿ ಜಿಲ್ಲಾ ಉಸ್ತುವಾರಿ ಸಚಿವರು, ಡಿಸಿ, ಸಿಇಒ ಮತ್ತು ಎಸ್.ಪಿ ಅವರೊಂದಿಗೆ ಸಭೆ ತೆಗೆದುಕೊಳ್ಳುತ್ತಾರೆ. ಆ ಸಭೆಯಲ್ಲಿ ಶಿಕ್ಷಣದ ಬಗ್ಗೆಯೇ ಪ್ರಮುಖ ಚರ್ಚೆಗಳಾಗುತ್ತವೆ. ಹಾಗಾಗಿ ನಮ್ಮ ಜಿಲ್ಲೆಯು ಶೈಕ್ಷಣಿಕ ಕ್ಷೇತ್ರದಲ್ಲಿ ಮುಂದುವರೆಯುವಂತೆ ಎಲ್ಲರೂ ಶ್ರಮಿಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ್ ಅವರು ಮಾತನಾಡಿ, ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಫಲಿತಾಂಶ ಬಹಳ ಮುಖ್ಯ, ವಿದ್ಯಾರ್ಥಿಗಳು ಜೀವನದ ತಿರುವು ಇದಾಗಿದೆ. ಒಂದನೇ ಮತ್ತು ಎರಡನೇ

ಪೂರ್ವ ಸಿದ್ದತಾ ಪರೀಕ್ಷೆಯಲ್ಲಿ ಅನುತ್ತೀರ್ಣರಾದವರನ್ನು ಉತ್ತೀರ್ಣ ಮಾಡಲು ಹೆಚ್ಚಿನ ಕ್ರಮ ವಹಿಸಬೇಕು. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಇನ್ನು ಒಂದು ತಿಂಗಳು ಮಾತ್ರ ಬಾಕಿ ಇದೆ. ಆದಷ್ಟು ವಿದ್ಯಾರ್ಥಿಗಳಿಗೆ ಹೆಚ್ಚಿನ ಅಧ್ಯಯನ ಮತ್ತು ಭೋದನೆ ಮಾಡಿ, ಮಾದರಿ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿ, ಫಲಿತಾಂಶ ಹೆಚ್ಚಳಕ್ಕೆ ಕ್ರಮ ವಹಿಸಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವರ್ಣಿತ್ ನೇಗಿ ಅವರು ಮಾತಾನಾಡಿ, ವಿದ್ಯಾರ್ಥಿಗಳು ಯಾವ ವಿಷಯ ಕಷ್ಟ ಅಂತ ಹೇಳತಾರೆ, ಅಂತಹ ವಿಷಯಗಳನ್ನು ಮತ್ತೆ ಮತ್ತೆ ಅವರಿಗೆ ಹೇಳಿ ಕೊಡಿ. ಜಿಲ್ಲೆಯ ಪ್ರತಿಯೊಬ್ಬ ವಿದ್ಯಾರ್ಥಿಗಳು ಉತ್ತೀರ್ಣರಾಗುವಂತೆ ಕ್ರಮವಹಿಸಿ. ಪೂರ್ವ ಸಿದ್ದತಾ ಪರೀಕ್ಷೆಗೆ ಯಾವೊಬ್ಬ ವಿದ್ಯಾರ್ಥಿ ಕೂಡ ಗೈರುಹಾಜರಿಯಲ್ಲಿ ಇರದಂತೆ ಸಹ ನೋಡಿಕೊಳ್ಳಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೊಪ್ಪಳ ಸಂಸದರಾದ ಕೆ.ರಾಜಶೇಖರ ಬಸವರಾಜ ಹಿಟ್ನಾಳ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಸೋಮಶೇಖರಗೌಡ ಪಾಟೀಲ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವಿಷಯ ಪರಿವೀಕ್ಷಕರು, ವಿವಿಧ ಪ್ರೌಢ ಶಾಲೆಯ ಮುಖ್ಯ ಗುರುಗಳು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ: ಸಚಿವ ತಿಮ್ಮಾಪೂರ

• ಮಲ್ಲಮ್ಮ ನುಡಿ ವಾರ್ತೆಬಾಗಲಕೋಟೆ

ನಗರದಲ್ಲಿ ಗುರುವಾರ ನಡೆದ ಕಲ್ಲು ತೂರಾಟದ ಘಟನೆಯನ್ನು ರಾಜಕೀಯವಾಗಿ ಬಳಸಿಕೊಳ್ಳುವುದು ಸರಿಯಲ್ಲ. ಇದನ್ನು ಸರ್ಕಾರ ಸಹಿಸುವುದೂ ಇಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಖಚಿತ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನಗರದಲ್ಲಿಶುಕ್ರವಾರಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾವುದೇ ಧರ್ಮದ ಅಚರಣೆಗೆ ತೊಡಕುಂಟು ಮಾಡುವುದು ತಪ್ಪು. ಜೊತೆಗೆ ಇಂತಹ ಘಟನೆಗಳು ನಡೆಯಲು ಪ್ರಚೋದನಾತ್ಮಕ ಹೇಳಿಕೆ ನೀಡುವುದನ್ನು ಸಹ ಸರ್ಕಾರ ಸಹಿಸದು ಎಂದರು.

ಗುರುವಾರದ ಘಟನೆಯ ಸಂಬಂಧ ಈಗಾಗಲೇ ಪೋಲಿಸರು 8 ಜನರನ್ನು ಬಂಧಿಸಿದ್ದು, ತಪ್ಪು ಮಾಡಿದವರನ್ನುಸುಮ್ಮನೆಬಿಡುವುದಿಲ್ಲ. ಯಾವುದೇ ವ್ಯಕ್ತಿ ತಪ್ಪಿತಸ್ಥನಾಗಿದ್ದರೆ ಅಂತವರ ವಿರುದ್ಧ ಕಠಿಣವಾದ ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದ ಸಚಿವ ತಿಮ್ಮಾಪೂರ, ನಗರದ ಎಲ್ಲ ಸಮಾಜದ ಜನ ಶಾಂತ ರೀತಿಯಿಂದ ಇದ್ದು, ಕಾನೂನು ಸುವ್ಯವಸ್ಥೆ ಕಾಪಾಡಿಕೊಂಡು ಹೋಗುವಂತೆ ಮನವಿ ಮಾಡಿದರು.

ಯಾರೂ ಕಾನೂನನ್ನು ಕೈಗೆತ್ತಿಕೊಳ್ಳಬಾರದು. ಜನರೂ ಸಹ ಭಾವೋದ್ವೇಗಕ್ಕೆ ಒಳಗಾಗಿ ರಾಜಕೀಯ ಬಲೆಗೆ ಬೀಳಬಾರದು. ಎಲ್ಲ ಧರ್ಮೀಯರು ಶಾಂತಿ, ಸೌಹಾರ್ದತೆಯಿಂದ ಇರಬೇಕು ಎಂದ ಸಚಿವರು, ಕಲ್ಲು ತೂರಾಟ-ದ ಘಟನೆಗೆ ಸಂಬಂಧಿಸಿದಂತೆ ಎಲ್ಲ ವಿವರಗಳನ್ನು ಪಡೆದು ನಿಶ್ಚಿತವಾಗಿಯೂ ತಪ್ಪಿತಸ್ಥರ ವಿರುದ್ಧ ಪೋಲಿಸ್ ಇಲಾಖೆ ಕಠಿಣವಾದ ಕ್ರಮ ಕೈಗೊಳ್ಳಲಿದೆ. ಇದರಲ್ಲಿ ಯಾವುದೇ ಸಂಶಯ ಬೇಡ ಎಂದರು.

# ಸರ್ವಜ್ಞ ಜಯಂತಿ ಆಚರಣೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಸಂತಕವಿ ಸರ್ವಜ್ಞ ಜಯಂತಿ ಅಂಗವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಶಿವಾನಂದ ಬಿ.ಕರಾಳೆ ಅವರಿಂದು ಸಂತಕವಿ ಸರ್ವಜ್ಞ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಮಾಜದ ಮುಖಂಡರು ಸೇರಿದಂತೆ ಇತರರು ಉಪಸ್ಥಿತರಿದ್ದರು.



ವಿಜಯಪುರ :ಪೊಲೀಸ್ ಅಧಿಕಾರಿಗಳಿಂದ ದ್ವಿಚಕ್ರ ವಾಹನದಿಂದ ವಶಪಡಿಸಿಕೊಂಡಿದ್ದ ಮಾರ್ಪಡಿಸಿದ (ಮಾಡಿಫೈಡ್) ಸೈಲೆನ್ಸರ್ ಅನ್ನು ನಾಶಪಡಿಸುವ ಕಾರ್ಯ ಜರುಗಿದೆ. ಪೋಲಿಸ್ ಅದಿಕ್ಷಕರಾದ ಲಕ್ಷ್ಮಣ್ ನಿಂಬರಗಿ ಅವರ ಉಪಸ್ಥಿತಿಯಲ್ಲಿ ದರ್ಗಾ ಜೈಲು ವೃತ್ತದ ಸಮೀಪದ ಕಾಂಕ್ರೀಟ್ ರಸ್ತೆಯಲ್ಲಿ ಜರುಗಿದೆ. ಕಾನೂನುಬಾಹಿರ ಹಾಗೂ ಅತಿಯಾದ ಶಬ್ದವನ್ನು ಉಂಟುಮಾಡುವ ಸೈಲೆನ್ಸರ್‌ಗಳನ್ನು ಬಳಸುತ್ತಿರುವ ವಾಹನಗಳ ವಿರುದ್ಧ ಕೈಗೊಳ್ಳುತ್ತಿರುವ ಕಠಿಣ ಕ್ರಮಗಳ ಭಾಗವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ಹಾಗೂ ಶಬ್ದ ಮಾಲಿನ್ಯ ಹೆಚ್ಚಿಸುವ ಇಂತಹ ಮಾರ್ಪಡಿಸಿದ ಸೈಲೆನ್ಸರ್‌ಗಳ ಬಳಕೆಯನ್ನು ತಡೆಯಲು ಪೊಲೀಸರು ವಿಶೇಷ ಅಭಿಯಾನ ಹಮ್ಮಿಕೊಂಡಿದ್ದು, ಮುಂದಿನ ದಿನಗಳಲ್ಲಿಯೂ ಇಂತಹ ವಾಹನಗಳ ವಿರುದ್ಧ ಪರಿಶೀಲನೆ ಮತ್ತು ಕಾನೂನು ಕ್ರಮ ಮುಂದುವರಿಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಉದ್ಯೋಗ, ಸಿರಿಧಾನ್ಯ ಮೇಳ, ಕಾರ್ಯಕ್ರಮ

• ಮಲ್ಲಮ್ಮ ನುಡಿ ವಾರ್ತೆಬೀದರ

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ ಬೀದರ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ ಹಾಗೂ ಮೀನುಗಾರಿಕೆ ಇಲಾಖೆ ಇವರ ಬೀದರ ಸಂಯುಕ್ತಾಶ್ರಯದಲ್ಲಿ ಫೆಬ್ರವರಿ.22 ರಂದು ಬೆಳಿಗ್ಗೆ 10 ಗಂಟೆಗೆ ಜಿಲ್ಲಾ ನೆಹರು ಕ್ರೀಡಾಂಗಣದಲ್ಲಿ ಉದ್ಯೋಗ ಮೇಳ, ಸಿರಿಧಾನ್ಯ ಮೇಳ, ಫಲ ಮತ್ತು ಪುಷ್ಪ ಪ್ರದರ್ಶನ ಹಾಗೂ ಮತ್ಸ್ಯ ಮೇಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಮಾಡಲಿದ್ದಾರೆ.

ಕಾರ್ಯಕ್ರಮದ ಘನ ಉಪಸ್ಥಿತಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಹಾಗೂ ಐಟಿಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಕೃಷಿ ಸಚಿವರಾದ ಎನ್.ಚೆಲುವರಾಯಸ್ವಾಮಿ, ಗಣಿ, ಭೂ ವಿಜ್ಞಾನ ಮತ್ತು ತೆ-ೋಟಗಾರಿಕೆ ಸಚಿವರಾದ ಎಸ್.ಎಸ್. ಮಲ್ಲಿಕಾರ್ಜುನ, ವೈದ್ಯಕೀಯ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಜೀವನೋಪಾಯ ಸಚಿವರಾದ ಶರಣಪ್ರಕಾಶ ರುದ್ರಪ್ಪ ಪಾಟೀಲ್, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರಾದ ಮಂಕಾಳ ಎಸ್.ವೈದ್ಯ ಅವರು ವಹಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆ ಪೌರಾಡಳಿತ ಮತ್ತು ಹಜ್ ಸಚಿವರಾದ ರಹೀಂ ಖಾನ್ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ನಾರಾಯಣರಾವ, ಔರಾದ (ಬಿ) ಶಾಸಕ ಪ್ರಭು ಬಿ.ಚವ್ಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದು ಪಾಟೀಲ ಹಾಗೂ ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ ಜಿ.ನಮೋಶಿ, ಭೀಮರಾವ ಬಿ.ಪಾಟೀಲ್, ಡಾ.ಎಂ.ಜಿ.ಮೂಳೆ ಹಾಗೂ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ ಕಲಬುರಗಿಯ ಅಧ್ಯಕ್ಷರಾದ ಬಾಬು ಹೊನ್ನನಾಯ್ಕ, ಬೀದರ ನಗರಸಭೆ ಅಧ್ಯಕ್ಷ ಮಹಮ್ಮದ ಗವಸ್, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಬೀದರ ಕೃಷಿಕ ಸಮಾಜದ ಜಿಲ್ಲಾಧ್ಯಕ್ಷ ಸಿದ್ರಾಮಯ್ಯಾ ಸ್ವಾಮಿ, ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ರಾಜ್ಯ ಪ್ರತಿನಿಧಿ ವಿಶ್ವನಾಥ ಪಾಟೀಲ ಮಾಡಗೋಳ ಅವರುಗಳು ಭಾಗವಹಿಸಲಿದ್ದಾರೆ. ಅತಿಥಿಗಳಾಗಿ ರಂದೀಪ್ ಡಿ., ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ (ಪಂಚಾಯತ ರಾಜ್), ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಆಡಳಿತಾಧಿಕಾರಿಗಲು, ಜಿಲ್ಲಾ ಪಂಚಾಯತ ಬೀದರ ಇವರು ಭಾಗವಹಿಸಲಿದ್ದಾರೆ.

# ಬಾಗಲಕೋಟೆ: ಮತ್ತೇ ಕಲ್ಲು ತೂರಾಟ ಲಾಠಿ ಚಾರ್ಜ್



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ನಗರದಲ್ಲಿ ಶಿವಾಜಿ ಜಯಂತಿ ಮೆರವಣಿಗೆ ಸಂದರ್ಭದಲ್ಲಿ ಗುರುವಾರ ನಡೆದ ಕಲ್ಲು ತೂರಾಟದ ಘಟನೆಗೆ ಸಂಬಂಧಿಸಿ ಶುಕ್ರವಾರ ಮತ್ತೆ ನಗರದಲ್ಲಿ ಕಲ್ಲು ತೂರಾಟ ನಡೆದು ಪೊಲಿಸರು ಲಾಠಿ ಬೀಸಿದ ಘಟನೆ ನಡೆಯಿತು.

ಹಿಂದು ಸಂಘಟನೆಗಳ ಕಾರ್ಯಕರ್ತರು ಮಧ್ಯಾಹ್ನದ ವೇಳೆಗೆ ಕಾಯಿಪಲ್ಲೆ ಮಾರುಕಟ್ಟೆಯ ಬಳಿ ಕಲ್ಲು ತೂರಾಟ ನಡೆಸಿ ಗಲಾಟೆ ಆರಂಭಿಸಿದ್ದು, ಗಲಾಟೆ ನಿರತರನ್ನು ಚದುರಿಸಲು ಪೋಲಿಸರು ಲಘು ಲಾಠಿ ಪ್ರಹಾರ ನಡೆಸಿದರು. ಇದೇ ವೇಳೆ ನಗರದ ಎಲ್ಲ ಅಂಗಡಿ ಮುಗ್ಗಟ್ಟುಗಳು ಮುಚ್ಚಿದವು. ಸಂಜೆವರೆಗೂ ವ್ಯಾಪಾರ ವಹಿವಾಟು ನಡೆಯಲಿಲ್ಲ.

ಬೆಳಗಾವಿ ಉತ್ತರ ವಲಯದ ಐಜಿಪಿ ಚೇತನಸಿಂಗ್ ರಾಥೋರ ನಗರಕ್ಕೆ ಆಗಮಿಸಿ ಘಟನಾ ಸ್ಥಳಗಳಿಗೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯೆಲ್ ಸೇರಿ ಪೋಲಿಸ್ ಅಧಿಕಾರಿಗಳು ನಗರದಲ್ಲಿ ಬಿಗಿ ಪೋಲಿಸ್ ಬಂದೋ ಬಸ್ತ್ ಕೈಗೊಂಡಿದ್ದು, ಸಧ್ಯಕ್ಷೆ ಪರಿಸ್ಥಿತಿ ನಿಯಂತ್ರಣದಲ್ಲಿದೆ.ಗುರುವಾರದ ಘಟನೆ: ಗುರುವಾರ ಶಿವಾಜಿ ಜಯಂತಿ ಆಚರಣೆ ಅಂಗವಾಗಿ ನಡೆದ ಮೆರವಣಿಗೆಯ ಸಂದರ್ಭದಲ್ಲಿ ನಗರದ ಪಂಕಾ ಮಸೀದಿ ಬಳಿ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯೆಲ್ ಸೇರಿ ಕೆಲವರಿಗೆ ಚಿಕ್ಕಪುಟ್ಟ ಗಾಯಗಳಾಗಿರುವ ಘಟನೆ ನಡೆಯಿತು.

ಮಧ್ಯಾಹ್ನದ ಬಳಿಕ ಮರಾಠಾ ಹಿತಚಿಂತಕ ಸಮಾಜದ ವತಿಯಿಂದ ಶಿವಾಜಿ ಮಹಾರಾಜರ ಭಾವಚಿತ್ರದ ಮೆರವಣಿಗೆ ಹೊರಟು ಸಂಜೆ ಹೊತ್ತಿಗೆ ಪಂಕಾ ಮಸೀದಿ ಬಳಿ ಬರುತ್ತಿದ್ದಂತೆ ಮೆರವಣಿಗೆ ಮೇಲೆ ದುಷ್ಕರ್ಮಿಗಳು ಕಲ್ಲು ತೂರಿದ್ದಾರೆ. ಇದರಿಂದ ಗಲಾಟೆ ಉಂಟಾಗಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು. ರಂಜಾನ್ ಆರಂಭದ ಹಿನ್ನೆಲೆಯಲ್ಲಿ ಪಂಕಾ ಮಸೀದಿಯಲ್ಲಿ ಪ್ರಾರ್ಥನೆಗೆ ಅಧಿಕ ಸಂಖ್ಯೆಯ ಜನರಿದ್ದರು.

ಕುಪಿತರಾದ ಹಿಂದು ಸಂಘಟನೆಗಳ ಕಾರ್ಯಕರ್ತರು ಮಸೀದಿಯಿಂದಲೇ ಕಲ್ಲು ತೂರಿ ಬಂದಿರುವುದಾಗಿ ಹೇಳಿ ಮಸೀದಿಯತ್ತ ನುಗ್ಗಲು ಯತ್ನಿಸಿದರು. ಈ ಸಂದರ್ಭದಲ್ಲಿ ಪೋಲಿಸರು ಹಾಗೂ ಹಿಂದು ಕಾರ್ಯಕರ್ತರ ಮಧ್ಯೆ ತಳ್ಳಾಟ, ನೂಕಾಟ ನಡೆಯಿತಾದರೂ ಪೋಲಿಸರು ಮನವೊಲಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ಶುಕ್ರವಾರ ಸಂಜೆ ನಗರದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೋಲಿಸ್ ಪಥ ಸಂಚಲನ ನಡೆಯಿತು.

# ಪರೋಪಕಾರ ಜೀವನ ನಮ್ಮದಾಗಬೇಕು


• ಮಲ್ಲಮ್ಮ ನುಡಿ ವಾರ್ತೆ ಕುಕನೂರ



ನಮ್ಮೆಲ್ಲರ ಜೀವನದ ಬದುಕು ಸಾರ್ಥಕವಾಗಬೇಕಾದರೆ ಮತ್ತೊಬ್ಬರ ಬದುಕಿನ ಬಾಳಿಗಾಗಿ ಪರೋಪಕಾರಿ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದು ರಾಜೂರಿನ ಬೃಹನ್ಮಠದ ಮ.ಘ.ಚ ಅಭಿನವ ಪಂಚಾಕ್ಷರ ಸ್ವಾಮೀಜಿ ಅವರು ಸಾನಿಧ್ಯ ವಹಿಸಿ ಅವರು ತಾಲೂಕಿನ ರಾಜೂರ ಗ್ರಾಮದ ಶರಣಬಸವೇಶ್ವರ ಬೃಹನ್ಮಠದಲ್ಲಿ 66 ನೇ ಶಿವಾನುಭವ ಗೋಷ್ಠಿಯಲ್ಲಿ ಮಾತನಾಡಿದರು. ಮಠಗಳು ಭಕ್ತರಿಗೆ ಉತ್ತಮ ಸಂಸ್ಕಾರ ಸಂಸ್ಕೃತಿ ನೀಡುವಲ್ಲಿ ಶ್ರಮಿಸುತ್ತಿವೆ, ಮಠಗಳ ಪೂಜ್ಯರ ಕೊಡುಗೆ ಅಪಾರವಾದದು ಎಂದು ನಿವೃತ್ತ ಶಿಕ್ಷಕ ಅಶೋಕ ಮಾಲಿಪಾಟೀಲ್ ಅವರು " ಜೀವನದ ಸಾರ್ಥಕ ಬದುಕು ಮತ್ತು ಪರೋಪಕಾರ ಚಿಂತನ ಗೋಷ್ಠಿಯಲ್ಲಿ ಉಪನ್ಯಾಸ ನೀಡಿದರು. ಶರಣ ಸಾಹಿತ್ಯ ಪರಿಷತ್ತು ಕಾರ್ಯದರ್ಶಿ ಶರಣಬಸಪ್ಪ ದಾನಕೈ ಉಪಸ್ಥಿತಿ ಇದ್ದರು. ಸಂಗನಾಳ ಗ್ರಾಮದ ಶರಣಪ್ಪ ಕವಳಕೇರಿ, ಶರಣಪ್ಪ ಶಿವರಡ್ಡಿ ಸಂಗೀತ ಸೇವೆ ನೀಡಿದರು. ಶೇಖರಪ್ಪ ದೇ.ಮೂಲಿಮನಿ ಭಕ್ತಿಸೇವೆ ವಹಿಸಿಕೊಂಡಿದ್ದರು. ವೀರುಪಾಕ್ಷಯ್ಯ ಬಡ್ಡಿಮಠ, ಶಿವಲಿಂಗಪ್ಪ ಕವಲೂರ ಭಾಗವಹಿಸಿದ್ದರು. ಜಗದೀಶ ಬಡಿಗೇರ ವಂದಿಸಿದರು. ಗ್ರಾಮದ ಗುರು ಹಿರಿಯರು ಭಾಗವಹಿಸಿ ಪ್ರಸಾದ ಸ್ವೀಕರಿಸಿದರು.

# ಕನೇರಿ ಶ್ರೀಗಳ ಬಗ್ಗೆ ಮೌನವೇಕೆ? ಶಾಸಕ ಯತ್ನಾಳ್‌ಗೆ ಮಾಜಿ ಸಚಿವ ಪಟ್ಟಣಶೆಟ್ಟಿ ಸವಾಲು

• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ



ನಗರದಲ್ಲಿ ಭೂ ಅಕ್ರಮ ಆರಂಭವಾಗಿರುವುದೇ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವಧಿಯಲ್ಲಿ ಮತ್ತು ಯತ್ನಾಳರಷ್ಟು ದೊಡ್ಡ ಭ್ರಷ್ಟಾಚಾರಿ ಯಾರೂ ಇಲ್ಲ ಎಂದು ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ ಯತ್ನಾಳರ ವಿರುದ್ಧ ಗುಡುಗಿದ್ದಾರೆ.

ಶಾಸಕ ಯತ್ನಾಳರ ಸಾಂಪ್ರದಾಯಿಕ ಎದುರಾಳಿ ಆಗಿರುವ ಪಟ್ಟಣಶೆಟ್ಟಿ ಅವರು ಭೂಅಕ್ರಮಗಳಲ್ಲಿ ಶಾಸಕರೇ ಭಾಗಿ, ಅಕ್ರಮ ಆಸ್ತಿ ಸಂಪಾದನೆ ಸೇರಿದಂತೆ ಅನೇಕ ವಿಷಯಗಳ ಬಗ್ಗೆ ಯತ್ನಾಳ ವಿರುದ್ಧ ಪಟ್ಟಣಶೆಟ್ಟಿ ಅವರು ಆರೋಪ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಯತ್ನಾಳ ಇತ್ತೀಚೆಗೆ ಭೂ ಕಬಳಿಕೆ ವಿಷಯವಾಗಿ ಮಾತನಾಡಿದ್ದಾರೆ. ಇದೇ ವೇಳೆ, ಕೆಲವರನ್ನು ಉದ್ದೇಶಿಸಿ, ಅವರ ಹಿಂದೆ ಮಾಜಿ ಶಾಸಕರಿದ್ದಾರೆ ಎಂದೂ ಹೇಳಿಕೆ ನೀಡಿದ್ದಾರೆ. ಹಾಗಾದರೆ, ಆ ಮಾಜಿ ಶಾಸಕ ಯಾರು ಎಂಬುದನ್ನು ಬಹಿರಂಗ ಪಡಿಸಲಿ ಎಂದು ಒತ್ತಾಯಿಸಿದರು.

ನಾನು ನಗರ ಮತಕ್ಷೇತ್ರದ ಶಾಸಕನಾಗಿ ಕೆಲಸ ಮಾಡಿದ್ದೆ. ಹೀಗಾಗಿ ಕೇವಲ ಮಾಜಿ ಶಾಸಕ ಎಂದು ಹೇಳಿದರೆ, ಸಾಲದು. ಅವರ ಹೆಸರನ್ನು ಹೇಳಬೇಕು. ಯಾಕೆ-ಂದರೆ, ಇಂತಹ ಭೂ ಅಕ್ರಮದ ವಿರುದ್ಧ ನಾನು ಧ್ವನಿ ಎತ್ತಿದ್ದೆ. ಹೋರಾಟ, ಪ್ರತಿಭಟನೆಗಳನ್ನೂ ಮಾಡಿಕೊಂಡು ಬಂದಿದ್ದೆ. ಈಗ ಕೇವಲ ಮಾಜಿ ಶಾಸಕ ಎಂದರೆ ಜನರಿಗೆ ತಪ್ಪು ಸಂದೇಶ ರವಾನಿಸಿದಂತೆ ಆಗಲಿದೆ. ಹೀಗಾಗಿ ಅವರ ಹೆಸರನ್ನು ಬಹಿರಂಗವಾಗಿ ಹೇಳಬೇಕು ಎಂದರು.

ಕೋಟ್ಯಂತರ ಮೌಲ್ಯದ ಆಸ್ತಿ ಬಂದಿದ್ದು ಹೇಗೆ?

ನಗರ ಶಾಸಕ ಯತ್ನಾಳರು ಕಳೆದ 15 ವರ್ಷಗಳಲ್ಲಿ ಕೋಟ್ಯಾಂತರ ರೂಪಾಯಿ ಆಸ್ತಿ ಮಾಡಿದ್ದು, ಅದೆಲ್ಲ ಹೇಗೆ ಸಂಪಾದನೆ ಮಾಡಿದ್ದಾರೆ?, ಅಲ್ಲದೇ, ಅನೇಕ ಯುವಕರು ಸಹ ಯತ್ನಾಳದಿಂದ ನೊಂದಿದ್ದಾರೆ ಹಾಗೂ ಮೋಸ ಹೋಗಿದ್ದಾರೆ ಎಂದು ಸಹ ಪಟ್ಟಣಶೆಟ್ಟಿ ದೂರಿದರು.

ವಿಜಯಪುರದಲ್ಲಿ ಭೂಮಿ ಕಬಳಿಕೆಯ ರೂಪುಗೊಂಡಿದ್ದೇ ಯತ್ನಾಳರು ಶಾಸಕರಾದ ನಂತರ. ಅವರೊಬ್ಬ ದೊಡ್ಡ ಭ್ರಷ್ಟಾಚಾರಿಯಾಗಿದ್ದು, ಅವರ ಅವಧಿಯಲ್ಲೇ ಅತಿ ಹೆಚ್ಚು ಭೂ ಮಾಫಿಯಾ ನಡೆದಿದೆ. 2004ರಲ್ಲಿ ನಾನು ಶಾಸಕನಾಗಿದ್ದೆ. ನಂತರ 2008ರ ಚುನಾವಣೆಯಲ್ಲಿ ನನ್ನನ್ನು ಕೆಡವಲು ಯತ್ನಾಳ ಸ್ವತಃ ಅಣ್ಣನನ್ನೇ ನಿಲ್ಲಿಸಿದ್ದರು. ಆದರೆ, ನಾನು ಒಳ್ಳೆಯ ಕೆಲಸ ಮಾಡಿದ್ದ ಕಾರಣಕ್ಕೆ ಮತ್ತೆ ಗೆಲುವು ಸಾಧಿಸಿದ್ದೆ. ನನ್ನ ಎಂಟು ವರ್ಷಗಳ ಅವಧಿಯಲ್ಲಿ ಯಾವುದೇ ಅಕ್ರಮಗಳು ನಡೆದಿಲ್ಲ. ಬಳಿಕ ಹಿಂದೂ-ಮುಸ್ಲಿಂ ವಿಚಾರದಲ್ಲಿ ನಾನು ಗೆಲ್ಲಲಿಲ್ಲ, ಯತ್ನಾಳ ಸಹ ಸೋತರು. ಆದರೆ, ನಗರದ ಅಭಿವೃದ್ಧಿಗೆ ಬೇರೆಯವರು ಏನೂ ಮಾಡಿಲ್ಲ. ಎಲ್ಲ ನಾನೇ ಮಾಡಿದ್ದೇನೆ ಎಂದು ಯತ್ನಾಳ ಹೇಳಿಕೊಳ್ಳುವುದು ಸುಳ್ಳು. ಹಲವು ಆರೋಪಗಳು ಬಂದರೂ ವರ್ಷಗಳಿಂದ ಉಳಿದುಕೊಂಡಿರುವ ಉಪ ನೊಂದಣಾಧಿಕಾರಿಯನ್ನೇ ವರ್ಗಾವಣೆ ಮಾಡಲು ಯತ್ನಾಳರಿಂದ ಆಗಿಲ್ಲ ಎಂದು ಲೇವಡಿ ಮಾಡಿದರು.

ಕನೇರಿ ಶ್ರೀಗಳ ಬಗ್ಗೆ ಮೌನವೇಕೆ?

ಹಿಂದೂತ್ವದ ಬಗ್ಗೆ ಮಾತನಾಡುವ ಯತ್ನಾಳ ಕನೇರಿ ಶ್ರೀಗಳ ವಿಷಯದಲ್ಲಿ ಯಾಕೆ ಶಾಂತವಾದರು?. ಬಬಲೇಶ್ವರದಲ್ಲಿ ಸಮಾವೇಶ ಮಾಡುತ್ತೇನೆ ಎಂದು ಘೋಷಣೆ ಮಾಡಿದ್ದೇ ಯತ್ನಾಳ. ಆದರೂ, ಬಬಲೇಶ್ವರದಲ್ಲಿ ನಡೆದ ಸಮಾವೇಶಕ್ಕೆ ಯಾಕೆ ಬರಲಿಲ್ಲ. ಇದಕ್ಕೆ ಕಾರಣವೇನು ಎಂಬುವುದನ್ನೂ ಯತ್ನಾಳ ಬಹಿರಂಗ ಪಡಿಸಲಿ ಎಂದು ಪಟ್ಟಣಶೆಟ್ಟಿ ಸವಾಲು ಹಾಕಿದರು.

# ಸ್ಮಶಾಣವು ಹಿರಿಯರ ನೆನಪುಗಳು ನೆಲೆಸಿರುವ ಒಂದು ಪವಿತ್ರ ತಾಣ: ಮುನಿರಾಜು

• ಮಲ್ಲಮ್ಮ ನುಡಿ ವಾರ್ತೆ ಪೀಣ್ಯ,ದಾಸರಹಳ್ಳಿ



'ಸ್ಮಶಾನ ಎನ್ನುವುದು ಕೇವಲ ಒಂದು ಜಾಗವಲ್ಲ, ಅದು ನಮ್ಮ ಹಿರಿಯರ ನೆನಪುಗಳು ನೆಲೆಸಿರುವ ಹಾಗೂ ಪ್ರತಿಯೊಬ್ಬರೂ ಗೌರವಿಸಬೇಕಾದ ಒಂದು ಪವಿತ್ರವಾದ ತಾಣ. ಹಾಗಾಗಿ ಈ ಪ್ರದೇಶವನ್ನು ಸಂರಕ್ಷಿಸಬೇಕಾಗಿರುವುದು ನಮ್ಮ ಕರ್ತವ್ಯ. ಈ ಕಾಮಗಾರಿಯಿಂದ ಸ್ಮಶಾಣ ಪ್ರದೇಶದ ಸುರಕ್ಷತೆ ಹೆಚ್ಚಳವಾಗುವುದರ ಜೊತೆಗೆ, ಅನಧಿಕೃತ ಪ್ರವೇಶವನ್ನು ತಡೆಯಲು ಸಹಕಾರಿ ಆಗಲಿದೆ', ಎಂದು ಶಾಸಕ ಎಸ್ ಮುನಿರಾಜು ಹೇಳಿದರು

ಕ್ಷೇತ್ರದ ಚೊಕ್ಕಸಂದ್ರದ ಸ್ಮಶಾಣದಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ಹಾಗೂ ಸ್ಥಳದ ಭದ್ರತೆ, ಸ್ವಚ್ಛತೆಯನ್ನು ಕಾಪಾಡುವ ಉದ್ದೇಶದಿಂದ ತಂತಿ ಬೇಲಿ ಅಳವಡಿಕೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಲಾರಿ ಮುನಿರಾಜು, ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಡಿ.ಎಂ ಮಂಜು, ವಾರ್ಡ್ ಅಧ್ಯಕ್ಷರಾದ ರಂಜಿತ್ ಕುಮಾರ್,

ವಾರ್ಡ್ ಪ್ರಧಾನ ಕಾರ್ಯದರ್ಶಿ ಹರೀಶ್ ಎನ್.ಪಿ ಸೇರಿದಂತೆ ಹಲವಾರು ಮುಖಂಡರು, ಕಾರ್ಯಕರ್ತರು, ಸಾರ್ವಜನಿಕರು ಉಪಸ್ಥಿತರಿದ್ದರು.

# ಮಹಿಳಾ ನೌಕರರ ಸಂಘ ಉದ್ಘಾಟನೆ, ಜಿಲ್ಲಾ ಸಮ್ಮೇಳನ ಆಯೋಜನೆ: ಪಾರ್ವತಿ ಸೋನಾರೆ



• ಮಲ್ಲಮ್ಮ ನುಡಿ ವಾರ್ತೆ ಬೀದರ್

ಈ ತಿಂಗಳ 23ರಂದು ಸೋಮವಾರ ಬೆಳಿಗ್ಗೆ 10.30 ಗಂಟೆಗೆ ನಗರದ ಡಾ.ಚನ್ನಬಸವ ಪಟ್ಟದ್ದೇವರ ರಂಗಮಂದಿರದಲ್ಲಿ ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರ ಸಂಘ ಬೀದರ್ ಜಿಲ್ಲಾ ಘಟಕ ಉದ್ಘಾಟನೆ, ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಹಾಗೂ ಸರಕಾರದ ಯೋಜನೆಗಳ ಅನುಷ್ಠಾನ ಮತ್ತು ಆಡಳಿತದಲ್ಲಿ ಮಹಿಳೆಯರ ಪಾತ್ರ ಕುರಿತು ಒಂದು ದಿನದ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾ ಅಧ್ಯಕ್ಷೆ ಪಾರ್ವತಿ ಸೋನಾರೆ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ಅನುಭವ ಮಂಟಪದ ಅಧ್ಯಕ್ಷರು ಆದ ನಾಡೋಜ ಪೂಜ್ಯ ಡಾ.ಬಸವಲಿಂಗ ಪಟ್ಟದೇವರು ಸಾನಿಧ್ಯ ವಹಿಸಲಿದ್ದು, ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಸಮಾರಂಭ ಉದ್ಘಾಟಿಸುವರು. ರಾಜ್ಯದ ಅರಣ್ಯ, ಪರಿಸರ ಹಾಗೂ ಜೀವಶಾಸ್ತ್ರ ಸಚಿವರು ಮತ್ತು ಬೀದರ್ ಜಿಲ್ಲಾ ಜಿಲ್ಲಾ ಉಸ್ತುವಾರಿ ಮಂತ್ರಿ ಈಶ್ವರ್ ಖಂಡ್ರೆ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಪೌರಾಡಳಿತ ಸಚಿವ ರಹಿಮ್ ಖಾನ್, ಸಂಸದ ಸಾಗರ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ, ಔರಾದ್ ಶಾಸಕ ಪ್ರಭು ಚೌಹಾಣ್, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ್ ದಕ್ಷಿಣ ಕ್ಷೇತ್ರದ ಶಾಸಕ ಡಾ.ಶೈಲೇಂದ್ರ ಬೆಲ್ದಾಳೆ, ಹುಮ್ನಾಬಾದ್ ಶಾಸಕ ಡಾ ಸಿದ್ದಲಿಂಗಪ್ಪ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಚಂದ್ರಶೇಖರ್ ಪಾಟೀಲ್, ಶಶಿಲ್ ಜಿ ನಮೋಶಿ, ಭೀಮರಾವ್ ಪಾಟೀಲ್.ಎಂ.ಜಿ ಮುಳೆ, ನಗರಸಭೆ ಅಧ್ಯಕ್ಷ ಮೊಹಮ್ಮದ್ ಗೌಸ್, ಬೂಡಾ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಪಂ ಸಿಇಒ ಗಿರೀಶ ಬದೌಲೆ, ಎಸ್.ಪಿ ಪ್ರದೀಪ ಗುಂಟೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಸೋಮಶೇಖರ್ ಬಿರಾದಾರ್ ಚಿದ್ರಿ, ಅಖಿಲ ಕರ್ನಾಟಕ ರಾಜ್ಯ ಸರ್ಕಾರಿ ಮಹಿಳಾ ನೌಕರರ ಸಂಘದ ರಾಜ್ಯಾಧ್ಯಕ್ಷೆ ರೋಷನಿ ಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಶಶಿಕಲಾ ಕೆ, ಕೋಶಾಧ್ಯಕ್ಷೆ ಡಾ ವೀಣಾ ಕೃಷ್ಣಮೂರ್ತಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿಯ ಉಪ ಕಾರ್ಯದರ್ಶಿ ಸುರೇಖಾ, ರಾಯಚೂರು ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕಿ ಸಿಂಧು ರಘು ಎಚ್ ಎಸ್, ಸಿದ್ದಾರೆಡ್ಡಿ ಫೌಂಡೇಶನ್ ಗೌರವಾಧ್ಯಕ್ಷೆ ಡಾ.ಗುರಮ್ಮ ಸಿದ್ದಾರೆಡ್ಡಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಗೋರವಾಲೆ ಚಂದ್ರಶೇಖರ್, ನಗರ ಸಭೆ ಸದಸ್ಯ ಡಿಗಂಬರ ಮಡಿವಾಳ, ಮಡಿವಾಳ ಸಮಾಜದ ಮುಖಂಡ ವೆಂಕಟೇಶ ಹಳುವಾಡಿ, ಕರ್ನಾಟಕ ಯುವ ಸಂಘ ಸಂಸ್ಥೆಗಳ ಒಕ್ಕೂಟದ ರಾಜ್ಯ ಪ್ರಧಾನ ಕಾರ್ಯದರ್ಶಿ ನಾಗೇಂದ್ರ ಪ್ರಸಾದ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಇದೇ ಸಂದರ್ಭದಲ್ಲಿ ಅಕ್ಕ ಪಡೆಯ ರಾಜ್ಯ ಸಂಯೋಜಕಿ ಶೈನಿ ಪ್ರದೀಪ ಗುಂಟಿ, ಔರಾದ್ ತಾಲೂಕು ವೈದ್ಯಾಧಿಕಾರಿ ಗಾಯತ್ರಿ ವಿಜಯಕುಮಾರ ಹಾಗೂ ಜ್ಯುನಿಯರ್ ಮಿಸ್ ಇಂಡಿಯಾ ಸ್ಪರ್ಧೆಯಲ್ಲಿ ಸೆಕೆಂಡ್ ರನ್ನರ್ ಆದ ಪೂರ್ವಿ ಸಂಜಯಕುಮಾರ ಅವರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಸನ್ಮಾನಿಸಲಾಗುವುದೆಂದು ತಿಳಿಸಿದರು.

ಈಗಾಗಲೇ ನಮ್ಮ ಹೋರಾಟಕ್ಕೆ ಸ್ಪಂದಿಸಿದ ರಾಜ್ಯ ಸರ್ಕಾರ ಒಂದು ದಿನದ ಮಟ್ಟಿಗೆ ಋತುಚಕ್ರ ರಜೆ ಘೋಷಣೆ ಮಾಡಿರುವುದು ಸ್ವಾಗತಾರ್ಹ ಕ್ರಮವಾಗಿದ್ದು, ಹಾಲುಣಿಸುವ ತಾಯಿಂದಿರಿಗೆ ಆಯಾ ಕಚೇರಿಗಳಲ್ಲಿ ವಿಶ್ರಾಂತಿ ಕೋಣೆ ಒದಗಿಸಬೇಕು, ಎಲ್ಲ ಜಿಲ್ಲಾ ಹಾಗೂ ತಾಲೂಜಕು ಕೇಂದ್ರಗಳಲ್ಲಿ ಅಖಿಲ ಕರ್ನಾಟಕ ಮಹಿಳಾ ನೌಕರರಿಗೆ ಕಚೇರಿ ಒದಗಿಸಬೇಕು ಅಲ್ಲದೇ ಗರ್ಭಿಣಿ ನೌಕರಸ್ತರಿಗೆ ಒಂಬತ್ತು ತಿಂಗಳು ಅವರು ಚಿಕಿತ್ಸೆಗೆ ತೆರಳಲು 9 ದಿನ ಆರೋಗ್ಯ ಚಿಕಿತ್ಸೆ ಒದಗಿಸಬೇಕೆಂದು ಸ,ಮ್ಮೇಳನದಲ್ಲಿ ಪ್ರಸ್ತಾಪಿಸಲಾಗುವುದು.

# ಯರದೊಡ್ಡಿ, ಬೈಲಗುಡ್ಡ ಸರಕಾರಿ ಜಮೀನುಗಳಲ್ಲಿ ಅಕ್ರಮ ಗಣಿಗಾರಿಕೆ

• ಮಲ್ಲಮ್ಮ ನುಡಿ ವಾರ್ತೆ ಮುದಗಲ್ಲ



ಪಟ್ಟಣ ಸಮೀಪದ ಯರದೊಡ್ಡಿ, ಬೈಲಗುಡ್ಡ, ಮಟ್ಟೂರ ಸೇರಿದಂತೆ ವಿವೀಧಡೆ ಸರಕಾರಿ ಜಮೀನು, ಗೋಮಾಳಗಳ ಮೇಲೆ ಕಣ್ಣು ಹಾಕಿರುವ ಪವನ ವಿದ್ಯುತ್ ಸ್ಥಾವರ, ರಸ್ತೆ ನಿರ್ಮಾಣದ ಹೋಣೆಹೊತ್ತವರು ಅಕ್ರಮವಾಗಿ ಮಣ್ಣು ಅಗೆದು ವಿಂಡ್ ಫ್ಯಾನ್ ತಗ್ಗು ಮಚ್ಚಲು, ರಸ್ತೆ ನಿರ್ಮಿಸಲು ಸಾರ್ವಜನಿಕರ ಆಸ್ತಿಗೆ ಹಾನಿ ಮಾಡುತ್ತಿದ್ದರೆಂದು ಆಗ್ರಹಿಸಿ ಕರವೇ ಸಂಘಟನೆ ಮಸ್ಕಿಯ ತಹಾಶೀಲ್ದಾರ ಮಂಜುನಾಥ ಭೋಗಾವತಿಗೆ ಮನವಿ ಸಲ್ಲಿಸಿ ಆಗ್ರಹಿಸಿದ್ದಾರೆ.

ಬೈಲಗುಡ್ಡ ಗ್ರಾಮದ ಸರ್ವೆ ನಂಬರ್ 24 ಹಾಗೂ ಯರದೊಡ್ಡಿಯ ಸರ್ವೆನಂ. 91ರಲ್ಲಿ ಯಾವುದೇ ಪರವಾನಿಗೆ ಇಲ್ಲದೆ ಅಕ್ರಮವಾಗಿ ಟಿಪ್ಪರ್ ಮೂಲಕ ಮಣ್ಣು ಸಾಗಿಸುತ್ತಿದ್ದಾರೆ. ಯರದೊಡ್ಡಿ ಸಿಮಾರದಲ್ಲಿ ನೀರುಪಾದೇಶ್ವರ ನಗರದ ಮಧ್ಯವರ್ತಿಗಳು ಖಾಸಗಿ ಕಂಪನಿಯವರಿಂದ ಹಣ ಪಡೆದು ಸರಕಾರಿ ಜಮೀನಿನಲ್ಲಿ ಮಣ್ಣು ಮಾರಾಟ ಮಾಡುತ್ತಿದ್ದಾರೆ ಈ ಸಂಬಂದ ಕಂದಾಯ ಇಲಾಖೆ ಅಧಿಕಾರಿಗಳ ಗಮನಕ್ಕೆ ತಂದರು ಕ್ರಮಕ್ಕೆ ಮುಂದಾಗಿಲ್ಲ, ಸರ್ಕಾರಿ ಜಮೀನನ್ನು ಸಂರಕ್ಷಣೆ ಮಾಡದೆ ಅಧಿಕಾರಿಗಳು ಕೈಚೆಲ್ಲಿ ಕುಳಿತ್ತಿದ್ದಾರೆಂದರು. ವಾಣಿಜ್ಯ ಉಪಯೋಗಕ್ಕೆ ಮಣ್ಣು ಸಾಗಿಸಲು ಸರಕಾರದ ನಿಯಮವಳಿಗಳಿಗೆ ಆದರೆ ಆದಾವುದನ್ನು ಲೇಕ್ಕಿಸದೆ ಮಣ್ಣ ಸಾಗಾಟ ಮಾಡುತ್ತಿರುವುದು ಕಂದಾಯ ಮತ್ತು ಪೊಲೀಸ ಇಲಾಖೆಯವರ ಮೇಲೆ ಸಾರ್ವಜನಿಕರು ಅನುಮಾನಪಡುವಂತಾಗಿದೆ ಎಂದರು. ಮೆದಕಿನಾಳ ಗ್ರಾಮದಿಂದ ತಲೆಕಾನ್, ದೇಸಾಯಿ ಭೋಗಪುರ್ , ಯರದೊಡ್ಡಿ ಹಾಗೂ ಹೊಕ್ರಾಣಿ ಸೇರಿದಂತೆ ಇನ್ನಿತರ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಪವನ ವಿದ್ಯುತ್ ಶಕ್ತಿಗೆ ಸಂಬಂಧಪಟ್ಟ ಬಂಕಗಳ ಬಿಡಿ ಭಾಗಗಳನ್ನು ಹೊತ್ತು ತಿರುಗುತ್ತಿರುವ ಟಾರಸ್ ಲಾರಿಗಳು ಮತ್ತು ಇದಕ್ಕೆ ಸಂಬಂಧಪಟ್ಟಂತೆ ಉಪಕರಣಗಳನ್ನು ಸಾಗಿಸುವ ವಾಹನಗಳ ಹಾವಳಿಯಿಂದ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ರಸ್ತೆಗಳ ಮಧ್ಯದಲ್ಲಿ ದೊಡ್ಡ ದೊಡ್ಡ ಪ್ರಮಾಣದ ಗುಂಡಿಗಳು ನಿರ್ಮಾಣವಾಗಿವೆ. ಹಳ್ಳಿಗಳಿಂದ ಹಳ್ಳಿಗಳಿಗೆ ಸಂಪರ್ಕ ಮಾಡುವ ಜನಸಾಮಾನ್ಯರಿಗೆ, ಶಾಲಾ ಮಕ್ಕಳಿಗೆ ಹಾಗೂ ಕೃಷಿ ಚಟುವಟಿಕೆಗಳಿಗೆ ಸಾಕಷ್ಟು ತೊಂದರೆಗಳಾಗಿವೆ. ಈ ರಸ್ತೆಗಳಿಗೆ ಸರಕಾರಿ ಬಸ್ ಆಗಲಿ, ಅಂಬೂಲೈನ್ಸಸಹ ಬರುತ್ತಿಲ್ಲ ಇದರಿಂದ ಸಾರ್ವಜನಿಕರ ಬದಕು ಹೈರಾಣಾಗಿದೆ.

ರಸ್ತೆ ಬದಿಯಲ್ಲಿರುವ ಶಾಲೆಗಳು, ಅಂಗನವಾಡಿ ಕೇಂದ್ರಗಳು, ಆಸ್ಪತ್ರೆಗಳು ಮನೆಗಳು ಧೂಳಿಂದ ಮುಚ್ಚಿಹೋಗಿವೆ. ಕೂಡಲೆ ಸರಕಾರಿ ಜಮೀನಿನಲ್ಲಿ ಅಕ್ರಮವಾಗಿ ಹಣ್ಣು ಸಾಗಿಸುವವರ ವಿರೂದ್ದ ಕ್ರಮೀನಲ್ ಪ್ರಕರಣ ದಾಖಲಿಸಬೇಕು, ರಸ್ತೆಗೆ ವಾಹನ ಸಂಚಾರಕ್ಕೆ ತೂಕದ ಮೀತಿಹೆರಬೇಕು ಹಾಗೂ ಧೂಳು ಹಬ್ಬದಂತೆ ಕ್ರಮವಹಿಸಬೇಕೆಂದು ಆಗ್ರಹಿಸಿ ಬರೆದ ಮನವಿ ಪತ್ರವನ್ನು ತಹಾಶಿಲ್ದಾರ ಮಂಜುನಾಥ ಭೋಗಾವತಿಅವರಿಗೆ ಸಲ್ಲಿಸಿದರು. ಕರವೇ ತಾಲೂಕ ಅಧ್ಯಕ್ಷ ಆರ್.ಕೆ.ನಾಯಕ, ಪ್ರಧಾನ ಕಾರ್ಯದರ್ಶಿ ದೇವಣ್ಣ ನಾಯಕ, ಮಹಾಂತೇಶ ಭಜಂತ್ರಿ ತಲೇಖಾನ, ಆನಂದ ಕುಮಾರ ಯರದೊಡ್ಡಿ, ಯಂಕಣ್ಣ ನಾಯಕ, ಮೌನೇಶ ನಾಯಕ, ಯಂಕಣ್ಣ ಯರದೊಡ್ಡಿ ಇದ್ದರು.

# ಸಂತ ಕವಿ ಸರ್ವಜ್ಞ ಜಯಂತಿ



• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಸಾಂವಿಧಾನಿಕವಾಗಿ ಶಿಕ್ಷಣದ ಅರಿವು ಮೂಡಿಸಿ ಅದನ್ನು ಅರ್ಥೈಸಿ ಅನುಷ್ಠಾನಕ್ಕೆ ತರಬೇಕಾಗಿದೆ ಆಗ ಮಾತ್ರ ನಮ್ಮ ಜೀವನದಲ್ಲಿ ಬೆಳಕಿನ ಬದುಕನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಎಂದು ನಿರುಪಾದೆಯಪ್ಪ ವಕೀಲರು ಹೇಳಿದರು.

ತಾಲೂಕು ತಹಶೀಲ್ದಾರ್ ಕಛೇರಿ ಆವರಣದಲ್ಲಿ ಸಂತ ಕವಿ ಸರ್ವಜ್ಞ ಮಹಾ ಜಯಂತಿಯನ್ನು ಅತ್ಯಂತ ಸರಳವಾಗಿ ಅರ್ಥಪೂರ್ಣವಾಗಿ ಆಚರಿಸಿದರು ನಂತರ ಸರ್ವಜ್ಞ ಜಯಂತಿ ಆಚರಣೆ ಕುರಿತು ಮಾತನಾಡಿದ ಅವರು ಯಾವುದೇ ಬಸವರಾಜ ಇಲ್ಲ ಬಸವರಸ ಇಲ್ಲದೇ ಒಂದು ಜನಾಂಗದ ಮೇಲು ಪರ್ವತ ವಾಗಿರುವ ವ್ಯಕ್ತಿಯ ವ್ಯಕ್ತಿತ್ವವನ್ನು ಅನಾವರಣ ಮಾಡುವುದು ಬಿಟ್ಟು ಆತನ ವ್ಯಕ್ತಿತ್ವಕ್ಕೆ ಕೊಡಲಿ ಪೆಟ್ಟು ಒಳಗೊಂಡಿರುವುದಕ್ಕೆ ನಾವು ದಿಕ್ಕಾರ ಎಂದು ಹೇಳಬೇಕಾಗುತ್ತದೆ ಎಂದರು. ಭ್ರಷ್ಟಾಚಾರ, ಅತ್ಯಾಚಾರ, ಅನಾಚಾರ ಇವುಗಳೆಲ್ಲವನ್ನೂ ಹೊಡೆದು ಹೊಡೆಸುವ ಶಕ್ತಿ ನಮ್ಮಲ್ಲಿ ಅಡಗಿದೆ ಎಂದು ಅತ್ಯಂತ ಮಾರ್ಮಿಕವಾಗಿ ತೋರಿಸಿಕೊಟ್ಟಿದ್ದಾರೆ. ಮತ್ತು ನಾವು ಸಂತರು. ನಾವು ಶರಣು. ನಾವು ಮಹಾ ಜ್ಞಾನಿಗಳು ಎಲ್ಲವೂ ನಮ್ಮಂದಲೇ ಹೇಳುವ ವ್ಯಕ್ತಿಗಳಿಗೆ ಮತ್ತು ನಾನು ಜಡೆ ಬಿಡುತ್ತೇನಿ. (ತಲೆ ಬೋಳುಸ್ತೀನಿ.). ಇವುಗಳೆಲ್ಲಾ ವಿಚಾರಗಳನ್ನು ಸಂತ ಕವಿ ಸರ್ವಜ್ಞ ಸಂಪೂರ್ಣವಾಗಿ ಖಂಡಿಸಿದ್ದಾರೆ. (ಏಕೆಂದರೆ ಇಲ್ಲಿ ಸತ್ಯವನ್ನು ಹೇಳಿದೇ ಮಾರೆಮಾಚಿದ್ದು)

ಹಾಗಾಗಿ ಸತ್ಯದ ಅರಿವನ್ನು ತಿಳಿಯದೆಯೇ...? ಅನಾವರಣ ಮಾಡುವುದು ಯಾಕೆ...? ಸಂತ ಕವಿ ಸರ್ವಜ್ಞ ನವರು ತನ್ನ ವಚನಗಳು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಹಾಗಾಗಿ ನಮಗೆ ಸಾಂವಿಧಾನಿಕವಾಗಿ ಶಿಕ್ಷಣ ಅರಿವು ಮೂಡಿಸಿ ಅದನ್ನು ಅರ್ಥೈಸಿ ಅನುಷ್ಠಾನಕ್ಕೆ ತಂದಾಗ ಮಾತ್ರ ನಮ್ಮ ಜೀವನದಲ್ಲಿ ಬೆಳಕನ್ನು ಕಾಣುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಆರ್ ಡಿಸಿಸಿ ಬ್ಯಾಂಕ್ ನಿರ್ದೇಶಕರು ಪಂಪನಗೌಡ ಬಾದರ್ಲಿ, ಇನ್ನೋರ್ವ ಬ್ಯಾಂಕ್ ನಿರ್ದೇಶಕರು ಸೋಮನಗೌಡ ಬಾದರ್ಲಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ದೊಡ್ಡ ಬಸವರಾಜ, ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ. ದೇಸಾಯಿ. ಖಾಜಿ ಮಲ್ಲಿಕಾ ವಕೀಲರು ಎಚ ಎನ್ ಬಡಿಗೇರ್. ಕಲ್ಲೂರು ಗೌಡ . ಜೆಡಿಎಸ್ ಪಕ್ಷದ ನಗರ ಘಟಕದ ಅಧ್ಯಕ್ಷ ರವಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಇಂದಿನಿಂದ ಸಫಾರಿ ಪುನಾರಂಭ: ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ ಮೈಸೂರು



ಮಾನವ–ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನವೆಂಬರ್ 7ರಂದು ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಫೆ.21ರಿಂದ ಷರತ್ತುಬದ್ಧವಾಗಿ ಪುನಾರಂಭಿಸಲು ನಿರ್ಧರಿಸಿದ್ದು, ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದ್ದಾರೆ.

ಮೈಸೂರಿನಲ್ಲಿಂದು ಮೈಸೂರು, ಕೊಡಗು ಮತ್ತು ಚಾಮರಾಜನಗರ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಹುತೇಕ ನಾಳೆ (ಶನಿವಾರ)ಯಿಂದ ಸಫಾರಿ ಆರಂಭಿಸಲು ಅಧಿಕೃತ ಆದೇಶ ಹೊರಡಿಸಲಾಗುವುದು. ಈ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆದರೆ, ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದರು. ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಮಾತ್ರವೇ ಬಳಕೆ ಮಾಡಬೇಕು. ಹೆಚ್ಚಾಗಿ ಬಸ್ ಗಳ ಮೂಲಕ ಸಫಾರಿ ನಡೆಸಬೇಕು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕ್ಯಾಂಪರ್ ಮತ್ತು ಜೀಪ್ ಬಳಕೆ ಮಾಡಬೇಕು ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು.

**ವನ್ಯಜೀವಿಗಳು ಕಾಡಿನಿಂದ ಹೊರಬರದಂತೆ ಕ್ರಮಕ್ಕೆ ಸೂಚನೆ:** ಬಂಡಿಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಲೋ. ಮೀಟರ್ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಇಲ್ಲಿ 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು ಕಾಡಿನ ಮಿತ್ರ ಎಂದು ನೇಮಕ ಮಾಡಿಕೊಂಡು ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಲಿಖಿತ ಮೂಲಕ ಪ್ರಸ್ತಾವನೆ ಸಲ್ಲಿಸಿ ಎಂದರು.

**ಮಾನವ ಜೀವ ರಕ್ಷಣೆ ಆದ್ಯತೆ:** ವನ್ಯಜೀವಿಗಳ ರಕ್ಷಣೆಯ ಜೊತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ. ಇದರ ಜೊತೆಗೆ ಬೆಳೆ ರಕ್ಷಣೆಗೂ ಒತ್ತು ನೀಡಬೇಕು ಎಂದರು.

ಸಫಾರಿಯಿಂದ ಬರುವ ಆದಾಯದಲ್ಲಿ ಶೇ.35ರಷ್ಟು ಹಣವನ್ನು ಅರಣ್ಯದಂಚಿನ ವಸತಿ ಪ್ರದೇಶಗಳಲ್ಲಿನ ಯುವಜನರಿಗೆ ಕೌಶಲ್ಯ ತರಬೇತಿ ನೀಡಲು, ಜಾನುವಾರುಗಳಿಗೆ ಮೇವು ಒದಗಿಸಲು, ಮಕ್ಕಳಿಗೆ ಶಿಕ್ಷಣ ಕೊಡಿಸಲು ವಿನಿಯೋಗಿಸಬೇಕು ಎಂದು ತಿಳಿಸಿದರು.

**ಸ್ಥಳೀಯರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸೂಚನೆ:** ಅರಣ್ಯ ಸಂರಕ್ಷಣೆ, ವನ್ಯಜೀವಿ ಸಂರಕ್ಷಣೆ ಆಗಬೇಕಾದರೆ ಸ್ಥಳೀಯರ ನೆರವು, ಸಹಕಾರ, ಸಹಯೋಗ ಅತ್ಯಂತ ಮುಖ್ಯ. ಈ ನಿಟ್ಟಿನಲ್ಲಿ ಅರಣ್ಯ ಸಿಬ್ಬಂದಿ ಸ್ಥಳೀಯರೊಂದಿಗೆ ಸೌಹಾರ್ದಯುತವಾಗಿ ವರ್ತಿಸಬೇಕು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅರಣ್ಯ ಸಂರಕ್ಷಣೆ ಮಾಡಬೇಕು ಎಂದರು.

# ಸ್ವಾಮಿ ವಿವೇಕಾನಂದ ಶಾಲೆಯ ಅದ್ಧೂರಿ ವಾರ್ಷಿಕೋತ್ಸವ



**ಬೆಂಗಳೂರು:** ಹೆಗ್ಗನಹಳ್ಳಿಯ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಸಂಸ್ಥಾಪಕ ಅಧ್ಯಕ್ಷರು ಹಾಗೂ ವೈದ್ಯರಾದ ಡಾ. ಬಿ.ಎಂ ಬಳ್ಳಾರಿ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಶಾಲಾ ವಾರ್ಷಿಕೋತ್ಸವವನ್ನು ರಾಜಗೋಪಾಲನಗರ ಪೊಲೀಸ್ ಠಾಣೆಯ ಅಧಿಕಾರಿ ನರಸಮ್ಮ ಹಾಗೂ ಸಮಾಜಸೇವಕ ಶ್ರೀ ಸಂಗನ ಬಸಪ್ಪ ಬಿರಾದಾರ್ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಡಾ. ಬಿ.ಎಂ ಬಳ್ಳಾರಿ, 'ಮಕ್ಕಳು ಕಲಿಯುವ ವಯಸ್ಸಿನಲ್ಲಿ ಸರಿಯಾಗಿ ವಿದ್ಯೆ ಕಲಿತರೆ ನಿಧಿ ಸಿಕ್ಕಂತೆ. ನಮ್ಮ ಶಾಲೆ ಕೇವಲ ಪಾಠ ಕಲಿಯುವ ಸ್ಥಳವಲ್ಲ, ವ್ಯಕ್ತಿತ್ವವನ್ನು ರೂಪಿಸುವ ಮತ್ತು ಪ್ರತಿಭೆಯನ್ನು ಗುರುತಿಸುವ ಪವಿತ್ರ ದೇಗುಲವಾಗಿದೆ. ಶಾಲಾ ವಾರ್ಷಿಕೋತ್ಸವವು ಕಳೆದ ಒಂದು ವರ್ಷದ ನಮ್ಮ ಸಾಧನೆಗಳನ್ನು ಮೆಲುಕು ಹಾಕುವ ಮತ್ತು ಸಂಭ್ರಮಿಸುವ ದಿನವಾಗಿದೆ', ಎಂದು ಹೇಳಿದರು. ಇದೇ ವೇಳೆ ಶಾಲೆಯಲ್ಲಿ ಏರ್ಪಡಿಸಿದ್ದ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಶಾಲಾ ವಾರ್ಷಿಕೋತ್ಸವದ ಪ್ರಯುಕ್ತ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ಕಾರ್ಯಕ್ರಮ ಆಯೋಜಿಸಲಾಗಿತ್ತು. ಪುಟಾಣಿ ಮಕ್ಕಳು ಉತ್ತಮ ಪ್ರದರ್ಶನ ನೀಡುವ ಮೂಲಕ ನೋಡುಗರ ಮನಸೂರೆಗೊಂಡರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಸಂಗನ ಬಸಪ್ಪ ಬಿರಾದಾರ್, ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ತುಳಸಿ ಪ್ರಸಾದ್, ಚಂದ್ರಶೇಖರ್, ಕೆಪಿಸಿಸಿ ಸದಸ್ಯರಾದ ಅರುಂಧತಿ ನಾಗರಾಜ್ ಸೇರಿದಂತೆ ಭಾಗಿಯಾಗಿದ್ದ ಗಣ್ಯರನ್ನು ಶಾಲೆಯ ಮುಖ್ಯಸ್ಥರಾದ ಡಾ. ಬಿ ಎಂ ಬಳ್ಳಾರಿ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ ಕಾರ್ಯದರ್ಶಿ ಡಾ. ಆರ್ ಬಿ ಬಳ್ಳಾರಿ, ಮುಖ್ಯೋಪಾಧ್ಯಾಯನಿ ಸಾಜಿಯ ಬಾನು, ಸಹ ಶಿಕ್ಷಕಿ ಅಲ್ಫಿಯಾ ಭಾನು, ಗುಲ್ಜರ್ ಬಾನು, ಮುಖಂಡರಾದ ಚಂದ್ರು, ರಾಜೇಶ್ ಸೇರಿದಂತೆ ಹಲವಾರು ಮುಖಂಡರು ಸ್ಥಳೀಯರು, ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮೆರವಣಿಗೆ ವೇಳೆ ಕಲ್ಲು ತೂರಾಟ: ಬಂಧನ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಗರದಲ್ಲಿ ಗುರುವಾರ ನಡೆದ ಮೆರವಣಿಗೆ ವೇಳೆ ಸಂಭವಿಸಿದ ಕಲ್ಲುತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ 8 ಜನರನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೆರವಣಿಗೆಯ ವೇಳೆ ಉದ್ವಿಗ್ನ ಪರಿಸ್ಥಿತಿ ಸೃಷ್ಟಿಸಿ ಕಲ್ಲು ತೂರಾಟ ನಡೆಸಿದ ತನ್ವೀರ್ ಎಂಬಾತ ಸೇರಿ ಒಟ್ಟು 8 ಜನರನ್ನು ಬಂಧಿಸಲಾಗಿದೆ ಎಂದು ಮಾಹಿತಿ ನೀಡಿದರು. ಘಟನೆಯಲ್ಲಿ ತಾವೂ ಸೇರಿದಂತೆ ಇಬ್ಬರು ಪೊಲೀಸ್ ಸಿಬ್ಬಂದಿ ಹಾಗೂ ಓರ್ವ ನಾಗರಿಕ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಚಿಕಿತ್ಸೆ ನೀಡಲಾಗಿದ್ದು, ಅವರ ಆರೋಗ್ಯಸ್ಥಿತಿ ಸ್ಥಿರವಾಗಿದೆ ಎಂದು ಎಸ್ಪಿ ತಿಳಿಸಿದರು.

ಕಲ್ಲುತೂರಾಟದ ಘಟನೆ ಬಳಿಕ ನಗರದ ತರಕಾರಿ ಮಾರುಕಟ್ಟೆ ಪ್ರದೇಶದ ಗೂಡಂಗಡಿಗೆ ಬೆಂಕಿ ಹಚ್ಚಿದ ಪ್ರಕರಣವೂ ಬೆಳಕಿಗೆ ಬಂದಿದೆ. ಸಿಸಿಟಿವಿ ದೃಶ್ಯಾವಳಿ ಹಾಗೂ ಸ್ಥಳೀಯರ ಮಾಹಿತಿಯ ಆಧಾರದ ಮೇಲೆ ಆರೋಪಿಗಳ ಗುರುತು ಪತ್ತೆ ಕಾರ್ಯ ನಡೆಯುತ್ತಿದೆ. ಶೀಘ್ರದಲ್ಲೇ ಆರೋಪಿಗಳನ್ನು ಬಂಧಿಸಲಾಗುವುದು ಎಂದು ಹೇಳಿದರು.

**ಬಿಗಿ ಭದ್ರತೆ:** ಘಟನೆ ಹಿನ್ನೆಲೆಯಲ್ಲಿ ನಗರದಲ್ಲಿ ಹೆಚ್ಚುವರಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದು, ಸಾರ್ವಜನಿಕರು ಶಾಂತಿ ಕಾಪಾಡುವಂತೆ ಹಾಗೂ ವದಂತಿಗಳಿಗೆ ಕಿವಿಗೊಡದಂತೆ ಮನವಿ ಮಾಡಲಾಗಿದೆ. ಪೊಲೀಸರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಕಾನೂನುಬಾಹಿರ ಚಟುವಟಿಕೆಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಗೋಯಲ್ ಎಚ್ಚರಿಸಿದರು.

# ಕಿಂಡರ್‌ಗಾರ್ಟನ್ ಪದವಿ ಪ್ರದಾನ

• ಮಲ್ಲಮ್ಮ ನುಡಿ ವಾರ್ತೆ ಕುಂದಾಪುರ




ಮಕ್ಕಳಲ್ಲಿ ಸಕಾರಾತ್ಮಕತೆ ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ವಿಶಿಷ್ಟ ಶಿಕ್ಷಣ ಪದ್ಧತಿ ವಿದ್ಯಾರಣ್ಯ ಇಂಗ್ಲಿಷ್ ಮಾಧ್ಯಮ ಶಾಲೆಯಲ್ಲಿ ಅನುಸರಿಸಲಾಗುತ್ತಿದೆ ಎಂದು ನೃತ್ಯನಿಕೇತನ ಕೊಡವೂರಿನ ಶಾಸ್ತ್ರೀಯ ನೃತ್ಯಕಲಾವಿದೆ ಹಾಗೂ ಕಾಂತರ ಖ್ಯಾತಿಯ 'ಕಮಲಕ್ಕ' ಪಾತ್ರಧಾರಿ ಮಾನಸಿ ಸುಧೀರ್ ಹೇಳಿದರು.

ಅವರು ಗುರುವಾರ ಕುಂದಾಪುರ ತಾಲೂಕಿನ ಯಡ್ಯಾಡಿ–ಮತ್ಯಾಡಿಯ ವಿದ್ಯಾರಣ್ಯ ಇಂಗ್ಲಿಷ್ ಮಾಧ್ಯಮ ಶಾಲೆ ಹಾಗೂ ಸುಜ್ಞಾನ ಶಿಕ್ಷಣ ಸಂಸ್ಥೆ ವತಿಯಿಂದ ವಿದ್ಯಾರಣ್ಯ ಕ್ಯಾಂಪಸ್‌ನಲ್ಲಿ ಆಯೋಜಿಸಲಾದ ನರ್ಸರಿ, ಎಲ್‌ಕೆಜಿ ಮತ್ತು ಯುಕೆಜಿ ವಿಭಾಗದ ವಿದ್ಯಾರ್ಥಿಗಳ "ಕಿಂಡರ್‌ಗಾರ್ಟನ್" ಪದವಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರಣ್ಯದಲ್ಲಿ ಮಕ್ಕಳು ಸುರಕ್ಷಿತ ವಾತಾವರಣದಲ್ಲಿ ಆತ್ಮವಿಶ್ವಾಸದಿಂದ ಬೆಳೆಯುತ್ತಿದ್ದಾರೆ. ಪ್ರತಿಯೊಂದು ಮಗುವಿನಲ್ಲಿರುವ ಉತ್ತಮ ಗುಣಗಳನ್ನು ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸುತ್ತಿರುವುದು ಶ್ಲಾಘನೀಯ. ಮಕ್ಕಳಲ್ಲಿ ಪಾಸಿಟಿವಿಟಿ ಮತ್ತು ಕಾನ್ಫಿಡೆನ್ಸ್ ಬೆಳೆಸುವ ಈ ರೀತಿಯ ಶಿಕ್ಷಣ ಪದ್ಧತಿಯನ್ನು ನಾನು ಬೇರೆಡೆ ಕಂಡಿಲ್ಲ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ 'ಆಡು ಮತ್ತು ಆಡಿನ ಮರಿ' ಹಾಗೂ 'ಗುಡುಗುಡು ಗುಮ್ಮಟ ದೇವರು' ಕಥೆಗಳನ್ನು ಮನರಂಜನಾತ್ಮಕವಾಗಿ ಹೇಳಿ ಮಕ್ಕಳನ್ನು ರಂಜಿಸಿದರು. ಮಕ್ಕಳಿಗೆ ಕಥೆಗಳನ್ನು ಹೇಳುವ ಮೂಲಕ ಅವರ ಆಲೋಚನಾ ಶಕ್ತಿ ಹಾಗೂ ಕಲ್ಪನೆ ಸಾಮರ್ಥ್ಯ ವೃದ್ಧಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

# ವೈಭವದ ಶಿವಾಜಿ ಮಹಾರಾಜರ ಜಯಂತಿ ಉತ್ಸವ

• ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ್

ನಗರದ ಮಾಣಿಕ ನಗರ ಮಹಾದ್ವಾರದ ಬಳಿ ಶಿವಾಜಿ ವೃತ್ತದಲ್ಲಿ ಮರಾಠ ಸಮಾಜದ ವತಿಯಿಂದ ಗುರುವಾರ ನಡೆದ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಉತ್ಸವ ಹಾಗೂ ತೊಟ್ಟಿಲು ಕಾರ್ಯಕ್ರಮ ಮಾಜಿ ಸಚಿವ ರಾಜಶೇಖರ ಪಾಟೀಲ್ ಚಾಲನೆ ನೀಡಿದರು.

ಬೆಳಗ್ಗೆಯಿಂದಲೇ ಶಿವಾಜಿ ವೃತ್ತದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ಬಳಿಕ ನೆರೆದ ನೂರಾರು ಮಹಿಳೆಯಿಂದ ಶಿವಾಜಿ ಮಹಾರಾಜರ ತೊಟ್ಟಿಲು ಕಾರ್ಯಕ್ರಮ ವೈಭವದಿಂದ ಜರುಗಿದವು. ನಂತರ ನಗರದ ನಾನಾ ಶಾಲೆಯ ವಿದ್ಯರ್ಥಿಗಳಿ ನೃತ್ಯ ಹಾಗೂ ವೇಷಭೂಷಣ ತೊಟ್ಟ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರರ ಕಣ್ಮನ ಸೆಳೆದವು. ಈ ಸಂದರ್ಭದಲ್ಲಿ ಎಂಎಲ್ಸಿ ಡಾ. ಚಂದ್ರಶೇಖರ ಪಾಟೀಲ್, ಎಂಎಲ್ಸಿ ಭೀಮರಾವ ಪಾಟೀಲ್, ತಹಸೀಲ್ದಾರ್ ಅಂಜುಮ್ ತಬಸುಮ್, ಪದ್ಮಾಕರ ಪಾಟೀಲ್, ರವಿ ಘವಾಳ್ಕರ್, ದೇವಾನಂದ ಘವಾಳ್ಕರ್, ವೆಂಕಟೇಶ ಜಾಧವ, ಶ್ರೀನಾಥ ದೇವಣಿ, ವಿಜಯಕುಮಾರ ನಾಥೆ, ಶಿವಕುಮಾರ ಬೆಳಕೇರಾ, ಸುರೇಶ ಘಾಂಗ್ರೆ, ಸಚಿನ ಕಲ್ಲೂರ್ ಸೇರಿ ಅನೇಕರಿದ್ದರು.



**ಬಲಿಷ್ಠರಾಷ್ಟ್ರದನಿರ್ಮಾಣಕ್ಕೆಶಿವಾಜಿಮಹಾರಾಜರು ನೀಡಿದ ಕೊಡುಗೆ ಅನನ್ಯ. ಹೀಗಾಗಿ ಎಲ್ಲರೂ ಅವರ ಸಂದೇಶಗಳನ್ನು ಪಾಲಿಸುವ ಮೂಲಕ ನಮ್ಮ ಭವ್ಯ ಪರಂಪರೆಯನ್ನು ಉಳಿಸಿ, ಬೆಳಸಬೇಕು.**

**–ರಾಜಶೇಖರ ಪಾಟೀಲ್**
**ಮಾಜಿ ಸಚಿವ, ಹುಮನಾಬಾದ್**

# ಪಟ್ಟಣ ಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆ ಇಂದು




**ಕುಕನೂರು:** ಕರ್ನಾಟಕ ಪುರಸಭೆಗಳ ಕಾಯ್ದೆಯನ್ವಯ ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣಾ ಪ್ರಕ್ರಿಯೆ ಫೆ. 21 ರಂದು ತಹಶೀಲ್ದಾರ್ ಬಸವರಾಜ್ ಬೆಣ್ಣೆಶಿರೂರು ಅವರ ಸಮ್ಮುಖದಲ್ಲಿ ನಡೆಯಲಿದೆ.


ಪಟ್ಟಣ ಪಂಚಾಯಿತಿಯ ಒಟ್ಟು 19 ಸದಸ್ಯರಲ್ಲಿ ಕಾಂಗ್ರೆಸ್ ಪಕ್ಷದ 10 ಮಂದಿ ಹಾಗೂ ಬಿಜೆಪಿ ಪಕ್ಷದ 9 ಮಂದಿ ಸದಸ್ಯರು ಇದ್ದಾರೆ. ಸದಸ್ಯರಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ.

ನಾಳೆ ಬೆಳಿಗ್ಗೆ 10ರಿಂದ 11 ಗಂಟೆಯವರೆಗೆ ನಾಮಪತ್ರ ಸಲ್ಲಿಕೆ ನಡೆಯಲಿದೆ. ಬಳಿಕ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮತದಾನ ಪ್ರಕ್ರಿಯೆ ಜರುಗಲಿದ್ದು, ಮಧ್ಯಾಹ್ನ 2 ಗಂಟೆಯ ಬಳಿಕ ಫಲಿತಾಂಶ ಪ್ರಕಟವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಹಿಂದೆ ಅಧ್ಯಕ್ಷೆಯಾಗಿದ್ದ ಲಲಿತಮ್ಮ ಯಡಿಯಾಪುರ ಹಾಗೂ ಉಪಾಧ್ಯಕ್ಷರಾಗಿದ್ದ ಪ್ರಶಾಂತ್ ಆರ್ ಬೆರಳಿನ್ ಅವರ ಅಧಿಕಾರ ಅವಧಿ 15 ತಿಂಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ರಾಜೀನಾಮೆ ನೀಡಿದ್ದು, ಅವರ ತೆರವಾದ ಸ್ಥಾನಗಳಿಗೆ ಇನ್ನುಳಿದ 15 ತಿಂಗಳ ಅವಧಿಗಾಗಿ ಈ ಚುನಾವಣೆ ನಡೆಯಲಿದೆ. ಚುನಾವಣೆಯಲ್ಲಿ ಸ್ಥಳೀಯ ಶಾಸಕರು ಹಾಗೂ ಸಂಸದರು ಮತದಾನದಲ್ಲಿ ಭಾಗವಹಿಸಲಿದ್ದಾರೆ. ಇದೇ ವೇಳೆ ಇನ್ನೂಳಿದ 15 ತಿಂಗಳ ಅಧಿಕಾರ ಅವಧಿಗೆ ಒಪ್ಪಂದದ ಮೇರೆಗೆ ಸ್ಥಾನ ಹಂಚಿಕೆ ಮಾಡಿಕೊಳ್ಳಲಾಗಿದೆ ಎಂದು ಸದಸ್ಯರು ತಿಳಿಸಿದ್ದಾರೆ.

# ಮುಸ್ಲಿಮರ ಪವಿತ್ರ ತಿಂಗಳು ರಂಜಾನ್



ಹಬ್ಬ–ಸಂಭ್ರಮ
• ಇಬ್ರಾಹಿಂ ಕೋಟ
ಉಡುಪಿ ಜಿಲ್ಲಾ ವರದಿಗಾರರು




ವಿಶ್ವದಾದ್ಯಂತ ಮುಸ್ಲಿಮರು ಭಕ್ತಿಭಾವದಿಂದ ಆಚರಿಸುವ ಪವಿತ್ರ ತಿಂಗಳು ರಂಜಾನ್ ಆರಂಭವಾಗಿದೆ.

ಇಸ್ಲಾಮಿಕ್ ಚಂದ್ರಮಾನ ಕ್ಯಾಲೆಂಡರಿನ ಒಂಬತ್ತನೇ ತಿಂಗಳಾದ ರಂಜಾನ್ ಧಾರ್ಮಿಕ ಆಚರಣೆ, ಆತ್ಮನಿಗ್ರಹ ಹಾಗೂ ದಾನಧರ್ಮದ ಮೂಲಕ ವಿಶಿಷ್ಟ ಸ್ಥಾನ ಪಡೆದಿದೆ. ಈ ಅವಧಿಯಲ್ಲಿ ಮುಸ್ಲಿಂ ಸಮುದಾಯವು ಉಪವಾಸ, ಪ್ರಾರ್ಥನೆ ಮತ್ತು ಮಾನವೀಯ ಸೇವೆಗಳಲ್ಲಿ ತೊಡಗಿಸಿಕೊಂಡು ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತದೆ.

ರಂಜಾನ್ ತಿಂಗಳಲ್ಲೇ ಪವಿತ್ರ ಗ್ರಂಥವಾದ ಕುರಾನ್ ಅವತರಣೆಯಾಗಿದೆ ಎಂದು ಇಸ್ಲಾಮಿಕ್ ಪರಂಪರೆ ಹೇಳುತ್ತದೆ. ಇದರಿಂದಾಗಿ ಈ ತಿಂಗಳು ಕುರಾನ್ ಪಠಣಕ್ಕೆ ಹಾಗೂ ಧಾರ್ಮಿಕ ಚಿಂತನೆಗೆ ವಿಶೇಷ ಮಹತ್ವ ಪಡೆದಿದೆ. ಮಸೀದಿಗಳಲ್ಲಿ ವಿಶೇಷ ತರಾವೀಹ್ ನಮಾಜ್‌ಗಳು ನಡೆಯುತ್ತಿದ್ದು, ಭಕ್ತರು ಹೆಚ್ಚಿನ ಸಮಯವನ್ನು ಪ್ರಾರ್ಥನೆಗೆ ಮೀಸಲಿಡುತ್ತಾರೆ.

**ಉಪವಾಸದ ನಿಯಮ ಮತ್ತು ಅರ್ಥ:** ರಂಜಾನ್ ಉಪವಾಸವನ್ನು 'ಸೌಮ್' ಎಂದು ಕರೆಯಲಾಗುತ್ತದೆ. ಪ್ರತಿ ದಿನ ಬೆಳಿಗಿನ ಫಜರ್ ನಮಾಜ್‌ಗೆ ಮುನ್ನ 'ಸಹರಿ' ಸೇವಿಸಿ, ಸೂರ್ಯಾಸ್ತದವರೆಗೆ ಆಹಾರ ಮತ್ತು ನೀರಿನಿಂದ ದೂರವಿರುವುದು ಉಪವಾಸದ ಪ್ರಮುಖ ಅಂಶ. ಸಂಜೆ 'ಇಫ್ತಾರ್' ಮೂಲಕ ಉಪವಾಸ ಮುಕ್ತಗೊಳ್ಳಲಾಗುತ್ತದೆ.

**ಉಪವಾಸವು ಕೇವಲ ಹಸಿವು–ಬಾಯಾರಿಕೆಯನ್ನು ತಾಳುವುದಲ್ಲ:** ಅದು ಆತ್ಮನಿಗ್ರಹ, ಸಹನೆ ಮತ್ತು ಶಿಸ್ತಿನ ಜೀವನಕ್ಕೆ ತರಬೇತಿ ನೀಡುವ ಆಧ್ಯಾತ್ಮಿಕ ಸಾಧನೆ ಎಂದು ಧಾರ್ಮಿಕ ಪಂಡಿತರು ವಿವರಿಸುತ್ತಾರೆ.

**ಜಕಾತ್ ಮತ್ತು ಸಮಾಜ ಸೇವೆ:** ಈ ತಿಂಗಳಲ್ಲಿ ಜಕಾತ್ ಹಾಗೂ ಸದಖಾ ಎಂಬ ದಾನಧರ್ಮಗಳಿಗೆ ವಿಶೇಷ ಪ್ರಾಮುಖ್ಯತೆ ನೀಡಲಾಗುತ್ತದೆ. ಆರ್ಥಿಕವಾಗಿ ಸಾಮರ್ಥ್ಯವಿರುವವರು ತಮ್ಮ ಆದಾಯದ ಒಂದು ಭಾಗವನ್ನು ಬಡವರಿಗೆ ನೀಡುವ ಮೂಲಕ ಸಮಾಜದಲ್ಲಿ ಸಮಾನತೆ ಹಾಗೂ ಸಹಾನುಭೂತಿ ಬೆಳೆಸಲು ಪ್ರಯತ್ನಿಸುತ್ತಾರೆ. ಅನೇಕ ಸಂಘಟನೆಗಳು ಹಾಗೂ ಮಸೀದಿಗಳು ಬಡವರಿಗಾಗಿ ಇಫ್ತಾರ್ ವ್ಯವಸ್ಥೆ, ಅನ್ನದಾನ ಹಾಗೂ ಅಗತ್ಯ ವಸ್ತುಗಳ ವಿತರಣೆ ನಡೆಸುತ್ತಿರುವುದು ಗಮನಾರ್ಹ.

**ಲೈಲತುಲ್ ಖದರ್ ವಿಶೇಷತೆ:** ರಂಜಾನ್‌ನ ಕೊನೆಯ ಹತ್ತು ದಿನಗಳಲ್ಲಿ ಬರುವ 'ಲೈಲತುಲ್ ಖದರ್' ಅತ್ಯಂತ ಪವಿತ್ರವಾದ ರಾತ್ರಿ ಎಂದು ಪರಿಗಣಿಸಲಾಗುತ್ತದೆ. ಈ ರಾತ್ರಿ ಮಾಡಿದ ಪ್ರಾರ್ಥನೆಗಳು ಸಾವಿರ ತಿಂಗಳಿಗಿಂತ ಶ್ರೇಷ್ಠವೆಂದು ನಂಬಲಾಗುತ್ತದೆ. ಇದರಿಂದಾಗಿ ಭಕ್ತರು ಈ ಅವಧಿಯಲ್ಲಿ ಹೆಚ್ಚುವರಿ ಪ್ರಾರ್ಥನೆ ಮತ್ತು ಧಾರ್ಮಿಕ ಆಚರಣೆಗಳಲ್ಲಿ ತೊಡಗಿರುತ್ತಾರೆ.

**ಈದ್–ಉಲ್–ಫಿತ್ರ್ ಸಂಭ್ರಮ:** ಒಂದು ತಿಂಗಳ ಉಪವಾಸದ ನಂತರ ಚಂದ್ರದರ್ಶನದೊಂದಿಗೆ ರಂಜಾನ್ ಅಂತ್ಯಗೊಳ್ಳುತ್ತದೆ. ನಂತರ ಸಂತಸದ ಹಬ್ಬವಾದ ಈದ್–ಉಲ್–ಫಿತ್ರ್ ಆಚರಿಸಲಾಗುತ್ತದೆ. ವಿಶೇಷ ನಮಾಜ್, ಬಂಧುಮಿತ್ರರ ಭೇಟಿ ಹಾಗೂ ಸಿಹಿತಿಂಡಿಗಳ ಹಂಚಿಕೆ ಮೂಲಕ ಹಬ್ಬದ ಸಂಭ್ರಮ ಮೂಡುತ್ತದೆ.

ಒಟ್ಟಾರೆ, ರಂಜಾನ್ ತಿಂಗಳು ಮುಸ್ಲಿಂ ಸಮುದಾಯದ ಧಾರ್ಮಿಕ ನಂಬಿಕೆಗಳ ಪ್ರತಿಬಿಂಬವಾಗಿದ್ದು, ಆತ್ಮಶುದ್ಧಿ ಮತ್ತು ಮಾನವೀಯ ಮೌಲ್ಯಗಳ ಬಲಪಡಿಸುವ ಅವಧಿಯಾಗಿದೆ. ಉಪವಾಸದ ಮೂಲಕ ವ್ಯಕ್ತಿಗತ ಶಿಸ್ತು ಬೆಳೆಸುವುದರ ಜೊತೆಗೆ ಸಮಾಜದ ಬಡವರ್ಗದ ಕಡೆ ಸಹಾನುಭೂತಿ ತೋರಿಸುವುದು ಈ ಪವಿತ್ರ ತಿಂಗಳ ಮುಖ್ಯ ಸಂದೇಶವಾಗಿದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)